ತಿಳಿಸತಕ್ಕದ್ದು, ಮತ್ತು ಅದನ್ನು ಹೊರಡಿಸುವ ಅಧಿಕಾರಿಯು ಅದಕ್ಕೆ ಸಹಿಯನ್ನು ಮಾಡಿರತಕ್ಕದ್ದು ಮತ್ತು ತಮ್ಮ ಮೊಹರನ್ನು ಹಾಕಿರತಕ್ಕದ್ದು; ಸಮನು ಮಾಡಲಾದ ವ್ಯಕ್ತಿಯನ್ನು, ಸದರಿ ಅಧಿಕಾರಿಯ ಮುಂದೆ ತಿಳಿಸಲಾದ ಸಮಯ ಮತ್ತು ಸ್ಥಳದಲ್ಲಿ ಹಾಜರಾಗಲು ಅಗತ್ಯಪಡಿಸತಕ್ಕದ್ದು ಮತ್ತು ಸಾಕ್ಷ್ಯವನ್ನು ನೀಡುವ ಅಥವಾ ದಾಖಲಾತಿಯನ್ನು ಹಾಜರುಪಡಿಸುವ ಉದ್ದೇಶಕ್ಕಾಗಿ ಅಥವಾ ಅವೆರಡೂ ಉದ್ದೇಶಗಳಿಗಾಗಿ ಆತನ ಹಾಜರಾತಿಯು ಅಗತ್ಯವಾಗಿದೆಯೇ ಎಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು.

(4) ವಿದ್ಯುಕ್ತ ವಿಚಾರಣೆಯನ್ನು ನಡೆಸುತ್ತಿರುವ ರೆವಿನ್ಯೂ ಅಧಿಕಾರಿಯು, ಯಾವುದೇ ದಸ್ತಾವೇಜನ್ನು ಶೋಧನೆ ಮಾಡುವ ಮತ್ತು ಹಾಜರುಪಡಿಸುವುದನ್ನು ಅಗತ್ಯಪಡಿಸಿ ನೋಟೀಸನ್ನು ಹೊರಡಿಸತಕ್ಕದ್ದು.

(5) ವಿದ್ಯುಕ್ತ ವಿಚಾರಣೆಯನ್ನು ನಡೆಸುತ್ತಿರುವ ರೆವಿನ್ಯೂ ಅಧಿಕಾರಿಯು, ಅಫಿಡಾವಿಟ್ ನಲ್ಲಿ ಸಾಕ್ಷ್ಯವನ್ನು ಪಡೆಯತಕ್ಕದ್ದು.

(6) ವಿದ್ಯುಕ್ತ ವಿಚಾರಣೆಯನ್ನು ನಡೆಸುತ್ತಿರುವ ರೆವಿನ್ಯೂ ಅಧಿಕಾರಿಯು, ಯಾವುದೇ ಕಛೇರಿಯಿಂದ ಯಾವುದೇ ಸಂಬಂಧಪಟ್ಟ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ತರಿಸಿಕೊಳ್ಳಲು ಅಗತ್ಯಪಡಿಸಬಹುದು.

(7) ಯಾರ ಸಾಕ್ಷ್ಯವನ್ನು ಅಗತ್ಯಪಡಿಸಬಹುದೋ ಆ ವ್ಯಕ್ತಿಯು, ಸಮನು ನೀಡಿದ ಅಧಿಕಾರಿಯ ಮುಂದೆ ಅನಾರೋಗ್ಯ ಅಥವಾ ಅಶಕ್ತತೆಯಿಂದ ಹಾಜರಾಗಲು ಸಾಧ್ಯವಾಗದಿರುವಾಗ, ಅಥವಾ ಆ ವ್ಯಕ್ತಿಯ ದರ್ಜೆ ಅಥವಾ ಇತರ ಯಾವುದೇ ಸಿಂಧುವಾದ ಕಾರಣದಿಂದಾಗಿ, ಸಮನು ಮಾಡುವುದು ಯುಕ್ತವಾಗದಿರುವಾಗ, ಸಮನನ್ನು ಹೊರಡಿಸುವ ಅಧಿಕಾರಿಯು, ತನ್ನ ಸ್ವಂತ ನಿರ್ಣಯದ ಮೇಲೆ, ಅಥವಾ ಯಾವ ಪಕ್ಷಕಾರನು ಸಾಕ್ಷ್ಯವನ್ನು ಅಪೇಕ್ಷಿಸಿರುವನೋ, ಆ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ, ಅಂಥ ವ್ಯಕ್ತಿಯ ಹಾಜರಾಗುವಿಕೆಗೆ ವಿನಾಯಿತಿ ಕೊಡತಕ್ಕದ್ದು ಮತ್ತು ಸಾಕ್ಷಿದಾರರ ವಿಚಾರಣೆಗಾಗಿ ಅಧಿಕಾರ ಪತ್ರವನ್ನು ಹೊರಡಿಸುವ ಮೂಲಕ ಆ ಉದ್ದೇಶಕ್ಕಾಗಿ ಅಂಥ ಅಧಿಕಾರಿಯು ನಿಯೋಜಿಸುವ ಅಧೀನ ಅಧಿಕಾರಿಯ ಮೂಲಕ ವಿಚಾರಣೆ ಮಾಡಿಸುವಂತೆ ಆದೇಶಿಸಬಹುದು ಅಥವಾ ಸರ್ಕಾರದ ಆದೇಶದ ಮೂಲಕ ಅಥವಾ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಕಾಲ ಕಳೆದುಹೋದ ಯಾವುದೇ ದಸ್ತಾವೇಜನ್ನು ಅದರ ಸಂಗ್ರಹಿಸಿದ ಸ್ಥಳದಿಂದ ತರಿಸುವುದು ಸೂಕ್ತವಾಗದಿದ್ದಾಗ, ಅಥವಾ ಅಧಿಕಾರಿಯ ಅಧಿಕಾರ ವ್ಯಾಪ್ತಿಯ ಹೊರಗೆ ಲಭ್ಯವಾಗುವಂತಿದ್ದಾಗ, ಆತನು ತನ್ನ ಸ್ವಂತ ನಿರ್ಣಯದ ಮೇಲೆ ಅಥವಾ ವ್ಯವಹರಣೆಯ ಪಕ್ಷಕಾರನ ಅರ್ಜಿಯ ಆಧಾರದ ಮೇಲೆ ಅಧೀನ ಅಧಿಕಾರಿಗೆ ದಸ್ತಾವೇಜುಗಳ ಪರೀಕ್ಷೆಗಾಗಿ ಅಧಿಕಾರ ಪತ್ರಗಳನ್ನು ಹೊರಡಿಸಬಹುದು.

(8) ವಿದ್ಯುಕ್ತ ವಿಚಾರಣೆಯನ್ನು ನಡೆಸುತ್ತಿರುವ ರೆವಿನ್ಯೂ ಅಧಿಕಾರಿಯು, ಎಲ್ಲಾ ಸಾಕ್ಷ್ಯಗಳನ್ನು, ವಾದ ಪತ್ರಗಳನ್ನು, ಪದಶಃ ವಾದವಿವಾದಗಳನ್ನು ಜಿಲ್ಲೆಯಲ್ಲಿನ ಉಪಯೋಗಕ್ಕಾಗಿ ಅಥವಾ ಜಿಲ್ಲೆಯ ಭಾಗದಲ್ಲಿನ ಉಪಯೋಗಕ್ಕಾಗಿ ಸಂಪೂರ್ಣವಾಗಿ ಕನ್ನಡ ಅಥವಾ ಇಂಗ್ಲೀಷ್‌ನಲ್ಲಿ ಅಥವಾ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಅಂಥ ಭಾಷೆಯಲ್ಲಿ ಲಿಖಿತದಲ್ಲಿ ದಾಖಲಿಸತಕ್ಕದ್ದು ಅಥವಾ ದಾಖಲಿಸುವಂತೆ ಮಾಡಿಸತಕ್ಕದ್ದು ಮತ್ತು ಅದಕ್ಕೆ ದಿನಾಂಕದೊಂದಿಗೆ ಸಹಿಯನ್ನು ಹಾಕತಕ್ಕದ್ದು.

(9) ವಿದ್ಯುಕ್ತ ವಿಚಾರಣೆಯನ್ನು ನಡೆಸುತ್ತಿರುವ ರೆವಿನ್ಯೂ ಅಧಿಕಾರಿಯು, ಎಲ್ಲಾ ಹಿತಾಸಕ್ತಿದಾರ ಪಕ್ಷಕಾರರನ್ನು ಸಮನು ಮಾಡಲಾಗಿರುವುದನ್ನು ಮತ್ತು ಅವರನ್ನು ಪ್ರತಿನಿಧಿಸುವ

ನ್ಯಾಯವಾದಿಯೊಂದಿಗೆ ಹಾಜರಿದ್ದು, ದೈನಂದಿನ ಕೇಸ್ ಶೀಟ್‌ನಲ್ಲಿ ಅವುಗಳಿಗೆ ಯುಕ್ತವಾಗಿ ಸಹಿ ಮಾಡಿರುವುದನ್ನು ಖಚಿತಪಡಿಸತಕ್ಕದ್ದು.

(10) ವಿದ್ಯುಕ್ತ ವಿಚಾರಣೆಯನ್ನು ನಡೆಸುತ್ತಿರುವ ರೆವಿನ್ಯೂ ಅಧಿಕಾರಿಯು, ಯಾರೇ ಪಕ್ಷಕಾರನು ವಾದವನ್ನು ಮಂಡಿಸಿದರೆ, ಯಾರೇ ಸಾಕ್ಷಿದಾರನನ್ನು ಪಾಟೀ ಸವಾಲು ಮಾಡಿದರೆ, ಅವಕಾಶ ನೀಡತಕ್ಕದ್ದು ಮತ್ತು ಅದನ್ನು ಪ್ರಶ್ನೋತ್ತರಗಳ ಹಾಗೂ ಪ್ರತಿಕ್ರಿಯೆಗಳ ರೂಪದಲ್ಲಿ ಪದಶಃ ಅಭಿಲೇಖಿಸತಕ್ಕದ್ದು ಅಥವಾ ಅಭಿಲೇಖಿಸುವಂತೆ ಮಾಡತಕ್ಕದ್ದು.

6-ಬಿ. ಸಂಕ್ಷಿಪ್ತ ವಿಚಾರಣೆಗಳನ್ನು ನಡೆಸುವಾಗ ರೆವಿನ್ಯೂ ಅಧಿಕಾರಿಗಳು ಅನುಸರಿಸಬೇಕಾದ ಕಾರ್ಯವಿಧಾನ.- (1) ಕರ್ನಾಟಕ ಭೂ ಕಂದಾಯ ಅಧಿನಿಯಮ ಮತ್ತು ಈ ನಿಯಮಗಳ ಮೇರೆಗೆ ಒಂದು ಸಂಕ್ಷಿಪ್ತ ವಿಚಾರಣೆಯನ್ನು ಸಾರ್ವಜನಿಕ ವಿಚಾರಣೆಯಂತೆ ನಡೆಸತಕ್ಕದ್ದು ಮತ್ತು ಪರ್ಯಾಲೋಚನೆಯ ವಿವಾದಾಂಶಗಳು, ಸಾಕ್ಷ್ಯವನ್ನು ಅಭಿಲೇಖಿಸಿದ ನಂತರದ ವಿವಾದಾಂಶಗಳನ್ನು ಕುರಿತಾದ ನಿರ್ಣಯಗಳು, ದಸ್ತಾವೇಜುಗಳ ಪರಿಶೀಲನೆ, ವಾದ ವಿವಾದಗಳ ಮೌಲ್ಯಮಾಪನಗಳನ್ನು ರೂಪಿಸುವ ಸಕಾರಣ ಆದೇಶವನ್ನು ತನ್ನ ಕೈಬರವಣಿಗೆಯಲ್ಲಿ ಆದೇಶಕ್ಕೆ ಸವಿವರವಾದ ಕಾರಣಗಳನ್ನು ನೀಡಿ, ಮುಕ್ತ ನ್ಯಾಯಾಲಯದಲ್ಲಿ ಹೊರಡಿಸತಕ್ಕದ್ದು ಮತ್ತು ಘೋಷಣೆ ಮಾಡತಕ್ಕದ್ದು.

ಪರಂತು, ವಿದ್ಯುಕ್ತ ವಿಚಾರಣೆಯನ್ನು ನಡೆಸುತ್ತಿರುವ ರೆವಿನ್ಯೂ ಅಧಿಕಾರಿಯನ್ನು ತನ್ನ ಸ್ವಂತ ಕೈಬರವಣಿಗೆಯಲ್ಲಿ ಆದೇಶವನ್ನು ಬರೆಯುವುದರಿಂದ ಪ್ರತಿಬಂಧಿಸಲ್ಪಟ್ಟಿದ್ದರೆ, ಆತನು ತನ್ನ ಕಛೇರಿಯಲ್ಲಿರುವ ಸಿಬ್ಬಂದಿಗೆ ಉಕ್ತಲೇಖನ ನೀಡಿ, ಅದನ್ನು ಬೆರಳಚ್ಚು ಮಾಡಿಸಿ, ಆದೇಶದಲ್ಲಿ ಹಾಗೆಂದು ಒಂದು ಪ್ರಮಾಣಪತ್ರವನ್ನು ಅಭಿಲೇಖಿಸತಕ್ಕದ್ದು.

(2) ವಿದ್ಯುಕ್ತ ವಿಚಾರಣೆಯನ್ನು ನಡೆಸುವ ರೆವಿನ್ಯೂ ಅಧಿಕಾರಿಯು, ಅರ್ಜಿದಾರನಾಗಿರಲಿ ಅಥವಾ ಪ್ರತ್ಯರ್ಜಿದಾರನಾಗಿರಲಿ ಯಾರೇ ವ್ಯಕ್ತಿಗೆ ನೋಟೀಸು ನೀಡುವ ಮೂಲಕ ಸಮನು ಮಾಡತಕ್ಕದ್ದು ಮತ್ತು ಆತನ ಮತ್ತು ಆಕೆಯ ಸಾಕ್ಷ್ಯವನ್ನು ದಾಖಲಿಸತಕ್ಕದ್ದು;

ಪರಂತು, ಸಮನು ಮಾಡಲಾದ ವ್ಯಕ್ತಿಗೆ ಅದರ ಒಂದು ಪ್ರತಿಯನ್ನು ನೀಡುವ ಮೂಲಕ ಅಥವಾ ಆತನೊಂದಿಗೆ ವಾಸವಿರುವ ಆತನ ಕುಟುಂಬದ ಯಾರೇ ವಯಸ್ಕ ಸದಸ್ಯನಿಗೆ ಅದರ ಒಂದು ಪ್ರತಿಯನ್ನು ನೀಡಿರುವುದು ಕಂಡುಬರದಿದ್ದರೆ ಅಥವಾ ಆತ ಸಾಮಾನ್ಯ ವಾಸಸ್ಥಳದ ಎದ್ದುಕಾಣುವ ಸ್ಥಳದಲ್ಲಿ ಅದರ ಒಂದು ಪ್ರತಿಯನ್ನು ಅಂಟಿಸುವ ಮೂಲಕ ನೋಟೀಸನ್ನು ಜಾರಿ ಮಾಡತಕ್ಕದ್ದು. ಆತನ ಸಾಮಾನ್ಯ ವಾಸಸ್ಥಳವು ಬೇರೊಂದು ಜಿಲ್ಲೆಯಲ್ಲಿದ್ದರೆ, ಸಂಬಂಧಪಟ್ಟ ಆ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಅಂಚೆಯ ಮೂಲಕ ಸಮನನ್ನು ಕಳುಹಿಸಬಹುದು, ಅವರು ಈ ಪ್ರಕರಣದ ಹಿಂದಿನ ಖಂಡಕ್ಕೆ ಅನುಸಾರವಾಗಿ ಸಮನನ್ನು ಜಾರಿ ಮಾಡಿಸತಕ್ಕದ್ದು. ವ್ಯಕ್ತಿಯು ಸಮನನ್ನು ಸ್ವೀಕರಿಸಲು ನಿರಾಕರಿಸಿದರೆ, ಆತನ ಅಥವಾ ಆಕೆಯ ಮನೆಯ ಬಾಗಿಲಿನ ಮೇಲೆ ಪ್ರಮುಖವಾಗಿ ಎದ್ದುಕಾಣುವಂತೆ ಅದನ್ನು ಅಂಟಿಸತಕ್ಕದ್ದು ಮತ್ತು ಮಹಜರನ್ನು ಸಿದ್ಧಪಡಿಸಲು ಅದು ಜಾರಿಮಾಡಿದ ಬಗೆಗಿನ ಸಾಕಷ್ಟು ರುಜುವಾತಾಗಿರತಕ್ಕದ್ದು.

ಪರಂತು, ಆ ವ್ಯಕ್ತಿಯು ನೀಡಲಾದ ವಿಳಾಸದಲ್ಲಿ ಲಭ್ಯವಿಲ್ಲದಿದ್ದರೆ, ಸಿವಿಲ್ ಪ್ರಕ್ರಿಯಾ ಸಂಹಿತೆ (ಸಿಪಿಸಿ)ಯ ನಿಯಮ 20ರ ಆದೇಶ 5ರ ಮೇರೆಗೆ ಸದರಿ ಸ್ಥಳದಲ್ಲಿ ವ್ಯಾಪಕ ಪ್ರಸಾರ ಹೊಂದಿರುವ ಸ್ಥಳೀಯ ವೃತ್ತಪತ್ರಿಕೆಯಲ್ಲಿ ಒಂದು ಸಾರ್ವಜನಿಕ ನೋಟೀಸನ್ನು ಹೊರಡಿಸತಕ್ಕದ್ದು.

(3) ಪ್ರತಿಯೊಂದು ಸಮನು ಲಿಖಿತದಲ್ಲಿರತಕ್ಕದ್ದು, ದ್ವಿಪ್ರತಿಯಲ್ಲಿರತಕ್ಕದ್ದು, ನಿರ್ದಿಷ್ಟಪಡಿಸಿದ ನಮೂನೆಯಲ್ಲಿರತಕ್ಕದ್ದು ಮತ್ತು ಅದನ್ನು ಹೊರಡಿಸಿದ ಉದ್ದೇಶವನ್ನು ತಿಳಿಸತಕ್ಕದ್ದು, ಮತ್ತು

ಅದನ್ನು ಹೊರಡಿಸುವ ಅಧಿಕಾರಿಯು ಸಹಿಯನ್ನು ಮಾಡಿರತಕ್ಕದ್ದು ಮತ್ತು ತಮ್ಮ ಮೊಹರನ್ನು ಹಾಕಿರತಕ್ಕದ್ದು: ಸಮನು ಮಾಡಲಾದ ವ್ಯಕ್ತಿಯನ್ನು ಸದರಿ ಅಧಿಕಾರಿಯ ಮುಂದೆ ತಿಳಿಸಲಾದ ಸಮಯ ಮತ್ತು ಸ್ಥಳದಲ್ಲಿ ಹಾಜರಾಗಲು ಅಗತ್ಯಪಡಿಸತಕ್ಕದ್ದು ಮತ್ತು ಸಾಕ್ಷ್ಯವನ್ನು ನೀಡುವ ಉದ್ದೇಶಕ್ಕಾಗಿ ಅಥವಾ ದಾಖಲಾತಿಯನ್ನು ಹಾಜರುಪಡಿಸುವ ಅಥವಾ ಅವೆರಡೂ ಉದ್ದೇಶಗಳಿಗಾಗಿ ಆತನ ಹಾಜರಾತಿಯು ಅಗತ್ಯವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು.

(4) ಸಂಕ್ಷಿಪ್ತ ವಿಚಾರಣೆಯನ್ನು ನಡೆಸುವ ರೆವಿನ್ಯೂ ಅಧಿಕಾರಿಯು, ಅಫಿಡಾವಿಟ್ ನ ಮೇಲೆ ಸಾಕ್ಷ್ಯವನ್ನು ಪಡೆಯತಕ್ಕದ್ದು.

(5) ಸಂಕ್ಷಿಪ್ತ ವಿಚಾರಣೆಯನ್ನು ನಡೆಸುವ ರೆವಿನ್ಯೂ ಅಧಿಕಾರಿಯು, ಯಾವುದೇ ಕಚೇರಿಯಿಂದ ಯಾವುದೇ ಸಂಬಂಧಪಟ್ಟ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕೋರಬಹುದು.

(6) ಸಂಕ್ಷಿಪ್ತ ವಿಚಾರಣೆಯನ್ನು ನಡೆಸುವ ರೆವಿನ್ಯೂ ಅಧಿಕಾರಿಯು ಯಾವುದೇ ಅಂಥ ವಿಚಾರಣೆಯನ್ನು ನಡೆಸುತ್ತಿರುವಾಗ, ಹಿತಾಸಕ್ತಿಯುಳ್ಳ ಪಕ್ಷಕಾರರು ಮಾಡಿದ ಪ್ರಧಾನ ಸಮರ್ಥನೆಗಳು, ಸಾಕ್ಷ್ಯದ ಮುಖ್ಯ ಭಾಗಗಳು, ನಿರ್ಣಯ ಮತ್ತು ಅದಕ್ಕಾಗಿ ಇರುವ ಕಾರಣಗಳನ್ನು ಒಳಗೊಂಡಂತೆ ವ್ಯವಹರಣೆಗಳ ನಡವಳಿಕೆಯ ದಾಖಲೆಯನ್ನು ತನ್ನ ಸ್ವಹಸ್ತಾಕ್ಷರದಲ್ಲಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ದಾಖಲಿಸತಕ್ಕದ್ದು ಅಥವಾ ದಾಖಲಿಸುವಂತೆ ಮಾಡತಕ್ಕದ್ದು:

ಪರಂತು, ಅಂಥ ಅಧಿಕಾರಿಯು ತಾನು ಸೂಕ್ತವೆಂದು ಭಾವಿಸಿದರೆ, ಸಂಕ್ಷಿಪ್ತ ವಿಚಾರಣೆಗೆ ಅನ್ವಯವಾಗುವ ಎಲ್ಲಾ ಅಥವಾ ಯಾವುದೇ ನಿಯಮಗಳ ಮೇರೆಗೆ ಕ್ಷಿಪ್ರವಾಗಿ ಅಧಿನಿಯಮದ ಮೂಲಕ ನಿರ್ದೇಶಿಸಿದ ವಿಚಾರಣೆಯನ್ನು ನಡೆಸುವುದು ಅಂಥ ಅಧಿಕಾರಿಗೆ ಯಾವುದೇ ಸಮಯದಲ್ಲಿ ಅದು ಕಾನೂನುಬದ್ಧವಾಗಿರತಕ್ಕದ್ದು."

4. ಹೊಸ ನಿಯಮ 8ಎ, 8ಬಿ ಯ ಸೇರ್ಪಡೆ.- ಸದರಿ ನಿಯಮಗಳ 8ನೇ ನಿಯಮದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**8ಎ. ಅಂತರ್ನಿಹಿತ ಅಧಿಕಾರಗಳನ್ನು ಚಲಾಯಿಸುವುದು.-** ಅಂತರ್ನಿಹಿತ ಅಧಿಕಾರವನ್ನು ಸ್ವಪ್ರೇರಣೆಯಿಂದ ಚಲಾಯಿಸಿದ್ದರೆ, ಅಧಿಕಾರವ್ಯಾಪ್ತಿಯಿಲ್ಲದೆ ಆದೇಶವನ್ನು ಮಾಡಿದಾಗ ಅಥವಾ ಆದೇಶವನ್ನು ಮಾಡಲಾಗಿದ್ದರೆ ಮತ್ತು ಅದರ ವಿರುದ್ಧ ಯಾವುದೇ ಅಪೀಲನ್ನು ಸಲ್ಲಿಸದಿದ್ದರೆ ರೆವಿನ್ಯೂ ನ್ಯಾಯಾಲಯದ ಗಮನಕ್ಕೆ ಬಾರದಿರುವ ಹೊಸ ಮತ್ತು ಮಹತ್ವದ ವಿಷಯ ಅಥವಾ ಸಾಕ್ಷ್ಯವನ್ನು ಕಂಡುಹಿಡಿದ ಮೇಲೆ ಮಾತ್ರ ರೆವಿನ್ಯೂ ನ್ಯಾಯಾಲಯದ ಆದೇಶದ ಆರು ತಿಂಗಳೊಳಗೆ ಅದನ್ನು ಮಾಡತಕ್ಕದ್ದು. ಅಧಿಕಾರವನ್ನು ಸ್ವಪ್ರೇರಣೆಯಿಂದ ಚಲಾಯಿಸಲಾಗಿದೆಯೇ ಅಥವಾ ಅದರಲ್ಲಿನ ಅರ್ಜಿದಾರ ಅಥವಾ ಪ್ರತ್ಯರ್ಜಿದಾರನು ಅರ್ಜಿಯನ್ನು ಸಲ್ಲಿಸಿದ್ದಾನೆಯೇ ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ, ಪುನರವಲೋಕನ ಅಧಿಕಾರವನ್ನು ಚಲಾಯಿಸುವ ರೆವಿನ್ಯೂ ನ್ಯಾಯಾಲಯವು ಅಧೀನ ಸಕ್ಷಮ ಪ್ರಾಧಿಕಾರದಿಂದ ವಿಷಯದ ಬಗ್ಗೆ ವರದಿಯನ್ನು ಪಡೆದುಕೊಳ್ಳಬಹುದು ಮತ್ತು ಅಂಥ ವರದಿಯನ್ನು ಸ್ವೀಕರಿಸುವವರೆಗೆ ಮತ್ತು ಮೇಲ್ನೋಟಕ್ಕೆ ದಾಖಲೆಯ ಮೇಲಿನಿಂದಲೇ ದೋಷ ಅಥವಾ ತಪ್ಪನ್ನು ಸೂಚಿಸುವವರೆಗೆ ಯಾವುದೇ ತಡೆಯನ್ನು ನೀಡತಕ್ಕದ್ದಲ್ಲ. ಆದಾಗ್ಯೂ, 8ನೇ ನಿಯಮದ ಮೇರೆಗೆ ನೋಟೀಸನ್ನು ನೀಡದೆ ಆದೇಶದಿಂದ ಬಾಧಿತರಾಗಬಹುದಾದ ಎಲ್ಲಾ ಪಕ್ಷಕಾರರಿಗೆ ಯಾವುದೇ ಅಂತಿಮ ಪುನರವಲೋಕನ ಆದೇಶವನ್ನು ಮಾಡತಕ್ಕದ್ದಲ್ಲ."

8ಬಿ : ತನಿಖೆ ನಡೆಸುವ ಅಥವಾ ಮೊಕದ್ದಮೆಗಳ ಬಗ್ಗೆ ವಿಚಾರಣೆ ನಡೆಸುವ ಸ್ಥಳ:- ಅಧಿನಿಯಮದ 26ನೇ ಪ್ರಕರಣದ ಉದ್ದೇಶಗಳಿಗಾಗಿ, ಅಧಿಕಾರವ್ಯಾಪ್ತಿ ಎಂಬುದನ್ನು ಪ್ರಾದೇಶಿಕ ಅಧಿಕಾರವ್ಯಾಪ್ತಿ ಎಂಬುದಾಗಿ ಅರ್ಥೈಸಿಕೊಳ್ಳತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಪರಿಭಾಷಿಸಲಾದಂತೆ ನ್ಯಾಯಲಯ ಮೊಕದ್ದಮೆ ಅಥವಾ ನ್ಯಾಯಿಕ ವ್ಯವಹರಣೆಯ ಸಂದರ್ಭದಲ್ಲಿ ಸ್ಥಳೀಯ ಸರಹದ್ದುಗಳು ಎಂಬುದನ್ನು ರೆವಿನ್ಯೂ ಅಧಿಕಾರಿಯ ಅಧಿಕೃತ ಕಾರ್ಯಸ್ಥಾನ ಎಂಬುದಾಗಿ ಅರ್ಥೈಸಿಕೊಳ್ಳತಕ್ಕದ್ದು. ಮತ್ತು ಯಾವುದೇ ಇತರ ವಿಚಾರಣೆಯ ಸ್ಥಳದ ಸ್ಥಳೀಯ ಸರಹದ್ದುಗಳು ಎಂಬುದಾಗಿ ಅರ್ಥೈಸಿಕೊಳ್ಳತಕ್ಕದ್ದು.

5. ಹೊಸ ನಿಯಮ 9ಎ ಯ ಸೇರ್ಪಡೆ.- ಸದರಿ ನಿಯಮಗಳ 9ನೇ ನಿಯಮದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

ನಿಯಮ 9ಎ. ಯಾರೇ ಒಬ್ಬ ಕಾರ್ಯಾರ್ಥ ಕಾನೂನು ನ್ಯಾಯವಾದಿಯು ವಕಾಲತ್ ನಾಮವನ್ನು ಸಲ್ಲಿಸಬಹುದು.-

ಯಾರೇ ನ್ಯಾಯವಾದಿಯು, ಆತನು ಅಂಥ ವ್ಯಕ್ತಿ ಅಥವಾ ಆತನು ಗುರುತು ಮಾಡಿದ ಏಜೆಂಟ್ ಅಥವಾ ಅಂಥ ನೇಮಕಾತಿಯನ್ನು ಮಾಡುವ ಮುಖ್ತ್ಯಾರನಾಮೆಯ ಮೂಲಕ ಅಥವಾ ಮೇರೆಗೆ ಯುಕ್ತವಾಗಿ ಅಧಿಕೃತನಾದ ಬೇರೆ ಯಾರೇ ವ್ಯಕ್ತಿಯು ಸಹಿ ಮಾಡಿದ ವಕಾಲತ್ ನಾಮದ ಮೂಲಕ ಆ ಉದ್ದೇಶಕ್ಕಾಗಿ ನೇಮಕಗೊಂಡ ಹೊರತು ನ್ಯಾಯಾಲಯದಲ್ಲಿ ಯಾರೇ ವ್ಯಕ್ತಿಯ ಪರವಾಗಿ ಕಾರ್ಯನಿರ್ವಹಿಸತಕ್ಕದ್ದಲ್ಲ:

ಪರಂತು, ಒಬ್ಬ, ನ್ಯಾಯವಾದಿಯು, ಆತನ ವಕಾಲತ್ ವಹಿಸಿಕೊಂಡಿರುವ, ಮೊಕದ್ದಮೆಗೆ ಖುದ್ದಾಗಿ ಹಾಜರಾಗಲು ಸಾಧ್ಯವಾಗದಿದ್ದಾಗ, ಆತನು ಅಂಥ ಅಧಿಕಾರವನ್ನು ಲಿಖಿತದಲ್ಲಿ ನೀಡಿದ ಅನಂತರ ವಕಾಲತ್ ನಾಮವನ್ನು ಸಲ್ಲಿಸದೆಯೇ ಮತ್ತೊಬ್ಬ ನ್ಯಾಯವಾದಿಗೆ, ಮೊಕದ್ದಮೆಯನ್ನು ವಹಿಸಬಹುದು.

6. 15ನೇ ನಿಯಮದಲ್ಲಿ ವಿವರಣೆಯ ಸೇರ್ಪಡೆ. – **15ನೇ ನಿಯಮದಲ್ಲಿ ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು, ಎಂದರೆ :-**

ವಿವರಣೆ:- ಈ ನಿಯಮದ ಉದ್ದೇಶಗಳಿಗಾಗಿ, "ಕಚೇರಿ ವೇಳೆಗಳು'' ಎಂಬುದು ಸಂಬಂಧಿಸಿದ ಕಚೇರಿಯು ತೆರೆದಿರುವಂಥ ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದಂತೆ "ಕೆಲಸದ ದಿನಗಳು'' ಗಳಲ್ಲಿ ನಿಯತ ಸೇವೆಗಳು ಮತ್ತು ಪರಸ್ಪರ ಕಾರ್ಯ ನಡೆಸುವಿಕೆಗಾಗಿ ಸಾರ್ವಜನಿಕರಿಗೆ ಅಥವಾ ಅವರ ಕಕ್ಷಿದಾರರಿಗೆ ಲಭ್ಯವಿರುವ ನಿರ್ದಿಷ್ಟ ಕಾಲಾವಧಿಯನ್ನು ಸೂಚಿಸುತ್ತದೆ.

7. 15ಎ. 15ಬಿ ಮತ್ತು 15ಸಿ ಹೊಸ ನಿಯಮಗಳ ಸೇರ್ಪಡೆ:- ಸದರಿ ನಿಯಮಗಳ 15ನೇ ನಿಯಮದ ತರುವಾಯ, ಈ ಮುಂದಿನ ಹೊಸ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ:-

"ನಿಯಮ 15ಎ. ದೋಷಪೂರ್ಣ ಅರ್ಜಿ ಅಥವಾ ಆಕ್ಷೇಪಣೆಯ ಅಪೀಲಿನ ವಿವರಣ ಪತ್ರವನ್ನು ಸ್ವೀಕರಿಸಬಾರದು:-

ರೆವಿನ್ಯೂ ನ್ಯಾಯಲಯ ಸಲ್ಲಿಸಿದ ಯಾವುದೇ ಸ್ವರೂಪದ ಎಲ್ಲಾ ವಾದ ಪ್ರತಿವಾದಗಳು, ಅರ್ಜಿಗಳು ಮತ್ತು ಮನವಿಗಳು ಮತ್ತು ಪ್ಲೀಡರ್‌ಗಳು ಅಥವಾ ಅಡ್ವೊಕೇಟ್‌ಗಳ ಮುಖ್ತ್ಯಾರನಾಮೆ ಮತ್ತು ಪ್ರಮಾಣಪತ್ರಗಳೆಲ್ಲವೂ ಲೀಗಲ್ ಸೈಜ್ ಪೇಪರ್‌ನ ಒಂದು ಕಡೆ ಮಾತ್ರವೇ ಬಿಳಿ ಹಾಳೆಯಲ್ಲಿ ಸ್ಪಷ್ಟವಾಗಿ ಕೈಯಲ್ಲಿ ಬರೆದಿರತಕ್ಕದ್ದು ಅಥವಾ ಟೈಪ್ ಮಾಡಿರತಕ್ಕದ್ದು ಮತ್ತು ಪ್ರತಿಯೊಂದರ ಮೆಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ಒಂದು ಇಂಚು ಜಾಗದ ಜೊತೆಗೆ ಕಾಲು ಭಾಗ ಮಾರ್ಜಿನ್ (ಅಂತರ) ವೂ ಬೈಂಡ್ ಮಾಡುವುದಕ್ಕೆ ಇರತಕ್ಕದು. ಪರಂತು, ಯಾವುದೇ ಉದ್ದೇಶಕ್ಕಾಗಿ, ಮಾರಾಟ

ಮಾಡಬಹುದಾದ ನಮೂನೆಗಳನ್ನು ನಿಯಮಿಸಿರುವಾಗ ಲಭ್ಯವಿದ್ದರೆ ಅವುಗಳನ್ನು ಉಪಯೋಗಿಸತಕ್ಕದ್ದು.

ನಿಯಮ 15ಬಿ ಅರ್ಜಿಗಳ ನಮೂನೆ. –

ಅಂತಿಮ ಅಮಲ್ದಾರಿಯನ್ನು ಹೂಡುವುದರಿಂದ ದಾವೆಯಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಪ್ರತಿಯೊಂದು ಅರ್ಜಿ, ಮನವಿ, ಆದೇಶಿಕೆ, ನೋಟಿಸು, ಆದೇಶ, ವ್ಯವಹರಣೆಗಳ ಈ ಮುಂದಿನ ಕ್ರಮದಲ್ಲಿ ಮೊದಲ ಪುಟದ ಬಲಗಡೆಯ ಮೆಲ್ಭಾಗದಲ್ಲಿರತಕ್ಕದ್ದು.

(i) ದಾವೆ ಅಥವಾ ಅರ್ಜಿಯನ್ನು ಹೂಡಿರುವಂಥ ನ್ಯಾಯಾಲಯದ ಹೆಸರು.

(ii) ದಾವೆ ಅಥವಾ ಅರ್ಜಿಯ ವಸ್ತು ವಿಷಯ,

(iii) ದಾವೆಗೆ ಸಂಬಂಧಿಸಿದ ದಪ್ಪ ಮತ್ತು ಸ್ಪಷ್ಟ ಹಸ್ತಾಕ್ಷರದಲ್ಲಿ ಪಕ್ಷಕಾರರ ಹೆಸರುಗಳು, ಅವರ ತಂದೆ-ತಾಯಿ ಹೆಸರು, ವಯಸ್ಸು ಮತ್ತು ಪಕ್ಷಕಾರರ ವಾಸಸ್ಥಳ.

ನಿಯಮ 15ಸಿ ಪಕ್ಷಕಾರನು ವ್ಯಾಜ್ಯಕಾಲೀನ ಅವಧಿಯಲ್ಲಿ ಮರಣಹೊಂದಿದಾಗ ಅರ್ಜಿ ಅಥವಾ ಅಪೀಲಿನ ತಿದ್ದುಪಡಿ. – ಪಕ್ಷಕಾರನು ವ್ಯಾಜ್ಯಕಾಲೀನ (ವ್ಯಾಜ್ಯದ ಅವಧಿಯಲ್ಲಿ) ಅವಧಿಯಲ್ಲಿ ಮರಣ ಹೊಂದಿದಾಗ, ಮರಣ ಹೊಂದಿರುವರೆಂದು ಟಿಪ್ಪಣಿಯನ್ನು ಪಕ್ಷಕಾರನ ಹೆಸರಿನ ಮುಂದೆ ಸೇರಿಸತಕ್ಕದ್ದು ಮನವಿ ಅಥವಾ ವಾದ ಪ್ರತಿವಾದದ ಮುಖ್ಯ ಭಾಗದಲ್ಲಿ ಅವಶ್ಯಕ ತತ್ಪರಿಣಾಮವಾದ ತಿದ್ದುಪಡಿಯನ್ನು ಮಾಡಿ ಕಾನೂನುಸಮ್ಮತ ವಾರಸುದಾರರನ್ನು ದಾಖಲೆಯಲ್ಲಿ ಸೇರಿಸತಕ್ಕದ್ದು ಮತ್ತು ವ್ಯಾಜ್ಯ ಶೀರ್ಷಿಕೆಯಲ್ಲಿ ಬದಲಾವಣೆಗಳನ್ನು ಮಾಡತಕ್ಕದ್ದು.

ನಿಯಮ 15ಡಿ, ವ್ಯಾಜ್ಯದ ಪಕ್ಷಕಾರರ ವಿಳಾಸಗಳು:

ಮೊದಲಲ್ಲಿ, ಮುದ್ದಾಂ ಅಥವಾ ಆರ್‌ಪಿಎಡಿ (ನೊಂದಾಯಿತ ಅಂಚೆ ತಲುಪೊಪ್ಪಿಗೆ) ಮುಖಾಂತರ ಜಾರಿಯಿಂದಾಗಿ ಸಿಂಧುವಾದ ಎಲ್ಲಾ ವಿಳಾಸಗಳನ್ನು ದೃಢಪಡಿಸಿಕೊಳ್ಳತಕ್ಕದ್ದು.

(ಎ) ವಿಳಾಸದಾರನು ಕಂಡುಬರದಿದ್ದ ಅಥವಾ

(ಬಿ) ಸರಿಯಾಗಿರದ ವಿಳಾಸ ಅಥವಾ

(ಸಿ) ವಿಳಾಸ ಇತ್ಯಾದಿಗಳಲ್ಲಿ ಉಪಸ್ಥಿತರಿಲ್ಲದಿದ್ದ,

(ಡಿ) ನಿರಾಕರಿಸಲಾಗಿದೆ

ಎಂದು ನೋಟೀಸುಗಳನ್ನು ಹಿಂತಿರುಗಿಸಿದಲ್ಲಿ, ಸಹಜ ನ್ಯಾಯದ ಹಿತಾಸಕ್ತಿಯಿಂದ ಸರಿಯಾದ ವಿಳಾಸಗಳನ್ನು ಪಡೆಯಲಾಗಿದೆಯೆ ಮತ್ತು ದೃಢಪಡಿಸಲಾಗಿದಿಯೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ವಾದಿ / ಅಪೀಲುದಾರನ ಕರ್ತವ್ಯವಾಗಿರತಕ್ಕದ್ದು.

ನಿಯಮ 15ಇ. ದೋಷಪೂರ್ಣ ಅರ್ಜಿ ಅಥವಾ ಆಕ್ಷೇಪಣೆಯ ಅಪೀಲಿನ ವಿವರಣ ಪತ್ರವನ್ನು ಸೀಕರಿಸದಿರುವುದು.-

ಅದು ಸರಿಯಾದ ನಮೂನೆಯಲ್ಲಿರದಿದ್ದರೆ ಅಥವಾ ಅಗತ್ಯ ದಸ್ತಾವೇಜುಗಳೊಂದಿಗೆ ಇರದಿದ್ದರೆ ಯಾವುದೇ ಅರ್ಜಿ ಅಥವಾ ಅಪೀಲಿನ ವಿವರಣ ಪತ್ರವನ್ನು ಅಥವಾ ಆಕ್ಷೇಪಣೆಯನ್ನು ಸ್ವೀಕರಿಸತಕ್ಕದ್ದಲ್ಲ.

ಪರಂತು, ನ್ಯಾಯಾಲಯವು, ಅದನ್ನು ಸ್ವೀಕರಿಸಬಹುದು ಮತ್ತು ಸಾಕಷ್ಟು ಕಾರಣ ತೋರಿಸುವುದಕ್ಕಾಗಿ, ಅಂಥ ದಸ್ತಾವೇಜುಗಳನ್ನು ಒದಗಿಸುವುದಕ್ಕಾಗಿ ಅಥವಾ ದೋಷಗಳನ್ನು ನಿವಾರಿಸುವುದಕ್ಕಾಗಿ ಅದು ಯುಕ್ತವೆಂದು ಪರಿಗಣಿಸಬಹುದಾದಂಥ ಸಮಯವನ್ನು ನೀಡಬಹುದು.

ಮತ್ತೂ ಪರಂತು, ಮೊದಲ ಪರಂತುಕದ ಮೇರೆಗೆ ಮಾಡಿರುವುದಾವುದೂ, ತೀರ್ಪು ಅಥವಾ ಡಿಕ್ರಿ ಅಥವಾ ವಿದ್ಯುಕ್ತ ಆದೇಶದ ಪ್ರತಿಯನ್ನು ನಿರ್ದಿಷ್ಟಪಡಿಸಿದ ಕಾಲದೊಳಗೆ ಸಲ್ಲಿಸದಿದ್ದಲ್ಲಿ, ಅಪೀಲಿನ ವಿವರಣ ಪತ್ರದ ಸಂದರ್ಭದಲ್ಲಿ ಸೀಮಿತ ಕಾಲಪರಿಮಿತಿಯ ಅವಧಿಯನ್ನು ವಿಸ್ತರಿಸುವುದರಿಂದ ಪರಿಣಾಮಕಾರಿಯಾಗತಕ್ಕದ್ದಲ್ಲ.

ನ್ಯಾಯಾಲಯವು ಅನುಮತಿಡಿದ ಸಮಯದೊಳಗೆ ಅಗತ್ಯವಿರುವ ದಸ್ತಾವೇಜುಗಳನ್ನು ಒದಗಿಸದಿದ್ದರಿ ಅಥವಾ ದೋಷಗಳನ್ನು ನಿವಾರಿಸದಿದ್ದರಿ, ಅರ್ಜಿ ಅಥವಾ ಅಪೀಲಿನ ವಿವರಣ ಪತ್ರವನ್ನು ತಿರಸ್ಕರಿಸತಕ್ಕದ್ದು.

15-ಎಫ್. ಯಾವ ವ್ಯಕ್ತಿಗಳಿಂದ ಅರ್ಜಿಗಳನ್ನು ಸ್ವೀಕರಿಸಬಹುದೋ ಆ ವ್ಯಕ್ತಿಗಳು.- ಪ್ರತಿ ಮಾಡುವುದಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಹೊರತುಪಡಿಸಿ, ಯಾವುದೇ ಅರ್ಜಿ ಅಥವಾ ಮನವಿಯನ್ನು ಮತ್ತು ನ್ಯಾಯಾಲಯದಲ್ಲಿ ಪಕ್ಷಕಾರರ ಮೂಲಕ ಮಾಡಬೇಕೆಂದು ಅಗತ್ಯಪಡಿಸಿದ ಅಥವಾ ಅಧಿಕೃತಗೊಳಿಸಿದ ಯಾವುದೇ ವಾದ ಪ್ರತಿವಾದ ಪತ್ರವಿಲ್ಲದೆ, ಪಕ್ಷಕಾರನು ಸ್ವತಃ, ತನ್ನ ನ್ಯಾಯವಾದಿ ಪ್ಲೀಡರ್ ಅಥವಾ ಲಿಖಿತದಲ್ಲಿ ಅಧಿಕೃತಗೊಳಿಸಿದ ತನ್ನ ಏಜೆಂಟ್ ನಿಂದ ಅಲ್ಲದೆ ಬೇರೆ ಯಾರೇ ವ್ಯಕ್ತಿಯಿಂದ ಅರ್ಜಿಯನ್ನು ಸ್ವೀಕರಿಸತಕ್ಕದ್ದಲ್ಲ. ಯಾರೇ ವ್ಯಕ್ತಿಯು, ಪಕ್ಷಕಾರನಿಂದ ಅಥವಾ ಸಂದರ್ಭಾನುಸಾರ ನೇಮಕಗೊಂಡ ನ್ಯಾಯವಾದಿ ಪ್ಲೀಡರ್ ನಿಂದ ಲಿಖಿತವಾಗಿ ಅಧಿಕೃತಗೊಳ್ಳದಿರುವ ಪಕ್ಷಕಾರ ಅಥವಾ ನೇಮಕಗೊಂಡ ನ್ಯಾಯವಾದಿ ಪ್ಲೀಡರ್ ನ ಪರವಾಗಿ ನ್ಯಾಯಾಲಯದಲ್ಲಿ ವಾದಿಸತಕ್ಕದ್ದಲ್ಲ.

8. 16ನೇ ನಿಯಮದ ತಿದ್ದುಪಡಿ.- ಸದರಿ ನಿಯಮಗಳ 16ನೇ ನಿಯಮದಲ್ಲಿ,-

(i) (ಎಫ್) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಜಿ) ಕರ್ನಾಟಕ ನ್ಯಾಯಾಲಯಗಳ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ ಸಂಖ್ಯೆ 16)ರ ಪ್ರಕಾರ ನ್ಯಾಯಾಲಯ ಫೀಜನ್ನು ಪಾವತಿಸತಕ್ಕದ್ದು.''

(ii) ಎರಡನೇ ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

ಮತ್ತೂ ಪರಂತು ವಿಳಂಬವನ್ನು ಮನ್ನಾ ಮಾಡುವುದಕ್ಕಾಗಿ ಸಂಬಂಧಿಸಿದ ವಿಷಯಗಳನ್ನು ಸುನಾವಣೆ ಮಾಡುತ್ತಿರುವಾಗ, ತಾಂತ್ರಿಕ ಅಂಶಗಳಿಗಿಂತ ಗಣನೀಯ ನ್ಯಾಯಕ್ಕೆ ಪ್ರಾಶಸ್ತ್ಯ ನೀಡಬೇಕು, ಮಿತಿಯು ಮುಕ್ತಾಯವಾದ ದಿನಾಂಕದಿಂದ ಅಪೀಲು ಅಥವಾ ಅರ್ಜಿಯನ್ನು ದಾಖಲಿಸುವ ದಿನಾಂಕದವರೆಗಿನ ಸಂಪೂರ್ಣ ಅವಧಿಯನ್ನು ಕಕ್ಷಿಗಾರರು ಲೆಕ್ಕ ಹಾಕಬೇಕು ಆದರೆ ವಿಳಂಬವನ್ನು ದುರ್ಭಾವನೆ ಉದ್ದೇಶದಿಂದ ಮಾಡಲಾಗಿದೆಯೆಂದು ಸಾಕ್ಷ್ಯವಿದ್ದ ಅಥವಾ ವಿಳಂಬವು ಎದುರು ಪಕ್ಷಕಾರನಿಗೆ ಪ್ರತಿಕೂಲ ಪ್ರಭಾವವನ್ನುಂಟು ಮಾಡಿದ ಹೊರತು, ವಿಳಂಬವು ಆಕ್ಷೇಪಾರ್ಹ ಆದೇಶಕ್ಕೆ ಸಂಬಂಧಿಸಿದ ವಿಷಯಗಳ ಮೇಲಿನ ವ್ಯಾಜ್ಯದ ಕಾರಣದಿಂದಾಗಿದ್ದ ಹೊರತು ಅಥವಾ ಉಚ್ಚ ನ್ಯಾಯಾಲಯದಲ್ಲಿ ಅರ್ಜಿಯು ಇತ್ಯರ್ಥದಲ್ಲಿದ್ದರೆ ಅಥವಾ ಕಾರಾವಾಸ ಅಥವಾ

ಅಪ್ರಾಪ್ತ ವಯಸ್ಸಿನ ರೀತಿಯಲ್ಲಿ ಕಾನೂನು ಮೇರೆಗಿನ ಅಸಮರ್ಥತೆಯಿದ್ದರೆ ಅವರ ನಿಯಂತ್ರಣವನ್ನು ಮೀರಿದ ಸಂದರ್ಭಗಳಿಂದ ಉಂಟಾದ ವಿಳಂಬಗಳಿಗಾಗಿ ನ್ಯಾಯದ ಅವಕಾಶವನ್ನು ಕಳೆದುಕೊಳ್ಳಬಾರದು,''

9. ಹೊಸ ನಿಯಮಗಳು 16ಎ, 16ಬಿ, 16ಸಿ, 16ಡಿ ಮತ್ತು 16ಇ ಯ ಸೇರ್ಪಡೆ.- ಸದರಿ ನಿಯಮಗಳ ನಿಯಮ 16ರ ತರುವಾಯ, ಈ ಮುಂದಿನ ಹೊಸ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ.-

"ನಿಯಮ **16**ಎ. ಎಲ್ಲಾ ವಿಚಾರಣೆಗಳು ಮತ್ತು ರಿವಿನ್ಯೂ ನ್ಯಾಯಾಲಯ ಮೊಕದ್ದಮೆಗಳ ಕುರಿತು ವ್ಯವಹರಣೆಗಳನ್ನು ಸೃಜಿಸುವ**,** ಸಂಗ್ರಹಿಸುವ**,** ಹಿಂಪಡಿಯುವ ಮತ್ತು ವರದಿ ಮಾಡುವ ತಂತ್ರಜ್ಞಾನ**,** ಮತ್ತು ವಿಧಾನ-

(i) ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ, ಸಂಬಂಧಿಸಿದ ಎಲ್ಲಾ ದಸ್ತಾವೇಜುಗಳು, ಕ್ರಮಗಳು ಮತ್ತು ಪ್ರಕ್ರಿಯೆಗಳನ್ನು ಒಳಗೊಂಡಂತೆ ಎಲ್ಲಾ ವಿಚಾರಣೆಗಳು ಮತ್ತು ರಿವಿನ್ಯೂ ನ್ಯಾಯಾಲಯ ಮೊಕದ್ದಮೆಗಳ ಕುರಿತು ಎಲ್ಲಾ ವ್ಯವಹಾಣೆಗಳನ್ನು ಸೃಜಿಸುವುದಕ್ಕಾಗಿ, ಸಂಗ್ರಹಿಸುವುದಕ್ಕಾಗಿ. ಹಿಂಪಡೆಯುವುದಕ್ಕಾಗಿ ಮತ್ತು ವರದಿ ಮಾಡುವುದಕ್ಕಾಗಿ ಪ್ಲಾಟ್ ಫಾಮ್, ತಂತ್ರಾಂಶ, ತಂತ್ರಜ್ಞಾನ, ನಮೂನೆಗಳು ಮತ್ತು ಸ್ವರೂಪಗಳು ಮತ್ತು ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸಬಹುದು. ಅವುಗಳು ಈ ಕೆಳಕಂಡವುಗಳನ್ನು ಒಳಗೊಂಡಿರುತ್ತವೆ-

(a) ಅರ್ಜಿ/ಅಪೀಲನ್ನು ಸಲ್ಲಿಸುವುದು
(b) ಸುನಾವಣೆಯ ಹಂತದೊಂದಿಗೆ ವ್ಯಾಜ್ಯ ಪಟ್ಟಿಯನ್ನು ಪ್ರಕಟಿಸುವುದು
(c) ಪರಿಮಿತಿಯ ಬಿಂದುವಿನ ಮೇಲಿನ ಆದೇಶ
(d) ಒಪ್ಪಿಗೆಯ ಮೇಲಿನ ಆದೇಶ
(e) ನೋಟೀಸಿನ ನೀಡಿಕೆ
(f) ಪಕ್ಷಕಾರರ ಹಾಜರಾತಿ
(g) ಬಹುವಿಧ ವ್ಯಾಜ್ಯ ಕಾಲೀನ, ಅಧಿಕಾರ ವ್ಯಾಪ್ತಿಯ ದುರ್ಭಾವನೆಯ ತಪ್ಪು ಅನ್ವಯಿಸುವಿಕೆ ಮತ್ತು ಕಾನೂನಿನ ಮುಖ್ಯ ಪ್ರಕರಣದ ಅನ್ವಯನೀಯತೆಯ ಸಮಸ್ಯೆಗಳ ಪರ್ಯಾಲೋಚನೆ
(h) ಮಧ್ಯಕಾಲೀನ ತಡೆಯಾಜ್ಞೆ ಆದೇಶಗಳು/ಯಥಾಪೂರ್ವ ಸ್ಥಿತಿ ಇತ್ಯಾದಿ
(i) ಗುಣಾವಗುಣಗಳ ಮೇಲಿನ ಸುನಾವಣೆ-ಕಾರಣಗಳ ಹೇಳಿಕೆ, ದಸ್ತಾವೇಜುಗಳ ಸಲ್ಲಿಕೆ, ಸಾಕ್ಷ್ಯವನ್ನು ಅಭಿಲೇಖಿಸುವುದು
(j) ಕೊನೆಯ ವಾದ
(k) ಆದೇಶಗಳ ಪ್ರಕಟಣೆ

(ii) ಸರ್ಕಾರವು ಹಂತಗಳಲ್ಲಿ ಅಧಿಸೂಚನೆಯ ಮೂಲಕ ರೆವಿನ್ಯೂ ನ್ಯಾಯಾಲಯದ ವ್ಯವಹರಣೆಗಳನ್ನು ನೇರ ವಿಡಿಯೋಗ್ರಾಫ್ ಮಾಡುವ ಮೂಲಕ ವಿಧಾನ, ಪ್ಲಾಟ್ ಫಾಮ್, ತಂತ್ರಾಂಶ, ತಂತ್ರಜ್ಞಾನ ಮತ್ತು ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸಬಹುದು ಮತ್ತು ವಿವಾದದ ಪಕ್ಷಕಾರರಿಗೆ ನಿರ್ದಿಷ್ಟಪಡಿಸಿದ ಸಂದರ್ಭಗಳಲ್ಲಿ ವಿಡಿಯೋಕಾನ್ಫರೆನ್ಸ್ ಮೂಲಕ ಹಾಜರಾಗಲು ಅನುಮತಿಸಬಹುದು.

(iii) ಎಲ್ಲಾ ಅಂಥ ಅಧಿಸೂಚನೆಗಳು ಅವು ಈ ನಿಯಮಗಳ ಭಾಗವಾಗಿದ್ದರೆ ಹೇಗೋ ಹಾಗೆ ಕಾನೂನಿನ ಬಲವನ್ನು ಹೊಂದಿರತಕ್ಕದ್ದು.

(iv) ಅಧಿಸೂಚನೆಗಳನ್ನು ಹೊರಡಿಸಿದಾಗಲೆಲ್ಲಾ, ಸರ್ಕಾರವು ಅಧಿಸೂಚನೆಯ ಮೂಲಕ, ಕಾಲಕಾಲಕ್ಕೆ ವಿದ್ಯುನ್ಮಾನ ಅಥವಾ ಅನ್ಯಥಾ ವಿಧಿಸಬೇಕಾದ ಶುಲ್ಕಗಳು ಮತ್ತು ನೋಟೀಸುಗಳು ಮತ್ತು ನಮೂನೆಗಳ ಪ್ರತಿಗಳಿಗಾಗಿ ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸತಕ್ಕದ್ದು.

ನಿಯಮ 16ಬಿ. ಎದುರು ಪಕ್ಷಕಾರನಿಗೆ ಲಿಖಿತ ಹೇಳಿಕೆಗಳ ಪ್ರತಿಗಳು ಇತ್ಯಾದಿಗಳನ್ನು ನೀಡಬೇಕು.-

ಒಂದು ಪ್ರಕರಣದಲ್ಲಿ ಈ ಕೆಳಗಿನ ಯಾವುದೇ ಕಾಗದ ಪತ್ರಗಳನ್ನು ಸಲ್ಲಿಸುವಾಗ

(i) ಲಿಖಿತ ಹೇಳಿಕೆ,

(ii) ಆದೇಶವನ್ನು ಕಾರ್ಯಗತಗೊಳಿಸುವುದಕ್ಕೆ ಆಕ್ಷೇಪಣೆ.

(iii) ಯಾವುದೇ ವಾದದ ತಿದ್ದುಪಡಿಗಳಿಗಾಗಿ ಅರ್ಜಿ.

(iv) ಆದೇಶದ ತಿದ್ದುಪಡಿಗಾಗಿ ಅರ್ಜಿ.

(v) ಆದೇಶ ಮತ್ತು ತೀರ್ಪಿನ ಆಕ್ಷೇಪಣೆಯನ್ನು ತಳ್ಳಿಹಾಕುವ ಪುನರವಲೋಕನಕ್ಕಾಗಿ ಅರ್ಜಿ ಮತ್ತು

(vi) ಆದ್ಯತೆಯಿದ್ದರೆ, ತಡೆಯಾಜ್ಞೆ ನೀಡುವುದಕ್ಕಾಗಿ ಅರ್ಜಿ.

(vii) ಸಲ್ಲಿಸಿದ ದಸ್ತಾವೇಜುಗಳ ಮೂಲವಿರುವ ಪಟ್ಟಿ.

(viii) ವಿಳಂಬವನ್ನು ಮನ್ನಾ ಮಾಡುವುದಕ್ಕಾಗಿ ಅರ್ಜಿ.

ಪಕ್ಷಕಾರನ ಎದುರು ಪಕ್ಷಕಾರನಿಂದ ಅಥವಾ ಆತನ ವಕೀಲನಿಂದ ಅದರ ಕ್ರಮಬದ್ಧವಾಗಿ ಸಹಿ ಮಾಡಲಾದ ಒಂದು ಪ್ರತಿಯನ್ನು ಸ್ವೀಕರಿಸಿರುವ ಬಗ್ಗೆ ಲಿಖಿತ ಸ್ವೀಕೃತಿಯನ್ನು ಮತ್ತು ಅಂಥ ಯಾವುದೇ ಕಾಗದ ಪತ್ರದೊಂದಿಗೆ ಅಫಿಡಾವಿಟ್ ಇದ್ದರೆ ಅದನ್ನು ಸಹ ಸಲ್ಲಿಸತಕ್ಕದ್ದು ಮತ್ತು ತಪ್ಪಿದಲ್ಲಿ ನ್ಯಾಯಾಲಯವು ಒಂದು ಪ್ರತಿಯನ್ನು ಕೂಡಲೇ ಒದಗಿಸುವಂತೆ ಅಥವಾ ಸಾಧ್ಯವಾದಷ್ಟು ಬೇಗನೇ ಅಂಥ ಎದುರು ಪಕ್ಷಕಾರನಿಗೆ ಅಥವಾ ಅವನ ವಕೀಲನಿಗೆ ಕಾಗದಪತ್ರವನ್ನು ಸಲ್ಲಿಸುವ ಪಕ್ಷಕಾರನ ವೆಚ್ಚದಲ್ಲಿ ವಿತರಿಸುವಂತೆ ಮಾಡತಕ್ಕದ್ದು:

ನಿಯಮ 16ಸಿ. ಅಪೀಲಿನ ವಿವರಣ ಪತ್ರ, ಪುನರೀಕ್ಷಣಾ ಅರ್ಜಿಯ ಜೊತೆಗೆ ಇರಬೇಕಾದ ದಸ್ತಾವೇಜುಗಳು.- ಪ್ರತಿಯೊಂದು ಅಪೀಲಿನ ವಿವರಣ ಪತ್ರದೊಂದಿಗೆ -ಇರತಕ್ಕದ್ದು.

(ಎ) ಅಪೀಲು ಅಥವಾ ಅರ್ಜಿಯನ್ನು ಯಾವ ಆದೇಶದ ವಿರುದ್ಧ ಸೂಚಿಸಲಾಗಿದೆಯೋ ಆ ಆದೇಶದ ಪ್ರತಿ,

(ಬಿ) ಅಪೀಲು ಅಥವಾ ಅರ್ಜಿಯನ್ನು ಅಪೀಲು ಅದೇಶದ ವಿರುದ್ಧ ನಿರ್ದೇಶಿಸಲಾದ ಮೂಲ ಅಧಿಕಾರವ್ಯಾಪ್ತಿಯುಳ್ಳ ಯಾವ ನ್ಯಾಯಾಲಯದಲ್ಲಿ ಕಾನೂನು ವ್ಯವಹಾಣೆಗಳನ್ನು ಪ್ರಾರಂಭಿಸಲಾಗಿದೆಯೋ ಆ ನ್ಯಾಯಾಲಯದ ತೀರ್ಪಿನ ಪ್ರತಿ, ಮತ್ತು

(ಸಿ) ಕಾಲ ಮಿತಿಯ ಅವಧಿಯು ಮುಕ್ತಾಯಗೊಂಡ ತುರುವಾಯ ಯಾವುದೇ ಅಪೀಲಿನ ವಿವರಣ ಪತ್ರವನ್ನು ಸಲ್ಲಿಸಿದ ಸಂದರ್ಭದಲ್ಲಿ, ಕಾಲ ಮಿತಿಯ ಅವಧಿಯನ್ನು ವಿಸ್ತರಿಸುವುದಕ್ಕಾಗಿ ಅಥವಾ

ವಿಳಂಬವನ್ನು ಮನ್ನಾ ಮಾಡುವುದಕ್ಕಾಗಿ ಅಫಿಡಾವಿಟ್ ನಿಂದ ಸಮರ್ಥಿತವಾದ ನಿರ್ದಿಷ್ಟ ಕಾರಣಗಳಿರುವ ಅರ್ಜಿಯೊಂದಿಗೆ,

ನಿಯಮ 16ಡಿ. ಆರ್‌ಆರ್ ಟಿ ಯಲ್ಲಿನ ಕಾರ್ಯವಿಧಾನ ಮತ್ತು ಅಪೀಲು ಪ್ರಕರಣಗಳು-

(1) ಅಪೀಲುಗಳಿಗಾಗಿ ತೆಗೆದುಕೊಂಡ ಎಲ್ಲಾ ವಿಷಯಗಳಿಗಾಗಿ, ಪ್ರಾಧಿಕಾರವು, ಪರಿಮಿತ ಅವಧಿಯೊಳಗೆ ಅಧಿನಿಯಮದ ಮೇರೆಗೆ ನ್ಯಾಯಿಕವಾಗಿ ಕಾರ್ಯನಿರ್ವಹಿಸುವ ಕರ್ತವ್ಯವನ್ನು ಹೊಂದಿರತಕ್ಕದ್ದು ಮತ್ತು ಮುಕ್ತ ನ್ಯಾಯಾಲಯದಲ್ಲಿ ವಿಷಯವನ್ನು ವಿಚಾರಣೆ ಮಾಡತಕ್ಕದ್ದು, ಪರಂತು, ದಾವೆ ಅಥವಾ ಪಕ್ಷಕಾರರೊಳಗೆ ಇಬ್ಬರು ಪಕ್ಷಕಾರರ ನಡುವೆ ವಿವಾದವಿದ್ದಲ್ಲಿ, ಮತ್ತು ಪಕ್ಷಕಾರರಲ್ಲಿ ಒಬ್ಬರು ಸರ್ಕಾರವಾಗಿದ್ದಾಗ, ಅಂಥ ವಿಷಯವನ್ನು ಕರ್ನಾಟಕ ಅಪೀಲು ನ್ಯಾಯಾಧಿಕರನದ 136(1)ರ ಮೇರೆಗೆ ಉಲ್ಲೇಖಿಸತಕ್ಕದ್ದು. ಆಕ್ಷೇಪಿತ ಆದೇಶವಾದ ತರುವಾಯ, ಆರು ತಿಂಗಳುತಗಳಿಗಿಂತ ಹೆಚ್ಚು ಕಾಲದವರೆಗೆ ಸ್ಪಪ್ರೇರಣೆಯಿಂದ ಯಾವುದೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳತಕ್ಕದ್ದಲ್ಲ. 136(3)ನೇ ಪ್ರಕರಣದ ಮೇರೆಗೆ ಸ್ಪಪ್ರೇರಣೆಯಿಂದ ಚರ್ಚೆಗೆ ತೆಗೆದುಕೊಂಡ ಎಲ್ಲಾ ವಿಷಯಗಳಿಗಾಗಿ, ಅಧಿನಿಯಮದ 127 ಅಥವಾ 129ನೇ ಪ್ರಕರಣದ ಉಲ್ಲೇಖದೊಂದಿಗೆ, ಸಂಬಂಧಪಟ್ಟ ಅಧಿಕಾರಿಯು, ಮೂಲ ದಾಖಲೆಗಳೊಂದಿಗೆ ಅಧಿಕಾರವ್ಯಾಪ್ತಿಯುಳ್ಳ ತಹಶೀಲ್ದಾರರಿಂದ ಸವಿವರವಾದ ವರದಿಯನ್ನು ಪಡೆದುಕೊಳ್ಳತಕ್ಕದ್ದು ಮತ್ತು ಸರ್ಕಾರಕ್ಕೆ ಅಂಥ ವಿಷಯದಲ್ಲಿ ಯಾವುದೇ ವಿವಾದವಿಲ್ಲ ಎಂದು ಮನವರಿಕೆಯಾದರೆ, ಬಾಧಿತರಗಬಹುದಾದ ಎಲ್ಲಾ ವ್ಯಕ್ತಿಗಳಿಗೆ 8ನೇ ನಿಯಮದ ಮೇಸರೆಗೆ ನೋಟೀಸನ್ನು ನೀಡಿದ ತರುವಾಯ ಅದನ್ನು ವಿಚಾರಣೆ ಮಾಡಲು ಉದ್ಯುಕ್ತನಾಗತಕ್ಕದ್ದು ಮತ್ತು ಸರ್ಕಾರದೊಟ್ಟಿಗೆ ಅಂಥ ವಿಷಯದ ಬಗ್ಗೆ ವಿವಾದವಿದ್ದರೆ, ನ್ಯಾಯ ನರ್ಣಯಕ್ಕಾಗಿ ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಆ ವಿಷಯವನ್ನು ಒಪ್ಪಿಸತಕ್ಕದ್ದು.

(2) ನ್ಯಾಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸುವುದು, ಅರ್ಜಿಯ ಸ್ವೀಕಾರ, ಮಧ್ಯಂತರ ಆದೇಶಗಳು ಅಥವಾ ನಿರ್ದೇಶನಗಳು, ತಡೆಯಾಜ್ಞೆಗಳು ಮತ್ತು ಘೋಷಣೆಗಳಿಂದ ಎಲ್ಲಾ ವ್ಯವಹರಣೆಗಳನ್ನು ಸಾರ್ವಜನಿಕ ನ್ಯಾಯಾಲಯದಲ್ಲಿ ನಡೆಸತಕ್ಕದ್ದು ಮತ್ತು ವಿಷಯದ ಗುಣಾವಗುಣದೊಂದಿಗೆ ಮುಂದುವರಿಯುವ ಮೊದಲು, ಅಧ್ಯಕ್ಷರು-

(ಎ) ಅಧಿನಿಯಮದ 29ನೇ ಪ್ರಕರಣದ ಅನುಸಾರ ಸಮನ್ಸ್ ಮತ್ತು ಅದನ್ನು ಜಾರಿ ಮಾಡುವ ರೀತಿಯನ್ನು ಅನುಸರಿಸಲಾಗಿದೆ ಮತ್ತು ಎಲ್ಲ ಪಕ್ಷಕಾರರು, ಅರ್ಜಿಕಾರರು, ಅಪೀಲುದಾರರು, ಮನವಿದಾರರು, ಪ್ರತ್ಯರ್ಜಿದಾರರು, ಹಿತಸಕ್ತಿಯುಳ್ಳ ಪಕ್ಷಕಾರರು, ಮೊದಲಾದವರು ನ್ಯಾಯಾಲಯದ ಮುಂದೆ ಹಾಜರಾಗಲು ನೋಟೀಸನ್ನು ಸ್ವೀಕರಿಸಿದ್ದು.

(i) ಲಿಖಿತದಲ್ಲಿ, ದ್ವಿಪ್ರತಿಯಲ್ಲಿರುವುದು:

(ii) ಅಧಿನಿಯಮದ 21ನೇ ಪ್ರಕರಣದ ಅನುಸಾರ ಮೊಹರನ್ನು ಯಾರು ನೀಡಿರುವರೋ ಆ ಪ್ರಿಸೈಡಿಂಗ್ ಅಧಿಕಾರಿ ಅಥವಾ ಅಧಿಕೃತ ಅಧೀನ ಅಧಿಕಾರಿಯು ಅದಕ್ಕೆ ಮಾಡಿರುವುದು:

(iii) ಹಾಜರಾಗುವ ದಿನಾಂಕ, ಸಮಯ, ಸ್ಥಳವನ್ನು ನೀಡುವ (ಸಾರ್ವಜನಿಕ ನ್ಯಾಯಾಲಯವಾಗಿರಬೇಕು ಮತ್ತು ಕಚೇರಿ ವೇಳೆಯಲ್ಲಿ ಕೆಲಸದ ದಿನವಾಗಿರಬೇಕು) ಮತ್ತು ಉದ್ದೇಶ ವ್ಯಾಜ್ಯಕ್ಕೆ ಸಂಬಂಧಿಸಿ (ಪಕ್ಷಕಾರನಂತೆ ತನಿಖೆ ನಡೆಸಲಾಗಿದೆಯೆ

ಅಥವಾ ಮೌಖಿಕ ಸಾಕ್ಷ್ಯವನ್ನು ಒದಗಿಸಲಾಗಿದೆಯೇ ಅಥವಾ ದಸ್ತಾವೇಜೀಯ ರುಜುವಾತನ್ನು ಅಥವಾ ಎಲ್ಲವನ್ನು ಹಾಜರುಪಡಿಸಲಾಗಿದೆಯೆ)

(iv) ನೋಟೀಸಿನ ಜಾರಿಯನ್ನು ಕೆಳಕಂಡಂತೆ ಮಾಡಲಾಗಿದ್ದು

1) ವ್ಯಕ್ತಿಯನ್ನು ಕುರಿತು ಮತ್ತು ಸಹಿ ಮತ್ತು ಸೇವೆಯ ಜಾರಿಯ ದಿನಾಂಕವನ್ನು ರುಜುವಾತಾಗಿ ಪಡೆಯುವುದು.

2) ಆತನು ಸಿಗದಿದ್ದರೆ ಅವನೊಂದಿಗೆ ಸಾಮಾನ್ಯವಾಗಿ ವಾಸಿಸುವ ಕುಟುಂಬದ ವಯಸ್ಕ ಸದಸ್ಯನಿಗೆ ಮಾಡುವುದು ಮತ್ತು ರುಜುವಾತಾಗಿ ಸಹಿಯನ್ನು ಪಡೆಯುವುದು ಮತ್ತು ಜಾರಿಯ ದಿನಾಂಕವನ್ನು ನಮೂದಿಸುವುದು.

3) ಮೇಲಿನ (1) ಅಥವಾ (2)ರ ಪ್ರಕಾರ ಸಾಧ್ಯವಾಗದಿದ್ದರೆ, ಅಥವಾ ಸಹಿ ಮಾಡಲು ನಿರಾಕರಿಸಿದ ಸಂದರ್ಭದಲ್ಲಿ, ಮನೆಯ ಬಾಗಿಲಿನ ಮೇಲೆ ಅಥವಾ ಎದ್ದುಕಾಣುವ ಸ್ಥಳದಲ್ಲಿ ಅಂಟಿಸುವ ಮೂಲಕ ಮತ್ತು ರುಜುವಾತಾಗಿ ಭಾವಚಿತ್ರ ಸಮೀತ ಜಾರಿ ಮಾಡುವ ವ್ಯಕ್ತಿಯ ಲಿಖಿತ ದಾಖಲೆಯನ್ನು ಪಡೆಯುವುದು.

4) ಬೇರೆ ಜಿಲ್ಲೆಯಲ್ಲಿದ್ದರೆ ಆ ಜಿಲ್ಲೆಯ ಜಿಲ್ಲಾಧಿಕಾರಿಯ ಮೂಲಕ ಕಳುಹಿಸುವುದು

5) ಸಮನುಗಳು ಜಾರಿಯಾಗದೆ ವಾಪಸ್ಸು ಬಂದರೆ, ಆರ್ ಪಿ ಎ ಡಿ ಯಿಂದ ರುಜುವಾತಾಗಿ ಅದರ ಮೇಲೆ ಒಪ್ಪಿಗೆಯನ್ನು ಪಡೆದುಕೊಳ್ಳುವುದು

6) ಆರ್‌ಪಿಎಡಿಯು ಜಾರಿಯಾಗದೆ ವಾಪಸ್ಸು ಬಂದರೆ, ಆಗ ಸಾಕ್ಷ್ಯವಾಗಿ ಅದರ ಮೇಲೆ ಅಂಚೆ ಅಧಿಕೃತ ಹಿಂಬರಹ ನೀಡುವುದು ಮತ್ತು ವ್ಯಕ್ತಿಯಿಂದ ಮೊದಲ ನೋಟದ ತಪ್ಪಾಗಿದ್ದರೆ, ಸಾರ್ವಜನಿಕ ನೋಟೀಸಿನ ಮೂಲಕ ವ್ಯಾಪಕ ಪ್ರಸಾರ ಹೊಂದಿರುವ ಸ್ಥಳೀಯ ವೃತ್ತಪತ್ರಿಕೆಯಲ್ಲಿ ಪ್ರಕಟಿಸುವುದು.

(ಬಿ) ಎಲ್ಲಾ ಪಕ್ಷಕಾರರು, ಅರ್ಜಿದಾರರು, ಅಪೀಲುದಾರರು, ಮನವಿದಾರರು, ಪ್ರತ್ಯರ್ಜಿದಾರರು, ಹಿತಾಸಕ್ತಿಯುಳ್ಳ ಪಕ್ಷಕಾರರು, ಮೊದಲಾದವರು ಅಂಥ ನೋಟೀಸನ್ನು ಅನುಸರಿಸಿ, ಅವರು ಅಥವಾ ಲಿಖಿತದಲ್ಲೆ ಕ್ರಮಬದ್ಧವಾಗಿ ಅಧಿಕಾರ ಪಡೆದ ಅವರ ಏಜೆಂಟ್ ಗಳು, ನ್ಯಾಯಾಲಯದ ಮುಂದೆ ಹಾಜರಾಗಿರುವುದನ್ನು ಖಚಿತಪಡಿಸತಕ್ಕದ್ದು.

(3) ಪ್ರಿಸೈಡಿಂಗ್ ಅಧಿಕಾರಿಯು, ಅದರ ವಾರೆಂಟ್ ಮೊಕದ್ದಮೆಯ ಸಂದರ್ಭಗಳು ಮತ್ತು ಸಂಗತಿಗಳಿಗೆ ತಡೆ ಅಥವಾ ಏಕಪಕ್ಷೀಯ ಮಧ್ಯಕಾಲೀನ ಆದೇಶವನ್ನು ಹೊರಡಿಸದ ಹೊರತು ಮತ್ತು ಹಾಗೆ ವಾರೆಂಟನ್ನು ನೀಡಿದ್ದರೆ, ಏಕಪಕ್ಷೀಯವಾಗಿ ಆದೇಶವನ್ನು ಹೊರಡಿಸಿದ ತರುವಾಯ, ಸೂಕ್ತ ಕಾರಣವನ್ನು ಒದಗಿಸಿ ಅರ್ಜಿಯನ್ನು ಸಲ್ಲಿಸಲು ಬಾಧಿತ ಪಕ್ಷಕಾರನಿಗೆ ಅನುಮತಿಸಿ 15 ದಿನಗಳಿಗಿಂತ ಕಡಿಮೆಯಿರದೆ ಅವಧಿಯವರೆಗೆ ತತ್ಪರಿಣಾಮವಾದ ಬದಲಾವಣೆಗಳನ್ನು ತಡೆಹಿಡಿಯತಕ್ಕದ್ದು, ಹಾಗೆಯೇ, ಆದೇಶವನ್ನು ರದ್ದುಗೊಳಿಸಬಹುದು ಮತ್ತು ಅಧಿನಿಯಮದ 326 (3)ನೇ ಪ್ರಕರಣದ ಮೇರೆಗೆ ಉಪಬಂಧಿಸಲಾದಂತೆ ಇತರ ಪಕ್ಷಕಾರನಿಗೆ ನೋಟೀಸನ್ನು ನೀಡಿದ ತರುವಾಯ ಗುಣಾವಗುಣಗಳ ಮೇಲೆ ವಿಚಾರಣೆ ಮಾಡತಕ್ಕದ್ದು.

(4) ಪ್ರಿಸೈಡಿಂಗ್ ಅಧಿಕಾರಿಯು, ಈ ಅಧಿನಿಯಮದ ಮೇರೆಗೆಯಾಗಲಿ ಅಥವಾ ಯಾವುದೇ ಇತಸರ ಅನ್ವಯಿಸುವ ಕಾನೂನಿನ ಮೇರೆಗೆಯಾಗಲಿ ಯಾವುದೇ ಉನ್ನತ ನ್ಯಾಯಾಲಯದಲ್ಲಿ ಅಥವಾ ಉನ್ನತ ನ್ಯಾಯಾಲಯದಲ್ಲಿ ಜಾರಿಯಲ್ಲಿರುವ ಆದೇಶದಲ್ಲಿ ಯಾವುದೇ ದಾವೆ ನಡೆಯುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಅಧಿಕಾರವ್ಯಾಪ್ತಿಯ ದುರ್ವಿನಿಯೋಗವಾಗಿಲ್ಲ

ಎಂಬುದನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಎಚ್ಚರಿಕೆಯನ್ನು ತೆಗೆದುಕೊಳ್ಳತಕ್ಕದ್ದು, ಮತ್ತು ಜಾಗರೂಕತೆಯಿಂದ ಖಚಿತಪಡಿಸಿಕೊಂಡ ತರುವಾಯ, ಅಪೀಲು ಅಥವಾ ಅರ್ಜಿಯನ್ನು ಸಲ್ಲಿಸಿರುವುದರ ಮೇರೆಗೆ ಮೂಲಭೂತ ಕಾನೂನು ಅನ್ವಯಸಾಧ್ಯತೆಯನ್ನು ಪ್ರಕರಣ 33 ಮತ್ತು ನಿಯಮ 6ಎ ಅಥವಾ ಪ್ರಕರಣ 34 ಮತ್ತು ನಿಯಮ 6ಬಿ ಯ ಅನುಸಾರ ಗುನಾವಗುಣಜಗಳ ಮೇಲೆ ವಿಷಯದ ಬಗ್ಗೆ ವಿಚಾರಿಸಲು ಉದ್ಯುಕ್ತನಾಗತಕ್ಕದ್ದು ಮತ್ತು ಅದರ ಮೇಲೆ ಸಕಾರಣ ಆದೇಶವನ್ನು ಹೊರಡಿಸತಕ್ಕದ್ದು.

ನಿಯಮ 16ಇ. ಅಧೀನ ಅಧಿಕಾರಿಗಳಿಗೆ ಅಧಿಕಾರಗಳ ಪ್ರತ್ಯಾಯೋಜನೆ.- ಯಾರೇ ಅಧಿಕಾರಿಯು, ಈ ಅಧಿನಿಯಮ ಮತ್ತು ನಿಯಮಗಳು ಅಥವಾ ಜಾರಿಯಲ್ಲಿರುವ ಸರ್ಕಾರವು ಹೊರಡಿಸಿದ ಯಾವುದೇ ಆದೇಶಗಳನ್ನು ನಿಷೇಧಿಸಿದ್ದಲ್ಲಿ ಅಥವಾ ಉಲ್ಲಂಘನೆಯಾಗಿದ್ದಲ್ಲಿ ಯಾರೇ ಅಧೀನ ಅಥವಾ ಇತರ ಅಧಿಕಾರಿಗೆ ಕ್ಷಿಪ್ರ ಅಥವಾ ವಿದ್ಯುಕ್ತ ವಿಚಾರಣೆಗಳ ಯಾವುದೇ ಅಧಿಕಾರಗಳನ್ನು ಪ್ರತ್ಯಾಯೋಜಿಸತಕ್ಕದ್ದಲ್ಲ ಅಥವಾ ವರ್ಗಾಯಿಸತಕ್ಕದ್ದಲ್ಲ ಮತ್ತು ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಅಥವಾ ಸರ್ಕಾರದ ಆದೇಶಗಳ ಮೂಲಕ ಅದನ್ನು ಉಪಬಂಧಿಸಿದ ಹೊರತು, ಯಾರೇ ಅಧಿಕಾರಿಯು ಅಂಥ ಪ್ರತ್ಯಾಯೋಜನೆ ಅಥವಾ ವರ್ಗಾವಣೆಯ ಮೇಲೆ ಕಾರ್ಯನಿರ್ವಹಿಸತಕ್ಕದ್ದಲ್ಲ.

10. ನಿಯಮ 17ರ ತಿದ್ದುಪಡಿ.- ಸದರಿ ನಿಯಮಗಳ 24ನೇ ನಿಯಮದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

ಪರಂತು, ಈ ಅಧಿನಿಯಮ ಅಥವಾ ನಿಯಮಗಳ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅಫಿಡಾವಿಟ್ ಸುಳ್ಳೆಂದು ಕಂಡುಬಂದರೆ, ಅಫಿಡಾವಿಟ್ ಅನ್ನು ಪ್ರಮಾಣ ಮಾಡಿ ಸ್ವೀಕರಿಸಿರುವ ವ್ಯಕ್ತಿಯು ಅಫಿಡಾವಿಟ್ ಅನ್ನು ಯಾರಿಗೆ ಒಪ್ಪಿಸಲಾಗಿದೆಯೋ ಆ ಅಧಿಕೃತ ಅಧಿಕಾರಿಯಿಂದ ಪ್ರತ್ಯುತ್ತರಕ್ಕಾಗಿ ಯುಕ್ತ ಕಾಲವನ್ನು ನೀಡಿ ನೋಟೀಸನ್ನು ಜಾರಿ ಮಾಡತಕ್ಕದ್ದು ಮತ್ತು ಪ್ರತ್ಯುತ್ತರವು ತೃಪ್ತಿಕರವಾಗಿಲ್ಲವೆಂದು ಕಂಡುಬಂದರೆ, ಅಧಿಕೃತ ಅಧಿಕಾರಿಯು ಭಾರತೀಯ ನ್ಯಾಯ ಸಂಹಿತಾ, 2023ರ 228 ಅಥವಾ 229ನೇ ಪ್ರಕರಣಗಳ ಮೇರೆಗೆ ವ್ಯಕ್ತಿಯನ್ನು ಪ್ರಾಸಿಕ್ಯೂಷನ್ ಮಾಡಬಹುದು.

11. 17ಎ ಹೊಸ ನಿಯಮದ ಸೇರ್ಪಡೆ.- ಸದರಿ ನಿಯಮಗಳ 17ನೇ ನಿಯಮದ ತರುವಾಯ, ಈ ಮುಂದಿನ ಹೊಸ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ:-

ನಿಯಮ 17ಎ. ಕೆಲವೊಂದು ಅರ್ಜಿಗಳು ಅಫಿಡಾವಿಟ್ ಗಳೊಂದಿಗೆ ಇರತಕ್ಕದ್ದು.- ಈ ಮುಂದಿನ ಅರ್ಜಿಗಳು, ನಿರೂಪಣಾ ರೀತಿಯಲ್ಲಿ, ಅಗತ್ಯವಿದ್ದಲ್ಲಿ ಅರ್ಜಿದಾರನು ಅವಲಂಬಿಸಿರುವ ಹೆಸರುಗಳು ಮತ್ತು ದಿನಾಂಕಗಳನ್ನೂ ಒಳಗೊಂಡಂತೆ ಪ್ರಮುಖ ಸಂಗತಿಗಳು ಮತ್ತು ಸಂದರ್ಭಗಳನ್ನು ನಿರೂಪಿಸುವ ಅಫಡಾವಿಟ್ ನೊಂದಿಗೆ ಇರತಕ್ಕದ್ದು, ಎಂದರೆ.-

(i) ಹೊಸ ಮತ್ತು ಪ್ರಮುಖ ವಿಷಯ ಅಥವಾ ಸಾಕ್ಷ್ಯ ಅಥವಾ ಯಾವುದೇ ಇತರ ಸಾಕಷ್ಟು ಕಾರಣವನ್ನು ಕಂಡುಹಿಡಿಯುವ ಆಧಾರದ ಮೇಲೆ ಪುನರವಲೋಕನಕ್ಕಾಗಿ ಸಲ್ಲಿಸಿದ ಒಂದು ಅರ್ಜಿ;

(ii) ಅಮಲ್ಜಾರಿ ವ್ಯವಹರಣೆಗಳ ತಡೆಗಾಗಿ ಸಲ್ಲಿಸಿದ ಅರ್ಜಿ;

(iii) ತಡೆಗಾಗಿ ಹೊರಡಿಸಿದ ಆದೇಶವನ್ನು ತೆರವುಗೊಳಿಸುವುದಕ್ಕಾಗಿ ಸಲ್ಲಿಸಿದ ಒಂದು ಅರ್ಜಿ;

(iv) ಹಾಜರಾಗಲು ತಪ್ಪಿದಲ್ಲಿ ವಜಾ ಮಾಡಿದ ಅಪೀಲು ಅಥವಾ ಅರ್ಜಿಯ ಪುನರಂಗೀಕಾರ ಅಥವಾ ಪುನರ್ ಸ್ಥಾಪನೆಗಾಗಿ ಅಥವಾ ಏಕಪಕ್ಷೀಯ ಆದೇಶ ಅಥವಾ ಡಿಕ್ರಿಯನ್ನು ತಳ್ಳಿ ಹಾಕುವುದಕ್ಕಾಗಿ ಸಲ್ಲಿಸಿದ ಒಂದು ಅರ್ಜಿ;

(v) ಪಕ್ಷಕಾರನ ಕಾನೂನು ಸಮ್ಮತ ಪ್ರತಿನಿಧಿಯು ದಾಖಲೆಯಲ್ಲಿರುವಾಗ ಅಥವಾ ಪಕ್ಷಕಾರನು ಯಾರೇ ಕಾನೂನು ಸಮ್ಮತ ಪ್ರತಿನಿಧಿಗಳಿಲ್ಲದೆ ಮರಣ ಹೊಂದಿದಾಗ ಪಕ್ಷಕಾರರ ಬದಲಿಯಾಗಿ ಅಥವಾ ದಾಖಲೆಯಲ್ಲಿ ಮಾಡಬೇಕಾದ ಟಿಪ್ಪಣಿಗಾಗಿ ಸಲ್ಲಿಸಿದ ಅರ್ಜಿ;

(vi) ಮೊಕದ್ದಮೆಯ ವರ್ಗಾವಣೆಗಾಗಿ ಸಲ್ಲಿಸಿದ ಅರ್ಜಿ;

(vii) ಕಾಲಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿ;

(viii) ಅಗತ್ಯ ಪಕ್ಷಕಾರರನ್ನು ಸೇರಿಸುವುದಕ್ಕಾಗಿ ಸಲ್ಲಿಸಿದ ಯಾವುದೇ ಅರ್ಜಿ; ಮತ್ತು

(ix) ಆದೇಶವನ್ನು ಕೋರಿದ ಅಥವಾ ಯಾವುದೇ ನಿಯಮಗಳು ಅಥವಾ ಕಾನೂನಿನ ಮೂಲಕ ಅಗತ್ಯಪಡಿಸಲಾಗಿರುವ ಅಥವಾ ಅಫಿಡಾವಿಟ್ ಮೂಲಕ ಸಮರ್ಥಿಸಬೇಕಾದ ಯಾವುದೇ ಇತರ ಅರ್ಜಿಯ ಆಧಾರದ ಮೇಲೆ ಎಲ್ಲಾ ಸಂಗತಿಗಳನ್ನು ತಿಳಿಸುವ ಯಾವುದೇ ಇತರ ಅರ್ಜಿ.

(x) ನ್ಯಾಯಾಲಯವು, ತನ್ನ ವಿವೇಚನಾನುಸಾರ, ಅದರ ಮುಂದೆ ವಿಚಾರಣೆಗಾಗಿ ಬರುವ ಯಾವುದೇ ಇತರ ವಿಷಯದಲ್ಲಿ ಅದರೆ ಯಾವುದೇ ಇತರ ನ್ಯಾಯಾಲಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಡೆಯುತ್ತಿರುವ ವ್ಯಾಜ್ಯಗಳ ಘೋಷಣೆಗೆ ಸೀಮಿತವಾಗಿಲ್ಲದಿರುವುದನ್ನೂ ಒಳಗೊಂಡಂತೆ ಅಫಿಡಾವಿಟ್ ಗಾಗಿ ತರಿಸಿಕೊಳ್ಳಬಹುದು.

12. 21ನೇ ನಿಯಮದ ತಿದ್ದುಪಡಿ .- ಸದರಿ ನಿಯಮಗಳ 21ನೇ ನಿಯಮದ ಉಪ-ನಿಯಮ (2)ರ ಬದಲಾಗಿ, ಈ ಮುಂದಿನವುಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(2)(i)'ಎ' ಖರಾಬು ಭೂಮಿ: (ಎ) 'ಎ' ಖರಾಬು ಭೂಮಿ ಎಂದರೆ, ಹಿಡುವಳಿದಾರನ ಕೃಷಿ ಕಟ್ಟಡಗಳು ಅಥವಾ ಒಕ್ಕಣೆ ಮಾಡುವ ಕಣ ನೆಲಗಳೂ ಒಳಗೊಂಡಂತೆ ಕಲ್ಲು, ಮರಳು ಅಥವಾ ಅಂತಹ ಸದೃಶ ಭೌತಿಕ ಲಕ್ಷಣಗಳ ಕಾರಣದಿಂದಾಗಿ ಸಾಗುವಳಿಗೆ ಯೋಗ್ಯವಲ್ಲ ಎಂದು ವರ್ಗೀಕರಿಸಿರುವ ಸರ್ವೆ ಸಂಖ್ಯೆಯೊಳಗಿನ ಭೂಮಿಯ ಅಂಥ ಭಾಗ;

(ಬಿ) ಅಂಥ 'ಎ' ಖರಾಬು ಭೂಮಿಯು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಮೇರೆಗೆ ರಾಜ್ಯ ಸರ್ಕಾರವು ಆತನ ಹೆಸರಿನಲ್ಲಿ ಸ್ಪಷ್ಟವಾಗಿ ಅದನ್ನು ಮಂಜೂರು ಮಾಡಿದಾಗ, ಮರು-ಮಂಜೂರು ಮಾಡಿದಾಗ, ಪ್ರದತ್ತ ಮಾಡಿದಾಗ ಅಥವಾ ಅನ್ಯಥಾ ಕಾನೂನುಬದ್ಧವಾಗಿ ಸ್ಥಿರೀಕರಿಸಿದಾಗ ಮಾತ್ರ ಭೂಮಿಯು ಹಿಡುವಳಿದಾರನಲ್ಲಿ ನಿಹಿತವಾಗಿರತಕ್ಕದ್ದು.

(ಸಿ) ಅಂಥ ಕಾನೂನುಬದ್ಧ ಮಂಜೂರಾತಿ, ಮರು ಮಂಜೂರಾತಿ ಅಥವಾ ಸ್ಥಿರೀಕರಣದ ನಂತರ, ಹಿಡುವಳಿದಾರನನ್ನು ವಿಧಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಸದರಿ 'ಎ' ಖರಾಬು ಭೂಮಿಯ ಕಾನೂನು ಬದ್ಧ ಮಾಲೀಕನೆಂದು ಭಾವಿಸತಕ್ಕದ್ದು.

(ಡಿ) ಅಂಥ ಕಾನೂನುಬದ್ಧ ಮಂಜೂರಾತಿ, ಮರು ಮಂಜೂರಾತಿ ಅಥವಾ ಸ್ಥಿರೀಕರಣವಾಗದಿದ್ದಲ್ಲಿ, 'ಎ' ಖರಾಬು ಭೂಮಿಯು ರಾಜ್ಯ ಸರ್ಕಾರದ ಸ್ವತ್ತಾಗಿಯೇ ಉಳಿದಿರುವುದು ಮುಂದುವರೆಯತಕ್ಕದ್ದು.

(ii) 'ಬಿ' ಖರಾಬು ಭೂಮಿ. (ಎ) 'ಬಿ' ಖರಾಬು ಭೂಮಿ ಎಂದರೆ ರಸ್ತೆಗಳು, ಬಂಡಿ ರಸ್ತೆಗಳು, ಹುಲ್ಲುಗಾವಲುಗಳು, ರುದ್ರಭೂಮಿಗಳು, ಕೆರೆಗಳು, ಕೆರೆದಂಡೆಗಳು, ನದಿಕಾಲುವೆಗಳು, ಚರಂಡಿಗಳು ಮತ್ತು ಸಾರ್ವಜನಿಕ ಉದ್ದೇಶಗಳಿಗಾಗಿ ಮೀಸಲಿರಿಸಿದ ಅಥವಾ ಹಂಚಿಕೆ ಮಾಡಲಾದ, ಮತ್ತು ಅಧಿಸೂಚಿಸಬಹುದಾದಂಥ ಇತರೆ ಪ್ರವರ್ಗಗಳು ಅಥವಾ ಹಳ್ಳಿ ಕುಂಬಾರಿಕೆಗಳು ಅಥವಾ ಅಂತದ್ದೇ ಸಾರ್ವಜನಿಕ ಉದ್ದೇಶಗಳಿಗಾಗಿ ಗೊತ್ತುಪಡಿಸಿದಂಥ ಭೂಮಿ.

(ಬಿ) ಎಲ್ಲಾ 'ಬಿ' ಖರಾಬು ಭೂಮಿಗಳು, ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತವಾಗಿರತಕ್ಕದ್ದು ಮತ್ತು ಅವು ಯಾವುದೇ ಸರ್ವೆ ಸಂಖ್ಯೆಯ ಗಡಿಗಳೊಳಗೆ ಇದ್ದರೂ, ಯಾರೇ ವ್ಯಕ್ತಿಯ ಹಿಡುವಳಿಯ ಭಾಗವಾಗಿರತಕ್ಕದ್ದಲ್ಲ.

13. ನಿಯಮ 24ರ ತಿದ್ದುಪಡಿ.- ಸದರಿ ನಿಯಮಗಳ 24ನೇ ನಿಯಮದಲ್ಲಿ, ವಿವರಣೆಯ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

'' ಪರಂತು, ಸರ್ಕಾರವು, ಪ್ರತಿ ಹತ್ತು ವರ್ಷಗಳಿಗೆ, ಮೋಜಣಿ ಮತ್ತು ಕಂದಾಯ ವ್ಯವಸ್ಥೆ ಆಯುಕ್ತರು, ಕೃಷಿ ಆಯುಕ್ತರು, ತೋಟಗಾರಿಕೆ ನಿರ್ದೇಶಕರನ್ನು ಒಳಗೊಂಡ ರೆವಿನ್ಯೂ ಆಯುಕ್ತರ, ಜಲ ಸಂಪನ್ಮೂಲಗಳ ಇಲಾಖೆ, ಪಶು ಸಂಗೋಪನೆ ಇಲಾಖೆ ಮತ್ತು ಯೋಜನಾ ಹಾಗೂ ಅಂಕಿ ಅಂಶ ಇಲಾಖೆಯ ಅರ್ಹ ಅಧಿಕಾರಿಗಳ ಮತ್ತು ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳ ಮೇರೆಗೆ ಪ್ರಮಾಣಿತ ದರ, ಭೂಮಿಗಳ ವರ್ಗೀಕರಣ, ನೀರಿನ ದರ ಮತ್ತು ವಿಧಿಸಬಹುದಾದ ಫೀಜುಗಳು ಮತ್ತು ದಂಡಗಳಿಗೆ ಮಾರ್ಪಾಟು ಮಾಡಬಹುದಾದ ಅಗತ್ಯವೇನಾದರೂ ಇದ್ದರೆ ಅದನ್ನು ನಿರ್ಧರಿಸಲು ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸತಕ್ಕದ್ದು.''

14. 30ನೇ ನಿಯಮದ ತಿದ್ದುಪಡಿ.- ಸದರಿ ನಿಯಮಗಳ 30ನೇ ನಿಯಮದಲ್ಲಿ,-

(i) ಖಂಡ (i) ರಲ್ಲಿ, ''ಅಡ್ಡಣಿಗೆ ಹಾಳೆ'' ಎಂಬ ಪದಗಳ ತರುವಾಯ, ''ಅಥವಾ ಪೋಡು ಸರ್ವೆ ಟಿಪ್ಪಣಿ ಪುಸ್ತಕ (FMB) ಎಂಬ ಪದಗಳನ್ನು ಸೇರಿಸತಕ್ಕದ್ದು

(ii) ಖಂಡ (vii) ರ ತರುವಾಯ, ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ,-

'' (viii) ಹಿಸ್ಸಾ ಅಕಾರ್ಬಂದ್''

15. 36ನೇ ನಿಯಮದ ತಿದ್ದುಪಡಿ.- ಸದರಿ ನಿಯಮಗಳ 36ನೇ ನಿಯಮದಲ್ಲಿ, ಖಂಡ (ii) ರಲ್ಲಿ,-

(i) ''ಪೋಡುಗಳು'' ಎಂಬ ಪದಗಳ ತರುವಾಯ, "ಕಾರಣದಿಂದಾಗಿ ರೂಪಿತವಾದ'' ''ದರಖಾಸ್ತ್ ಪೋಡಿ, ಪರಭಾರೆ ಪೋಡಿ, ಸ್ವಾಧೀನ ಪೋಡಿ, ಭೂ ಸುಧಾರಣೆಗಳ ಪೋಡಿ ಮತ್ತು ಹಕ್ಕು ಬದಲಾವಣೆ ಪೋಡಿ'' ಎಂಬ ಪದಗಳನ್ನು. ಸೇರಿಸತಕ್ಕದ್ದು

(ii) ''ಅಧೀಕ್ಷಕರು'' ಎಂಬ ಪದಗಳ ತರುವಾಯ, ''ನಿರ್ದೇಶಕರು'' ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು.

16. 43ನೇ ನಿಯಮದ ತಿದ್ದುಪಡಿ.- ಸದರಿ ನಿಯಮಗಳ 43ನೇ ನಿಯಮದಲ್ಲಿ, (1)ನೇ ನಿಯಮದಲ್ಲಿ, ''ಶಿರಸ್ತೇದಾರ'' ಎಂಬ ಪದಗಳಿಗೆ, ''ತಹಶೀಲ್ದಾರ್ ದರ್ಜೆಗಿಂತ ಕಡಿಮೆಯಿರದ '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

17. 67ನೇ ನಿಯಮದ ತಿದ್ದುಪಡಿ.- ಸದರಿ ನಿಯಮಗಳ 67ನೇ ನಿಯಮದಲ್ಲಿ, (2)ನೇ ಉಪ-ನಿಯಮದಲ್ಲಿ, ''ಶಿರಸ್ತೇದಾರನಿಂದಾಗಲಿ'' ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

18. 81**ನೇ ನಿಯಮದ ತಿದ್ದುಪಡಿ**.- ಸದರಿ ನಿಯಮಗಳ 81ನೇ ನಿಯಮದಲ್ಲಿ, (2)ನೇ ಉಪ-ನಿಯಮದಲ್ಲಿ, ''ಐವತ್ತು'' ಎಂಬ ಪದಕ್ಕೆ, ''ಎರಡು ಸಾವಿರ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

19. 89**ನೇ ನಿಯಮದ ತಿದ್ದುಪಡಿ**.- ಸದರಿ ನಿಯಮಗಳ 89ನೇ ನಿಯಮದಲ್ಲಿ, ''ಮೂವತ್ತು ದಿನಗಳು'' ಎಂಬ ಪದಗಳ ಬದಲಾಗಿ, ''ಹದಿನೈದು ದಿನಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

20. 94ಎ ಹೊಸ ನಿಯಮದ ಸೇರ್ಪಡೆ- ಸದರಿ ನಿಯಮಗಳ 94ನೇ ನಿಯಮದ ತರುವಾಯ, ಈ ಮುಂದಿನ ಹೊಸ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:-

(i) ಒಬ್ಬ ವ್ಯಕ್ತಿಯು, ಅಧಿನಿಯಮದ 67ನೇ ಪ್ರಕರಣದಲ್ಲಿ ವಿವರಿಸಲಾದಂತೆ ಯಾವುದೇ ಭೂಮಿಗೆ ಸಂಬಂಧಿಸಿದಂತೆ ಯಾವುದೇ ಕ್ಲೇಮನ್ನು ಸಲ್ಲಿಸಿದರೆ ಅಥವಾ ಅಂಥ ಭೂಮಿಗೆ ಸಂಬಂಧಿಸಿದಂತೆ ಹಕ್ಕನ್ನು ಹೊಂದಿರುವುದಾಗಿ ಕ್ಲೇಮನ್ನು ಸಲ್ಲಿಸಿದರೆ, ಆತನು ಅಂಥ ಕ್ಲೇಮು ಅಥವಾ ಹಕ್ಕನ್ನು ಪಡೆದುಕೊಂಡ ಮೂರು ತಿಂಗಳೊಳಗೆ ಅಂಥ ಹಕ್ಕುಗಳನ್ನು ಪಡೆದುಕೊಂಡ ರೀತಿಯನ್ನು ರುಜುವಾತುಪಡಿಸಲು ಅಂಥ ದಸ್ತಾವೇಜುಗಳೊಂದಿಗೆ ಅಧಿಕಾರವ್ಯಾಪ್ತಿಯುಳ್ಳ ತಹಶೀಲ್ದಾರ್‌ರವರಿಗೆ ವರದಿ ಮಾಡತಕ್ಕದ್ದು ಮತ್ತು ತಹಶೀಲ್ದಾರ್‌ರವರು, ಹಕ್ಕು ಪಡೆದುಕೊಂಡ ಮೂಲ ದಾಖಲೆಗಳು ಮತ್ತು ರುಜುವಾತನ್ನು ಪರಿಶೀಲಿಸಿದ ನಂತರ, ಸದರಿ ಭೂಮಿಯು ಅಧಿನಿಯಮದ 67ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುತ್ತದೆಯೇ ಎಂಬುದನ್ನು ನಿರ್ಧರಿಸತಕ್ಕದ್ದು ಮತ್ತು ಅದನ್ನು ಹಾಗೆ ಬಂದರೆ, ಕ್ಲೇಮಿನ ಬಗ್ಗೆ ಅಧಿಕಾರವ್ಯಾಪ್ತಿಯುಳ್ಳ ಉಪ ವಿಭಾಗಾಧಿಕಾರಿಗೆ ವರದಿ ಮಾಡಲು ಕ್ರಮ ಜರುಗಿಸತಕ್ಕದ್ದು, ನಂತರ, ಉಪ ವಿಭಾಗಾಧಿಕಾರಿಯು, ಅಧಿನಿಯಮದ 33ನೇ ಪ್ರಕರಣದಲ್ಲಿ ಮತ್ತು ಈ ನಿಯಮಗಳಲ್ಲಿ ಉಪಬಂಧಿಸಲಾದಂತೆ ವಿದ್ಯುಕ್ತ ವಿಚಾರಣೆಯನ್ನು ನಡೆಸಲು ಕ್ರಮ ಜರುಗಿಸತಕ್ಕದ್ದು. ಕ್ಲೇಮನ್ನು ಸ್ವೀರೀಕರಿಸುವುದು ಅಥವಾ ತಿರಸ್ಕರಿಸುವುದು ಮತ್ತು ಅನಧಿಕೃತ ಅಧಿಭೋಗದ ಪ್ರತಿ ದಿನಕ್ಕೆ ಒಂದು ಸಾವಿರ ರೂಪಾಯಿಗಳ ದಂಡದೊಂದಿಗೆ ಕ್ಷಿಪ್ರ ಹೊರಹಾಕುವಿಕೆಯನ್ನು ಆದೇಶಿಸುವುದು ಸೂಕ್ತವೆಂದು ಆತನು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸತಕ್ಕದ್ದು.

(ii) ಯಾರೇ ರೆವಿನ್ಯೂ ಅಧಿಕಾರಿಗೆ, ಅಧಿನಿಯಮದ 67ನೇ ಪ್ರಕರಣದ ಪರಿಭಾಷೆಯೊಳಗೆ ತನ್ನ ಅಧಿಕಾರವ್ಯಾಪ್ತಿಯ ಅಡಿಯಲ್ಲಿ ಬರುವ ಯಾವುದೇ ಭೂಮಿಯನ್ನು ಯಾರೇ ವ್ಯಕ್ತಿ ತಾನೇ ಅಥವಾ ಯಾವುದೇ ಸಂಸ್ಥೆಯ ಪರವಾಗಿ ಯಾವುದೇ ಸ್ವರೂಪದ ಉದ್ದೇಶಕ್ಕಾಗಿ, ಸ್ವಾಧೀನಪಡಿಸಿಕೊಂಡಿದ್ದಾನೆಂದು ಕಂಡುಬಂದರೆ, ಆತನು ಕೂಡಲೇ ಅಧಿಕಾರವ್ಯಾಪ್ತಿಯ ತಹಶೀಲ್ದಾರ್ ಗೆ ವಿಷಯವನ್ನು ವರದಿ ಮಾಡತಕ್ಕದ್ದು, ಆತನು ಸಮೀಕ್ಷೆಯನ್ನು ನಡೆಸಲು, ದಸ್ತಾವೇಜುಗಳನ್ನು ಪರೀಕ್ಷಿಸಲು ಮತ್ತು ಅನಧಿಕೃತ ಅಧಿಭೋಗದ ಅವಧಿಯನ್ನು ನಿರ್ಧರಿಸಲು ಕ್ರಮ ಜರುಗಿಸತಕ್ಕದ್ದು ಮತ್ತು ಅಂಥ ಅಧಿಭೋಗದಿಂದ ಯಾವುದೇ ಹಾನಿ ಉಂಟಾಗಿದ್ದರೆ ಮತ್ತು ಅನಧಿಕೃತ ಅಧಿಭೋಗವು ದೃಢಪಟ್ಟರೆ, ಅಧಿನಿಯಮದ 104ನೇ ಪ್ರಕರಣದ ಪ್ರಕಾರ ಅತಿಕ್ರಮಣವನ್ನು ಕ್ಷಿಪ್ರ ರೀತಿಯಲ್ಲಿ ಹೊರಹಾಕಲು ಕ್ರಮ ಜರುಗಿಸತಕ್ಕದ್ದು:

ಪರಂತು ತಹಶೀಲ್ದಾರರ ಕ್ರಮದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಧಿಭೋಗವಾದ ಮೂರು ತಿಂಗಳುಗಳಿಗಿಂತ ಹೆಚ್ಚಿನ ಅನಧಿಕೃತ ಅಧಿಭೋಗಕ್ಕೆ ಪ್ರತಿ ದಿನಕ್ಕೆ ಒಂದು ಸಾವಿರ

ರೂಪಾಯಿಗಳ ದಂಡವನ್ನು ಜಮೆ ಮಾಡಿದ ನಂತರ ಅಗತ್ಯ ಮೂಲ ದಾಖಲೆಗಳೊಂದಿಗೆ ಅಂಥ ಭೂಮಿಗೆ ಹಕ್ಕನ್ನು ಆರ್ಜಿಸಿರುವುದಕ್ಕಾಗಿ ಕ್ಷೇಮನ್ನು ಅಧಿಕಾರವ್ಯಾಪ್ತಿಯುಳ್ಳ ಉಪ ವಿಭಾಗಾಧಿಕಾರಿಗೆ ಸಲ್ಲಿಸಬಹುದು, ಆನಂತರ, ಉಪ ವಿಭಾಗಾಧಿಕಾರಿಗಳು ತಹಶೀಲ್ದಾರ್ ಅವರಿಂದ ವರದಿಯನ್ನು ತರಿಸಿಕೊಳ್ಳತಕ್ಕದ್ದು ಮತ್ತು ಈ ಅಧಿನಿಯಮ ಮತ್ತು ಈ ನಿಯಮಗಳಲ್ಲಿ ಉಪಬಂಧಿಸಲಾದಂತೆ ವಿದ್ಯುಕ್ತ ವಿಚಾರಣೆಯನ್ನು ನಡೆಸಲು ಕ್ರಮ ಜರುಗಿಸತಕ್ಕದ್ದು:

ಪರಂತು, ಹಕ್ಕಿನ ಕ್ಷೇಮು ಅಥವಾ ಆರ್ಜನೆಯು ಸಿಂಧುವಾದುವೆಂದು ದೃಢಪಟ್ಟರೆ, ಉಪ ವಿಭಾಗಾಧಿಕಾರಿಗಳು, ಆತನ ನಿರ್ಣಯಗಳನ್ನು ದಾಖಲಿಸಲು ಮತ್ತು ಯುಕ್ತ ಸಮಯದೊಳಗೆ ಜಮೆ ಮಾಡಲಾದ ದಂಡವನ್ನು ಹಿಂದಿರುಗಿಸಲು ಕ್ರಮ ಜರುಗಿಸತಕ್ಕದ್ದು.

(iii) ಈ ಉಪಬಂಧದ ಮೇರೆಗೆ ಉಪ ವಿಭಾಗಾಧಿಕಾರಿಗಳು ಹೊರಡಿಸಿದ ಎಲ್ಲಾ ಆದೇಶಗಳನ್ನು ಸಾಧ್ಯವಾದಷ್ಟು ಬೇಗನೇ ಮತ್ತು ಸಂದರ್ಭದಲ್ಲಿ ಸದರಿ ಆದೇಶವನ್ನು ಹೊರಡಿಸಿದ ಹದಿನೈದು ದಿನಗಳನ್ನು ಮೀರದಂತೆ ಅಧಿಕಾರವ್ಯಾಪ್ತಿಯುಳ್ಳ ಜಿಲ್ಲಾಧಿಕಾರಿಗಳಿಗೆ ವರದಿ ಮಾಡತಕ್ಕದ್ದು, ಮತ್ತು ಜಿಲ್ಲಾಧಿಕಾರಿಗಳ ಅನುಮತಿಯಿಲ್ಲದೆ ಭೂ ದಾಖಲೆಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡತಕ್ಕದ್ದಲ್ಲ:

ಪರಂತು, ಉಪ ವಿಭಾಗಾಧಿಕಾರಿಗಳು, ಈ ಉಪಬಂಧದ ಅಡಿಯಲ್ಲಿ ಅವರು ಹೊರಡಿಸಿದ ಯಾವುದೇ ಅಂಥ ಆದೇಶವನ್ನು ವರದಿ ಮಾಡಲು ವಿಫಲರಾದರೆ, ಮತ್ತು ಅದರಲ್ಲೂ ವಿಶೇಷವಾಗಿ, ಸದರಿ ಆದೇಶವು ಅಧಿನಿಯಮದ 67ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಪ್ರತಿಪಾದಿಸಲಾದ ಸರ್ಕಾರದ ಹಕ್ಕುಗಳಿಗೆ ಯಾವುದೇ ರೀತಿಯಲ್ಲಿ ಬಾಧಕವಾಗುವುದಾದರೆ, ತಹಶೀಲ್ದಾರರು ಅಧಿನಿಯಮದ 67ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಯುಕ್ತ ಆದೇಶಗಳನ್ನು ಕೋರಿ ಜಿಲ್ಲಾಧಿಕಾರಿಗಳಿಗೆ ಅಪೀಲನ್ನು ಸಲ್ಲಿಸತಕ್ಕದ್ದು:

ಪರಂತು, ಅಧಿಕಾರವ್ಯಾಪ್ತಿಯುಳ್ಳ ಜಿಲ್ಲಾಧಿಕಾರಗಿಗಳು, ಅಂಥ ವರದಿಯ ಮೇಲೆ ಅಥವಾ ಉಪ ವಿಭಾಗಾಧಿಕಾರಿಯ ಮುಂದಿರುವ ವ್ಯವಹರಣೆಗಳಿಂದ ಬಾಧಿತನಾದ ವ್ಯಕ್ತಿಯು ಅಥವಾ ತಹಶೀಲ್ದಾರನು ತಹಶೀಲ್ದಾರ್ರು ಅಧಿನಿಯಮದ 67ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಸಲ್ಲಿಸಿದ ಅಪೀಲನ್ನು ಸ್ವೀಕರಿಸಿದ ನಂತರ, ಅರವತ್ತು ದಿವಸಗಳ ಅವಧಿಯೊಳಗೆ ಅಪೀಲಿನ ಬಗ್ಗೆ ವಿಚಾರಣೆ ಮಾಡಲು ಕ್ರಮ ಜರುಗಿಸಬಹುದು ಮತ್ತು ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಿದೆಯೊ ರದ್ದುಗೊಳಿಸಿಯಾಗಲಿ ಅಥವಾ ಸ್ಥಿರೀಕರಿಸಿಯಾಗಲೀ ಅಂಥ ಆದೇಶಗಳನ್ನು ಹೊರಡಿಸಬಹುದು ಮತ್ತು ಈ ವಿಷಯದಲ್ಲಿ ಯಾವುದೇ ಮುಂದಿನ ಅಪೀಲನ್ನು ಹೂಡತಕ್ಕದ್ದಲ್ಲ:

ಮತ್ತೂ ಪರಂತು, ಜಿಲ್ಲಾಧಿಕಾರಿಗಳು, ವ್ಯವಹರಣೆಗಳ ಯಾವುದೇ ಸಮಯದಲ್ಲಿ ಅಥವಾ ಅದಾದ ನಂತರ, ರೆವಿನ್ಯೂ ಆಯುಕ್ತರಿಗೆ ಅಥವಾ ಅಧಿಕಾರಗಳನ್ನು ಚಲಾಯಿಸುವಲ್ಲಿ ಸರ್ಕಾರವು ನಿರ್ದಿಷ್ಟವಾಗಿ ಪ್ರತ್ಯಾಯೋಜಿಸಿದ್ದಲ್ಲಿ, ಐದು ವರ್ಷಗಳ ಅವಧಿಯೊಳಗೆ, ಸ್ವಯಂಪ್ರೇರಣೆಯಿಂದಾಗಲೀ ಅಥವಾ ಯಾವುದೇ ಅಧಿಕೃತ ವರದಿ, ನಿರ್ದೇಶನ ಅಥವಾ ಸಾರ್ವಜನಿಕ ದೂರಿನ ಮೇಲಾಗಲೀ, ವ್ಯವಹರಣೆಗಳನ್ನು ತಡೆಹಿಡಿಯಲು, ದಸ್ತಾವೇಜುಗಳನ್ನು ತರಿಸಿಕೊಳ್ಳಲು, ಎಲ್ಲಾ ದಾಖಲೆಗಳನ್ನು ಪರಿಶೀಲಿಸಲು ಮತ್ತು ಕ್ಷಿಪ್ರ ವಿಚಾರಣೆಯಾದ ನಂತರ, ತಾನು ಸೂಕ್ತವೆಂದು ಭಾವಿಸಿದಂತೆ ಪುನರೀಕ್ಷಣೆ ಆದೇಶವನ್ನು ಮಾಡಲು ಅಥವಾ ಅನ್ಯಥಾ, ಅಧಿಕಾರವ್ಯಾಪ್ತಿಯುಳ್ಳ ಪ್ರಾದೇಶಿಕ ಆಯುಕ್ತರು ಸಕ್ಷಮವಾಗಿರತಕ್ಕದ್ದು:

ಮತ್ತೂ ಪರಂತು, ಈ ನಿಯಮದ ಮೇರೆಗೆ ಪರಿಷ್ಕರಣಾ ವ್ಯವಹರಣೆಗಳನ್ನು ಹೊರತುಪಡಿಸಿದ ಎಲ್ಲಾ ವ್ಯವಹರಣೆಗಳನ್ನು, ಈ ನಿಯಮಗಳ 6ಎ ನಿಯಮದೊಂದಿಗೆ ಓದಲಾದ ಅಧಿನಿಯಮದ 33ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ವಿದ್ಯುಕ್ತ ವಿಚಾರಣೆಯಾಗಿ ನಡೆಸತಕ್ಕದ್ದು."

21. ಹೊಸ ನಿಯಮ 96ಎ ಯ ಸೇರ್ಪಡೆ:- ಸದರಿ ನಿಯಮಗಳ 96ನೇ ನಿಯಮದ ತರುವಾಯ, ಈ ಮುಂದಿನ ಹೊಸ ನಿಯಮವನ್ನು ಸೇರಿಸತಕ್ಕದ್ದು, ಎಂದರೆ.-

"96ಎ. ಭೂಮಿ ಅಥವಾ ಇತರ ಸ್ವತ್ತುಗಳ ವಿಲೆ.- (1) ಸಾರ್ವಜನಿಕ ಹರಾಜಿನ ಮೂಲಕ ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಗಳ ಮತ್ತು ಇತರ ಸ್ವತ್ತಿನ ವಿಲೆಯನ್ನು, ಈ ನಿಯಮಗಳ 120, 124 ಮತ್ತು 126ನೇ ನಿಯಮಗಳಲ್ಲಿನ ಕಾರ್ಯವಿಧಾನಕ್ಕೆ ಅನುಸಾರವಾಗಿ ಸರ್ಕಾರವು ತನ್ನ ಪರವಾಗಿ ನೇಮಿಸಿದಂಥ ಅಧಿಕಾರಿಯು ನಡೆಸತಕ್ಕದ್ದು.

(2) ಜಿಲ್ಲಾಧಿಕಾರಿಗಳು, ಅಧಿನಿಯಮದ 92ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಮತ್ತು ಈ ನಿಯಮಗಳ 124, 126 ಮತ್ತು 128ನೇ ನಿಯಮಗಳಲ್ಲಿ ವಿಧಿಸಲಾದ ಕಾರ್ಯವಿಧಾನದ ಪ್ರಕಾರ ಉಪಬಂಧಿಸಲಾದ ಸಾರ್ವಜನಿಕ ಹರಾಜನ್ನು ನಡೆಸತಕ್ಕದ್ದು."

22. 97ನೇ ನಿಯಮದ ತಿದ್ದುಪಡಿ.- ಸದರಿ ನಿಯಮಗಳ 97ನೇ ನಿಯಮದಲ್ಲಿ,-

(i) (2)ನೇ ಉಪ ನಿಯಮದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಜಾನುವಾರುಗಳ ಸಂಖ್ಯೆಯನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ, ಆದೇಶದ ದಿನಾಂಕದಂದು ಜಾರಿಯಲ್ಲಿರುವ ಪ್ರಕಟಿತ ಜಾನುವಾರು ಗಣತಿಯು ಆಧಾರವಾಗಿರತಕ್ಕದ್ದು ಮತ್ತು ಉಪ ನರ್ದೇಶಕರು ಪಶುಸಂಗೋಪನೆ, ಎವರು ಮೇಯಿಸುವುದಕ್ಕೆ ಅಗತ್ಯವಾದ ಭೂಮಿಯ ನಿಖರವಾದ ವರದಿ ಮಾಡುವ ಸಕ್ಷಮ ಪ್ರಾಧಿಕಾರವಗಿರತಕ್ಕದ್ದು.

ಮತ್ತೂ ಪರಂತು, ಸದರಿ ಅರಣ್ಯ ಪ್ರದೇಶವು, ಕರ್ನಾಟಕ ಅರಣ್ಯ ಅಧಿನಿಯಮ, 1962ರಲ್ಲಿ ಗೊತ್ತುಪಡಿಸಲಾದ ಅರ್ಥವ್ಯಾಪ್ತಿಯೊಳಗೆ ಬೀಸಲು ಅಥವಾ ಅಭಯಾರಣ್ಯವಾಗಿರುವುದಿಲ್ಲ ಮತ್ತು ಕರ್ನಾಟಕ ಅರಣ್ಯ ಅಧಿನಿಯಮ, 1962ರ 33ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಹಾಗೆ ಗುರುತು ಮಾಡಲಾಗಿರುವ ಅರಣ್ಯ ಪ್ರದೇಶದ ಮೇಯುವುದಕ್ಕೆ ಕಾನೂನುಬದ್ಧವಾಗಿ ತಡೆಯತಕ್ಕದ್ದಲ್ಲ."

(ii) (3)ನೇ ಉಪ ನಿಯಮ ತರುವಾಯ, ಈ ಮುಂದಿನ ಹೊಸ ಪರಂತುಕಗಳನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಸದರಿ ಅರಣ್ಯ ಅಥವಾ ಸದರಿ ಗ್ರಾಮವು, ಎರಡು ಕಿಲೋಮೀಟರುಗಳಿಗಿಂತ ಹೆಚ್ಚು ದೂರದಲ್ಲಿರುವುದಿಲ್ಲ ಮತ್ತು ಸದರಿ ಗ್ರಾಮವು, ಮೇವು ಭೂಮಿಯ ಕೊರತೆಯನ್ನು ಅದು ಹೊಂದಿಲ್ಲದಿರುವಂತೆ ಅಂತರವನ್ನು ವೈಮಾನಿಕವಾಗಿ ಲೆಕ್ಕಹಾಕತಕ್ಕದ್ದು.

ಮತ್ತೂ ಪರಂತು, ಹೊಸ ಕಂದಾಯ ಗ್ರಾಮವನ್ನು ಅಧಿಸೂಚಿಸಿದಾಗ, ಜಿಲ್ಲಾಧಿಕಾರಿಗಳು ಸದರಿ ಗ್ರಾಮದಲ್ಲಿರುವ ಯಾವುದೇ ಜಾನುವಾರುಗಳಿಗೆ ಸೂಕ್ತವಾದ ಮೇವು ಭೂಮಿಯನ್ನು ಪ್ರತ್ಯೇಕವಾಗಿಡತಕ್ಕದ್ದು."

(iii) ಉಪ ನಿಯಮ (4)ರಲ್ಲಿ, ಪರಂತುಕದಲ್ಲಿ, (iv)ನೇ ಖಂಡ ತರುವಾಯ, ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ.-

"(v) ಬೆಚಿರಾಕ್ ಅಥವಾ ಪರಿತ್ಯಕ್ತ ಗ್ರಾಮ."

(iv) (v)ನೇ ಖಂಡದ ತರುವಾಯ, ಈ ಮುಂದಿನ ಹೊಸ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತೂ ಪರಂತು, ಪಕ್ಕದಲ್ಲಿರುವ ಗ್ರಾಮಗಳಲ್ಲಿ ಮೇವಿಗೆ ಯಾವುದೇ ಭೂಮಿ ಲಭ್ಯವಿಲ್ಲದಿದ್ದರೆ, ಇದರಡಿಯಲ್ಲಿ ಉಪ ನಿಯಮ (1)ರಲ್ಲಿ ಉಪಬಂಧಿಸಲಾದಂತೆ ಗ್ರಾಮದ ಜಾನುವಾರುಗಳಿಗಾಗಿ ಅಗತ್ಯಪಡಿಸಲಾದ ಅಲ್ಪ ಕನಿಷ್ಠ ಪ್ರಮಾಣ ಕಡಿತವು ಮೀರತಕ್ಕದ್ದಲ್ಲ."

23. ನಿಯಮ 102ಬಿ ಯನ್ನು ಬಿಟ್ಟುಬಿಡುವುದು.- ಸದರಿ ನಿಯಮಗಳಲ್ಲಿ 102ಬಿ ನಿಯಮ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

24. 106ಬಿ, 106ಸಿ, 106ಡಿ, 106ಇ ಮತ್ತು 106ಎಫ್ ಹೊಸ ನಿಯಮಗಳ ಸೇರ್ಪಡೆ.- ಸದರಿ ನಿಯಮಗಳ 106ಎ ನಿಯಮದ ತರುವಾಯ, ಈ ಮುಂದಿನ ಹೊಸ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ:-

"ನಿಯಮ 106ಬಿ: 95(2)ನೇ ಪ್ರಕರಣದ ಅಡಿಯಲ್ಲಿ ಅರ್ಜಿ ಸಲ್ಲಿಸಲು ಅಫಿಡವಿಟ್ ಮತ್ತು ದಾಖಲೆಯ ಅಗತ್ಯತೆಗಳು.

(1) ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 95(2)ನೇ ಪ್ರಕರಣದ ಅಡಿಯಲ್ಲಿ ಕೃಷಿ ಭೂಮಿಯ ಪರಿವರ್ತನೆಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯು, ಅರ್ಜಿಯು (i)ನೇ ಖಂಡದ ಅಡಿಯಲ್ಲಿ ಇರುವಲ್ಲಿ ನಮೂನೆ-21ಬಿ ಮತ್ತು ಅರ್ಜಿಯು ಸದರಿ ಉಪಪ್ರಕರಣದ (ii)ನೇ ಖಂಡದ ಅಡಿಯಲ್ಲಿ ಇರುವಲ್ಲಿ ನಮೂನೆ 21ಸಿ ಯಲ್ಲಿ ಅಫಿಡವಿಟ್ ಅನ್ನು ಹೊಂದಿರತಕ್ಕದ್ದು.

(2) ಅಫಿಡವಿಟ್ ಅನ್ನು ರೂ. 200 ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಮೌಲ್ಯದ ನಾನ ಜ್ಯುಡಿಷಿಯಲ್ ಕಾಗದದಲ್ಲಿ ಬರೆದುಕೊಡತಕ್ಕದ್ದು ಮತ್ತು ಅದನ್ನು ವಿಧ್ಯುಕ್ತವಾಗಿ ನೋಟರಿ ಮಾಡತಕ್ಕದ್ದು.

(3) ಮೇಲೆ ಉಲ್ಲೇಖಿಸಲಾದ ಅಫಿಡವಿಟ್ ಜೊತೆಗೆ ಈ ಕೆಳಗಿನವುಗಳನ್ನು ಒಳಗೊಂಡಂತೆ ಕಡ್ಡಾಯ ಪೂರಕ ದಾಖಲೆಗಳೊಂದಿಗೆ ಅರ್ಜಿಯನ್ನು ಆನ್‌ಲೈನ್ ನಲ್ಲಿ ಸಲ್ಲಿಸತಕ್ಕದ್ದು:

(i) ಇತ್ತೀಚಿನ ಹಕ್ಕುಗಳ, ಗೇಣಿ ಮತ್ತು ಬೆಳೆಗಳ ದಾಖಲೆ(ಆರ್ ಟಿಸಿ);

(ii) ಕಾನೂನಾತ್ಮಕವಾಗಿ ಮಾಲೀಕತ್ವವನ್ನು ತೋರಿಸುವ ಹಕ್ಕು ಬದಲಾವಣೆ ಉದ್ಧೃತ ಭಾಗ; ಮತ್ತು

(iii) ಸಕ್ಷಮ ಪ್ರಾಧಿಕಾರದಿಂದ ಅನ್ವಯಿಸಬಹುದಾದಂತೆ ಹಕ್ಕು ಬದಲಾವಣೆ ಪೂರ್ವದ ನಕ್ಷೆ.

(iv) ಆ ಭೂಮಿಯು ಅದರ ವ್ಯಾಪ್ತಿಯೊಳಗೆ ಬಂದರೆ, ಸಕ್ಷಮ ಸ್ಥಳೀಯ ಸಂಸ್ಥೆಯಿಂದ ನೀಡಲ್ಪಟ್ಟ ಖಾತಾ.

(v) ಅಗತ್ಯವಿದ್ದಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 13(4)ನೇ ಪ್ರಕರಣದ ಅಡಿಯಲ್ಲಿ ಅಂತಿಮವಾಗಿ ಪ್ರಕಟಿಸಲಾದ ವಿಧ್ಯುಕ್ತ ಮಹಾಯೋಜನೆಯ ಪ್ಲಾನ್ ನ ಸಂಬಂಧಿತ ಹಿಸ್ಸೆಯ ಉಧೃತಭಾಗ.

(4) ಮೇಲಿನವುಗಳನ್ನು ಅನುಸರಿಸದ ಅರ್ಜಿಗಳು ಸಕ್ಷಮ ಪ್ರಾಧಿಕಾರದಿಂದ ಸಂಕ್ಷಿಪ್ತ ನಿರಾಕರಣೆಗೆ ಬಾಧ್ಯವಾಗತಕ್ಕದ್ದು.

ನಿಯಮ 106ಸಿ : 95(2)(i) ಪ್ರಕರಣದ ಅಡಿಯಲ್ಲಿ ಪರಿವರ್ತನಾ ಪ್ರಕ್ರಿಯೆ- ಅನುಮೋದನೆಯಾದ ಮಾಸ್ಟರ್ ಪ್ಲಾನ್ ನ ಮಿತಿಯಲ್ಲಿರುವ ಭೂಮಿ:

(1) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ 13(4)ನೇ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾದ ಅಂತಿಮ ಮಹಾಯೋಜನೆಯಲ್ಲಿರುವ ಪ್ರದೇಶದೊಳಗೆ ಇರುವ ಕೃಷಿ ಭೂಮಿ, ಮತ್ತು ವಿಭಾಗೀಯ ವರ್ಗೀಕರಣಕ್ಕೆ ಅಂಥ ಪ್ಲಾನ್ ನಲ್ಲಿ ಕೃಪಿಯೇತರ ಬಳಕೆಗೆ ಅನುಗುಣವಾಗಿ ಪ್ರಸ್ತಾಪವಾಗಿದ್ದಲ್ಲಿ, 95ನೇ ಪ್ರಕರಣದ ಅಡಿಯಲ್ಲಿ ಜಿಲ್ಲಾಧಿಕಾರಿಗಳ ಪೂರ್ವ ಅನುಮತಿಯನ್ನು ಅಗತ್ಯಪಡಿಸತಕ್ಕದ್ದಲ್ಲ.

(2) ಅರ್ಜಿದಾರನು, ನಮೂನೆ-21ಬಿ ಯಲ್ಲಿ ಅಫಿಡವಿಟ್ ಜೊತೆಗೆ 106ಬಿ ನಿಯಮದಲ್ಲಿ ಪಟ್ಟಿ ಮಾಡಲಾದ ದಾಖಲೆಗಳನ್ನು ಲಗತ್ತಿಸಿ, ಕಾರ್ಯವ್ಯಾಪ್ತಿ ಯೋಜನಾ ಪ್ರಾಧಿಕಾರಕ್ಕೆ ಆನ್ ಲೈನ್ ಅರ್ಜಿಯನ್ನು ಸಲ್ಲಿಸುವುದು.

(3) ಪರಿಶೀಲಿಸಿದ ನಂತರ, ಸಕ್ಷಮ ಯೋಜನಾ ಪ್ರಾಧಿಕಾರವು ಪರಿವರ್ತನಾ ಶುಲ್ಕವನ್ನು ನಿಗಧಿಪಡಿಸಿ, ಚಲನ್ ಅನ್ನು ಸೃಜಿಸಿ, ಮತ್ತು ಪಾವತಿಯನ್ನು ಸ್ವೀಕರಿಸಿದ ಮೇಲೆ ಡಿಜಿಟಲ್ ಸಹಿ ಮಾಡಲ್ಪಟ್ಟ ಪರಿವರ್ತನಾ ಪ್ರಮಾನಪತ್ರವನ್ನು ನೀಡತಕ್ಕದ್ದು. ಅದನ್ನು ಅಧಿನಿಯಮದಡಿಯಲ್ಲಿ ನೀಡಿದ್ದರಿ ಹೇಗೋ ಹಾಗೆಯೇ ಸಿಂಧುವೆಂದು ಭಾವಿಸತಕ್ಕದ್ದು.

(4) ಪರಿವರ್ತನಾ ಪ್ರಮಾಣಪತ್ರದ ಒಂದು ಪ್ರತಿಯನ್ನು ಜಿಲ್ಲಾಧಿಕಾರಿಗಳಿಗೆ ಅಧಿಕೃತ ದಾಖಲೆಯಾಗಿ ಸಲ್ಲಿಸುವುದು.

ನಿಯಮ 106ಡಿ: 95(2)(ii) ಪ್ರಕರಣದ ಅಡಿಯಲ್ಲಿ ಪರಿವರ್ತನಾ ಪ್ರಕ್ರಿಯೆ- ಎಲ್ಲಾ ಭೂಮಿಗಳು

(1) ಜಿಲ್ಲಾಧಿಕಾರಿಗಳು, ಆನ್ ಲೈನ್ ಅರ್ಜಿ ಮತ್ತು ಅಫಿಡವಿಟ್ ಅನ್ನು ಸ್ವೀಕರಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಈ ಮುಂದಿನ ಪ್ರಾಧಿಕಾರಗಳಿಂದ ಪರಿಶೀಲನಾ ವರದಿಯನ್ನು ಪಡೆದುಕೊಳ್ಳಲು ಕ್ರಮ ಜರುಗಿಸತಕ್ಕದ್ದು;

(i) ಕಾರ್ಯವ್ಯಾಪ್ತಿಯ ನಗರ ಯೋಜನಾ ಪ್ರಾಧಿಕಾರ;

(ii) ಕಾರ್ಯವ್ಯಾಪ್ತಿಯ ತಹಶೀಲ್ದಾರ್ ಮತ್ತು ಉಪ-ವಿಭಾಗಾಧಿಕಾರಿಗಳ ಸ್ಥಳ ಪರಿಶೀಲನೆ, ಸಮೀಕ್ಷಾ ನಕ್ಷೆ ಮತ್ತು ಪಭಿಪ್ರಾಯ ಹಾಗೂ ಪರಿಶೀಲನಾ ವರದಿ.

(iii) ಅಗತ್ಯವೆಂದು ಭಾವಿಸಿದ ಯಾವುದೇ ಇತರ ಪ್ರಾಧಿಕಾರ;

(2) ಜಿಲ್ಲಾಧಿಕಾರಿಗಳು ಈ ಮುಂದಿನಂತೆ ಅರ್ಜಿಯನ್ನು ನಿರ್ಧರಿಸತಕ್ಕದ್ದು;

(ಎ) ಅರ್ಜಿಯನ್ನು ತಿರಸ್ಕರಿಸಿದರೆ, 15 ದಿನಗಳೊಳಗಾಗಿ ಕಾರಣಗಳೊಂದಿಗೆ ಹಿಂಬರಹವನ್ನು ಒದಗಿಸತಕ್ಕದ್ದು.

(ಬಿ) ಅರ್ಜಿಯನ್ನು ಸ್ವೀಕರಿಸಿದರಿ, 107, 107ಎ, 107ಎಎ, ಮತ್ತು ಸಂದರ್ಭಾನುಸಾರವಾಗಿ 108ನೇ ನಿಯಮಗಳ ಅಡಿಯಲ್ಲಿ 30 ದಿನಗಳೊಳಗಾಗಿ ಪರಿವರ್ತನಾ ಶುಲ್ಕ ಮತ್ತು ಜುಲ್ಮಾನೆಗಳಿಗೆ (ಅನ್ವಯವಾಗುವಂತೆ) ತಗಾದೆ ನೋಟಿಸನ್ನು ನೀಡತಕ್ಕದ್ದು.

(ಸಿ) ಪೂರ್ಣ ಪಾವತಿಯ ನಂತರ, ಸರ್ಕಾರದಿಂದ ಅಧಿಸೂಚಿಸಲಾದ ಪ್ರಕ್ರಿಯೆಯ ಮೂಲಕ ಡಿಜಿಟಲ್ ಸಹಿ ಮಾಡಲ್ಪಟ್ಟ ಪರಿವರ್ತನಾ ಆದೇಶವನ್ನು ನೀಡತಕ್ಕದ್ದು.

(ಡಿ) 30 ದಿನಗಳೊಳಗೆ ನಿರ್ಧರಿಸದಿದ್ದರೆ, ಸ್ವೀಕೃತವೆಂದು ಪರಿಗಣಿಸಿ ಸಿಸ್ವಮ್-ಸೃಜಿಸಿದ ಪರಿವರ್ತನಾ ಆದೇಶವನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದು.

(3) ಅರ್ಜಿದಾರನು ನಿಗದಿತ ಸಮಯದೊಳಗೆ ಮಾನ್ಯ ಪಾವತಿ ಮಾಡಲು ವಿಫಲವಾದರೆ, 30 ದಿನಗಳ ಅಂತಿಮ ಅವಕಾಶವನ್ನು ನೀಡತಕ್ಕದ್ದು. ಆನಂತರ ಅದನ್ನು ಪಾಲಿಸಲು ವಿಫಲವಾದರೆ, ಲಿಖಿತವಾಗಿ ದಾಖಲಿಸಲಾದ ಕಾರಣಗಳೊಂದಿಗೆ ಅರ್ಜಿಯನ್ನು ತಿರಸ್ಕರಿಸತಕ್ಕದ್ದು. ಸಮಯವನ್ನು ಮತ್ತಷ್ಟು ವಿಸ್ತರಿಸಲು ಅಥವಾ ಕಂತುಗಳಲ್ಲಿ ಪಾವತಿ ಮಾಡಲು ಯಾವುದೇ ವಿನಂತಿ ಅಥವಾ ಅರ್ಜಿಯನ್ನು ಸ್ವೀಕರಿಸತಕ್ಕದ್ದಲ್ಲ ಅಥವಾ ಮಂಜೂರು ಮಾಡತಕ್ಕದ್ದಲ್ಲ.

ವಿವರಣೆ: ಈ ನಿಯಮದ ಉದ್ದೇಶಗಳಿಗಾಗಿ ಮಾನ್ಯವಾದ ಪಾವತಿ ಎಂದರೆ ಬೇಡಿಕೆಯ ಮೊತ್ತದ ಅನುಸಾರವಾಗಿಲ್ಲದ ಅಥವಾ ತಿಳಿಸಲಾದ ಸಯಮ ಮಿತಿಯೊಳಗಿನ ಯಾವುದೇ ಪಾವತಿ ಎಂದರ್ಥ ಮತ್ತು ಸಂದಾಯ ಮತ್ತು ಇತ್ಯರ್ಥಗಳ ವ್ಯವಸ್ಥೆಯ ಅಧಿನಿಯಮ, 2007ರ 25ನೇ ಪ್ರಕರಣದ ಅಡಿಯಲ್ಲಿ ಅರ್ಥೈಸಲಾಗಿರುವಂತೆ ಮತ್ತು ಕಾಲಕಾಲಕ್ಕೆ ಭಾರತೀಯ ರಿಸರ್ವ್ ಹೊರಡಿಸಿದ ವಿನಿಮಯಗಳ ಅಡಿಯಲ್ಲಿ ಮಾನ್ಯಗೊಳ್ಳದ ಯಾವುದೇ ಪಾವತಿಯನ್ನು ಒಳಗೊಂಡಿರತಕ್ಕದ್ದು.

ನಿಯಮ 106ಇ: ರಾಜ್ಯದಲ್ಲಿ 2 ಎಕರೆಗಳವರೆಗಿನ ಭೂಮಿಯಲ್ಲಿ ಹೊಸ ಕೈಗಾರಿಕೆಗಳನ್ನು ಮತ್ತು ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಸ್ಥಾಪಿಸುವುದಕ್ಕಾಗಿ 95 ನೇ ಪ್ರಕರಣದ ಮೇರೆಗೆ ಸ್ವಯಂ ಆಗಿ ಪರಿವರ್ತನೆ ಮಾಡುವುದಕ್ಕಾಗಿ ಕಾರ್ಯವಿಧಾನ. (1) ರಾಜ್ಯದಲ್ಲಿರುವ ಕೃಷಿ ಭೂಮಿಗೆ ಸಂಬಂಧಿಸಿದಂತೆ, 95ನೇ ಪ್ರಕರಣದ ಮೇರೆಗೆ ಡೆಪ್ಯುಟಿ ಕಮೀಷನರ್ ರವರ ಪೂರ್ವಾನುಮತಿಯನ್ನು,

(ಎ) ಎರಡು (2) ಎಕರೆಗಳವರೆಗಿನ ಕೃಷಿ ಭೂಮಿಗಳಲ್ಲಿ ಹೊಸ ಕೈಗಾರಿಕೆಯನ್ನು ಸ್ಥಾಪಿಸುವುದಕ್ಕಾಗಿ; ಅಥವಾ

(ಬಿ) ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022-2027 ರಲ್ಲಿ ನಿಯಮಿಸಲಾದ ನವೀಕರಿಸಬಹುದಾದ ಇಂಧನ ಯೋಜನೆಗಳನ್ನು (ಎಂದರೆ, ಕರ್ನಾಟಕ ರಾಜ್ಯದಲ್ಲಿ ಸ್ಥಾಪಿಸಲಾದ ಎಲ್ಲ ಸೌರ, ಪವನ, ಸೌರ-ಪವನ ಹೈಬ್ರಿಡ್, ಇಂಧನ ಶೇಖರಣೆ, ಕಿರು ಮತ್ತು ಸಣ್ಣ ಜಲಶಕ್ತಿ, ಬಯೋಮಾಸ್, ಸಹ ಉತ್ಪಾದನೆ, ತ್ಯಾಜ್ಯದಿಂದ ಇಂಧನ ಯೋಜನೆಗಳು ಮತ್ತು ನೂತನ ಉಪಕ್ರಮಗಳು/ಪ್ರಮುಖ ಪ್ರಾಜೆಕ್ಟ್‌ಗಳು) ಸದರಿ ಕಾರ್ಯನೀತಿಗನುಸಾರವಾಗಿ ಇಂಧನ ಇಲಾಖೆಯ ಅನುಮೋದನೆ ಪಡೆಯುವ ಮೂಲಕ ನಿರ್ದಿಷ್ಟಪಡಿಸುವಷ್ಟರ ಮಟ್ಟಿಗೆ ಸ್ಥಾಪಿಸುವುದಕ್ಕಾಗಿ;

- ಅಗತ್ಯಪಡಿಸತಕ್ಕದ್ದಲ್ಲ.

(2) ಅರ್ಜಿದಾರನು, ಇಂಧನ ಇಲಾಖೆಯ ಅನುಮೋದನೆಯ ಪ್ರತಿಯೊಂದಿಗೆ 106 ಬಿ ನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ದಸ್ತಾವೇಜುಗಳನ್ನು ಲಗತ್ತಿಸಿದ ಆನ್‌ಲೈನ್ ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) ಪೂರ್ಣ ಸಂದಾಯವನ್ನು ಸ್ವೀಕರಿಸಿದ ಮೇಲೆ, ಸರ್ಕಾರವು ಅಧಿಸೂಚಿಸಿದ ಆನ್‌ಲೈನ್ ವ್ಯವಸ್ಥೆ ಮುಖಾಂತರ ಡಿಜಿಟಲ್ ಸಹಿ ಹಾಕಿದ ಪರಿವರ್ತನೆ ಆದೇಶವನ್ನು ಹೊರಡಿಸತಕ್ಕದ್ದು.

(4) ಅರ್ಜಿದಾರನು ನಿಗದಿತ ಸಮಯದೊಳಗೆ ಗೊತ್ತುಪಡಿಸಿದ ಸಂದಾಯವನ್ನು ಮಾಡಲು ವಿಫಲನಾದರೆ, 30 ದಿನಗಳ ಅಂತಿಮ ಅವಕಾಶವನ್ನು ನೀಡತಕ್ಕದ್ದು. ಈ ಅವಧಿಯೊಳಗೆ ಅದನ್ನು

ಪಾಲಿಸಲು ವಿಫಲನಾದರೆ, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳೊಂದಿಗೆ ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

ನಿಯಮ 106ಎಫ್: ದುರುಪಯೋಗ, ಸುಳ್ಳು ಘೋಷಣೆ ಮತ್ತು ಜುಲ್ಮಾನೆಗಳು.

(1) ಯಾವುದೇ ಸಮಯದಲ್ಲಿ ಅರ್ಜಿ ಅಥವಾ ಅಫಿಡವಿಟ್ ಅಥವಾ ಅದರ ಯಾವುದೇ ವಿಷಯಗಳು ಅಥವಾ ಲಗತ್ತಿಸಲಾದ ಯಾವುದೇ ದಾಖಲೆಗಳು ಸುಳ್ಳು ಅಥವಾ ನಕಲಿ ಎಂದು ಕಂಡುಬಂದಲ್ಲಿ ಅಥವಾ ಕಾನೂನುಬಾಹಿರ ವಿಧಾನಗಳಿಂದ ಪಡೆದಿರುವುದು ಅಥವಾ ಸುಳ್ಳು ಅಥವಾ ದಾರಿತಪ್ಪಿಸುವ ಹೇಳಿಕೆಗಳ ಆಧಾರದ ಮೇಲೆ ಇವೆ ಎಂದು ಕಂಡುಬಂದರೆ, ಅಥವಾ ಯಾವುದೇ ಸಮಯದಲ್ಲಿ ಜಿಲ್ಲಾಧಿಕಾರಿ ಅಥವಾ ಸಕ್ಷಮ ಯೋಜನಾ ಪ್ರಾಧಿಕಾರ ಅಥವಾ ಯಾವುದೇ ಇತರ ಪ್ರಾಧಿಕಾರವು ಕೃಷಿ ಉದ್ದೇಶಗಳಿಗಾಗಿ ಮೌಲ್ಯಮಾಪನ ಮಾಡಲಾದ ಅಥವಾ ಹೊಂದಿರುವ ಯಾವುದೇ ಭೂಮಿಯನ್ನು ಡೈವರ್ಟ್ ಮಾಡಲಾಗಿದೆ ಎಂದು ಕಂಡುಬಂದರೆ ಅಥವಾ ಅಧಿನಿಯಮದ 95ಜನೇ ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶ ಅಥವಾ ಅನುಮತಿ ಅಥವಾ ಪರಿವರ್ತನಾ ಪ್ರಮಾಣಪತ್ರವನ್ನು ಉಲ್ಲಂಘಿಸಲಾಗಿದೆ ಎಂದು ಕಂಡುಕೊಂಡರೆ, ಪರಿವರ್ತನೆಯನ್ನು ರದ್ದುಗೊಳಿಸತಕ್ಕದ್ದು, ಈ ಅಧಿನಿಯಮದ 96ನೇ ಪ್ರಕರಣದಲ್ಲಿ ಸೂಚಿಸಲಾದ ಕಾರ್ಯವಿಧಾನದ ಅನುಸಾರ ಎಲ್ಲಾ ಶುಲ್ಕಗಳು ಮತ್ತು ಭೂಮಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ನಮೂನೆ-21ಡಿ ಯಲ್ಲಿ ಸೂಚಿಸಿದಂತೆ ನೋಟಿಸ್ ನೀಡಿದ ನಂತರ, ಅರ್ಜಿದಾರರಿಗೆ ಒಂದು ಅವಕಾಶವನ್ನು ಒದಗಿಸಬೇಕು. ಅರ್ಜಿದಾರರ ವಿರುದ್ಧ 228 ಮತ್ತು 229ನೇ ಪ್ರಕರಣಗಳ ಅಡಿಯಲ್ಲಿ ಪ್ರಕರಣದ ವಾಸ್ತವಾಂಶಗಳನ್ನು ಅವಲಂಬಿಸಿ, ಭಾರತೀಯ ನ್ಯಾಯ ಸಂಹಿತೆ 2023ರ 228 ಮತ್ತು 229ನೇ ಪ್ರಕರಣಗಳ ಅಡಿಯಲ್ಲಿ ಜಿಲ್ಲಾಧಿಕಾರಿಗಳು, ಅರ್ಜಿದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು ಸಹ ಸೂಕ್ತವಾಗಿರುತ್ತದೆ.

(2) ಒಂದು ಲಕ್ಷ ರೂಪಾಯಿಗಳನ್ನು ಮೀರಿದ ದಂಡವನ್ನು ವಿಧಿಸಬಹುದು ಮತ್ತು ಮುಂದುವರಿದ ಉಲ್ಲಂಘನೆಗಾಗಿ ಪ್ರತಿ ದಿನಕ್ಕೆ ಎರಡು ಸಾವಿರದ ಐನೂರು ರೂಪಾಯಿಗಳ ಹೆಚ್ಚುವರಿ ದಂಡವನ್ನು ವಿಧಸತಕ್ಕದ್ದು ಮತ್ತು ಉಲ್ಲಂಘನೆಯನ್ನು ಮಾಡಿದ ಅರ್ಜಿದಾರನು ಅರ್ಜಿದಾರನಾಗಿರಲಿ ಅಥವಾ ತರುವಾಯದ ಅಥವಾ ಮಾಲೀಕನಾಗಿರಲಿ, ನಿರ್ದಿಷ್ಟಪಡಿಸಿದ ಅವಧಿಯೊಳಗೆ ಪಾವತಿಸಲು ವಿಫಲವಾದರಿ ಭೂ ಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು. ಈ ಉದ್ದೇಶಗಳಿಗಾಗಿ, ಅಂಥ ದಂಡ ಮತ್ತು ಹೆಚ್ಚುವರಿ ದಂಡವನ್ನು ಋಣಭಾರದಂತೆ ಆರ್ ಟಿ ಸಿಯಲ್ಲಿ ನಮೂದಿಸತಕ್ಕದ್ದು.

(3) ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 88ನೇ ಅಡಿಯಲ್ಲಿ 15 ದಿನಗಳ ಕಾರಣ ಕೇಳಿ ನೋಟಿಸ್ ನೀಡುವುದು ಮತ್ತು ವಿಚಾರಣೆಯ ತರುವಾಯ, ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಆದೇಶವನ್ನು ಹೊರಡಿಸುವುದು;

(4) ತದನುಸಾರವಾಗಿ, ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ತಹಶೀಲ್ದಾರರಿಗೆ ನಿರ್ದೇಶಿಸುವುದು.

(5) ದಂಡಗಳನ್ನು ಪಾವತಿಸದಿದ್ದರಿ, ದಂಡಗಳನ್ನು ಅಧಿನಿಯಮ ಮತ್ತು ಅದರಡಿ ನಿಯಮಗಳ 190ನೇ ಪ್ರಕರಣದ ಮೇರೆಗೆ ಭೂ ಕಂದಾಯದ ಬಾಕಿಯಂತೆ ವಸೂಲು ಮಾಡಸತಕ್ಕದ್ದು.''

25. 107ನೇ ನಿಯಮದ ಪ್ರತ್ಯಾಯೋಜನೆ.- ಸದರಿ ನಿಯಮಗಳ 107ನೇ ನಿಯಮದ ಬದಲಾಗಿ ಈ ಮುಂದಿನದ್ದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"107. 95ನೇ ಪ್ರಕರಣದ (7)ನೇ ಉಪ-ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ದಂಡದ ಮೊತ್ತವು ಉಪ-ಪ್ರಕರಣ (5)ರ ಮೇರೆಗಿನ ಉಲ್ಲೇಖವನ್ನು ಹೊರತುಪಡಿಸಿ, ಈ ಕೆಳಗಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಲಾದ ದರಗಳಲ್ಲಿ ಇರತಕ್ಕದ್ದು, ಎಂದರೆ:-

ಕ್ರ.ಸಂ.	ವಿಸ್ತೀರ್ಣ	**ಪ್ರತಿ ಚ.ಮೀ.ಗೆ ಜುಲ್ಮಾನೆಯ ದರ ರೂಪಾಯಿಗಳಲ್ಲಿ**	
		ವಸತಿ	**ಹೋಟೆಲ್‌ಗಳು, ರೆಸಾರ್ಟ್‌ಗಳು ಮತ್ತು ಕ್ಲಬ್‌ಗಳು, ಇತ್ಯಾದಿಗಳನ್ನು ಒಳಗೊಂಡಂತೆ ವಸತಿಯೇತರ**
1	ಮುನ್ಸಿಪಲ್ ಕಾರ್ಪೋರೇಷನ್ ವ್ಯಾಪ್ತಿ ಮತ್ತು ಬಿಬಿಎಂಪಿ ವ್ಯಾಪ್ತಿಯಿಂದ 18 ಕಿಲೋಮೀಟರ್ ಅಂತರದೊಳಗಿರುವ ಎಲ್ಲಾ ಭೂಮಿ ಮತ್ತು ಇತರ ಸ್ಥಳಗಳು	**22.00**	**76.00**
2	(ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು ದಕ್ಷಿಣ ಜಿಲ್ಲೆ) ಮುನ್ಸಿಪಲ್ ವ್ಯಾಪ್ತಿಯೊಳಗಿನ ಭೂಮಿಗಳು ಮತ್ತು ಇತರ ಸ್ಥಳಗಳು ಸಹ	**17.00**	**54.00**
3	ಮುನ್ಸಿಪಲ್ ಕಾರ್ಪೋರೇಷನ್ ವ್ಯಾಪ್ತಿ ಮತ್ತು ಕಾರ್ಪೋರೇಷನ್ ವ್ಯಾಪ್ತಿಯಿಂದ 12 ಕಿಲೋಮೀಟರ್ ಅಂತರದೊಳಗಿರುವ ಎಲ್ಲಾ ಭೂಮಗಳು ಕ್ರ.ಸಂ.1 ಮತ್ತು ಕ್ರ.ಸಂ. 2ರಲ್ಲಿ ಉಲ್ಲೇಖಿಸಿರುವುದನ್ನು ಹೊರತುಪಡಿಸಿ)	**13.00**	**32.00**
4	ನಗರಸಭೆ ವ್ಯಾಪ್ತಿ ಮತ್ತು ಮುನ್ಸಿಪಲ್ ವ್ಯಾಪ್ತಿಯಿಂದ ಕಿಲೋಮೀಟರ್ ಅಂತರದೊಳಗಿರುವ ಎಲ್ಲಾ ಭೂಮಿಗಳು ಕ್ರ.ಸಮ.1, 2, ಮತ್ತು	**09.00**	**17.00**

	ಕ್ರ.ಸಂ.3ರಲ್ಲಿ ಉಲ್ಲೇಖಿಸುರುವುದನ್ನು ಹೊರತುಪಡಿಸಿ)		
5	ಪುರಸಭೆ ವ್ಯಾಪ್ತಿಯಿಂದ 5 ಕಿಲೋಮೀಟರ್ ಅಂತರದೊಳಗಿರುವ ಪೌರಸಭೆಯ ವ್ಯಾಪ್ತಿ ಕ್ರ.ಸಂ.1, 2, 3 ಮತ್ತು ಕ್ರ.ಸಂ. 4ರಲ್ಲಿ ಉಲ್ಲೇಖಿಸಿರುವುದನ್ನು ಹೊರತುಪಡಿಸಿ)	**09.00**	**13.00**
6	ಇತರ ಸ್ಥಳಗಳು	**04.00**	**05.00**

ಟಿಪ್ಪಣಿ: ಜಿಲ್ಲಾ ಮತ್ತು ಪೌರಸಭೆಯ ಪ್ರದೇಶದ ಗಡಿಗಳು ಅತಿಕ್ರಮಿಸುವಲ್ಲಿ ಹೆಚ್ಚಿನ ದರವು ಮಾನ್ಯವಾಗಿರತಕ್ಕದ್ದು.

26. 107ಎ ನಿಯಮದ ತಿದ್ದುಪಡಿ.- ಸದರಿ ನಿಯಮಗಳ 107ಎ ನಿಯಮದಲ್ಲಿ,-

(i) ಕೋಷ್ಟಕದ ಬದಲಾಗಿ ಈ ಮುಂದಿನವುಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"ಕೋಷ್ಟಕ

ಕ್ರ.ಸಂ.	**ವಿಸ್ತೀರ್ಣ/ಪ್ರದೇಶ**	**ಪ್ರತಿ ಚದರ ಅಡಿಗೆ ಪರಿಷ್ಕೃತ ಜುಲ್ಮಾನೆಯ ದರ ರೂಪಾಯಿಗಳಲ್ಲಿ**	
		ವಸತಿ	**ವಸತಿಯೇತರ**
1	ಮುನ್ಸಿಪಲ್ ಕಾರ್ಪೋರೇಷನ್ ವ್ಯಾಪ್ತಿ ಮತ್ತು ಬಿಬಿಎಂಪಿ ವ್ಯಾಪ್ತಿಯಿಂದ 18 ಕಿಲೋಮೀಟರ್ ಅಂತರದೊಳಗಿರುವ ಎಲ್ಲಾ ಭೂಮಿಗಳು ಮತ್ತು ಇತರ ಸ್ಥಳಗಳು	**17.00**	**86.00**
2	(ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು ದಕ್ಷಿಣ ಜಿಲ್ಲೆ) ಮುನ್ಸಿಪಲ್ ವ್ಯಾಪ್ತಿಯೊಳಗೆ ಇರುವ ಭೂಮಿಗಳು ಮತ್ತು ಇತರ ಸ್ಥಳಗಳು ಸಹ	**17.00**	**54.00**
3	ಮುನ್ಸಿಪಲ್ ಕಾರ್ಪೋರೇಷನ್ ವ್ಯಾಪ್ತಿ ಮತ್ತು ಕಾರ್ಪೋರೇಷನ್ ವ್ಯಾಪ್ತಿಯಿಂದ 12 ಕಿಲೋಮೀಟರ್ ಅಂತರದೊಳಗಿರುವ ಎಲ್ಲಾ ಭೂಮಿಗಳು ಕ್ರ.ಸಂ.1 ಮತ್ತು ಕ್ರ.ಸಂ. 2ರಲ್ಲಿ ಉಲ್ಲೇಖಿಸಿರುವುದನ್ನು ಹೊರತುಪಡಿಸಿ)	**11.00**	**53.00**

4	ನಗರಸಭೆ ವ್ಯಾಪ್ತಿ ಮತ್ತು ಪೌರಸಭೆಯ ವ್ಯಾಪ್ತಿಯಿಂದ 8 ಕಿಲೋಮೀಟರ್ ಅಂತರದೊಳಗಿರುವ ಎಲ್ಲಾ ಭೂಮಿಗಳು ಕ್ರ.ಸಂ.1, 2 ಮತ್ತು ಕ್ರ.ಸಂ.3ರಲ್ಲಿ ಉಲ್ಲೇಖಿಸಿರುವುದನ್ನು ಹೊರತುಪಡಿಸಿ)	**05.00**	**23.00**
5	ಪುರಸಭೆ ವ್ಯಾಪ್ತಿಯಿಂದ 5 ಕಿಲೋಮೀಟರ್ ಅಂತರದೊಳಗಿರುವ ಪೌರಸಭೆಯ ವ್ಯಾಪ್ತಿ ಕ್ರ.ಸಮ.1, 2, 3 ಮತ್ತು ಕ್ರ.ಸಂ. 4ರಲ್ಲಿ ಉಲ್ಲೇಖಿಸಿರುವುದನ್ನು ಹೊರತುಪಡಿಸಿ)	**01.00**	**02.00**
6	ಇತರ ಸ್ಥಳಗಳು	**01.00**	**02.00**

ಟಿಪ್ಪಣಿ: ಜಿಲ್ಲಾ ಮತ್ತು ಪೌರಸಭೆಯ ಪ್ರದೇಶದ ಗಡಿಗಳು ಅತಿಕ್ರಮಿಸುವಲ್ಲಿ ಹೆಚ್ಚಿನ ದರವು ಮಾನ್ಯವಾಗಿರತಕ್ಕದ್ದು.

(ii) ಪರಂತುಕದಲ್ಲಿ ''ಸಂಬಂಧಪಟ್ಟ'' ಎಂಬ ಪದಗಳ ತರುವಾಯ "ಅನಧಿಕೃತ" ಎಂಬ ಪದವನ್ನು ಸೇರಿಸತಕ್ಕದ್ದು; ಮತ್ತು

(iii) ಪರಂತುಕದಲ್ಲಿ "ಶೇಕಡಾ ಇಪ್ಪತ್ತೈದು" ಎಂಬ ಪದಗಳಿಗೆ "ಶೇಕಡಾ ಐವತ್ತು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

27. 107ಸಿ ಹೊಸ ನಿಯಮದ ಸೇರ್ಪಡೆ.- ಸದರಿ ನಿಯಮಗಳ 100ಬಿ ನಿಯಮದ ತರುವಾಯ, ಈ ಮುಂದಿನ ಹೊಸ ನಿಯಮವನ್ನು ಸೇರಿಸತಕ್ಕದ್ದು, ಎಂದರೆ :-

''107–ಸಿ - ಭೂಮಿಯನ್ನು ಬಿಟ್ಟುಕೊಡುವುದಕ್ಕಾಗಿ ಪ್ರಕ್ರಿಯೆ.- ರಾಜ್ಯ ಸರ್ಕಾರ ಅಥವಾ ಯಾರೇ ಇತರ ವ್ಯಕ್ತಿಯ ಪರವಾಗಿ ತನ್ನ ಭೂಮಿಯನ್ನು ಬಿಟ್ಟುಕೊಡಲು ಬಯಸುವ ವ್ಯಕ್ತಿಯು, ಸ್ವಾಮ್ಯದ ಆರ್ಜನೆಯ ದಸ್ತಾವೇಜೀಯ ಪುರಾವೆಯೊಂದಿಗೆ **ತಹಶೀಲ್ದಾರರಿಗೆ** ಲಿಖಿತದಲ್ಲಿ ತಾನೇ ಅರ್ಜಿ ಸಲ್ಲಿಸತಕ್ಕದ್ದು, ಅದು ಆದ ನಂತರ, **ತಹಶೀಲ್ದಾರರು** ಕ್ಷಿಪ್ರ ವಿಚಾರಣೆಯನ್ನು ನಡೆಸತಕ್ಕದ್ದು, ಸಲ್ಲಿಸಲಾದ ಮೂಲ ದಾಖಲೆಗಳು, ದಸ್ತಾವೇಜುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಸ್ಥಳಕ್ಕೆ ಭೇಟಿ ನೀಡತಕ್ಕದ್ದು, ಹೊಂದಿಕೊಂಡಂತಿರುವ ಹಿಡುವಳಿದಾರರಿಗೆ ನೋಟೀಸ್ಸನ್ನು ನೀಡತಕ್ಕದ್ದು ಮತ್ತು 67, 71 ಅಥವಾ 79ನೇ ಪ್ರಕರಣದ ಮೂಲಕ ಪರಿಭಾಷಿಸಲಾದಂತೆ ಯಾವುದೇ ಭೂಮಿ ಇದ್ದಲ್ಲಿ ಅಥವಾ ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977ರ ಅಡಿಯಲ್ಲಿ ಅಂಥ ಭೂಮಿಯನ್ನು ಮರು ಮಂಜೂರಾತಿ ಮಾಡಿರದಿದ್ದಲ್ಲಿ ಅಥವಾ ಅಂಥ ಭೂಮಿಯನ್ನು ಯಾವುದೇ ಕಾಲದಲ್ಲಿ ಅರಣ್ಯವೆಂದು ಅಥವಾ ವಕ್ಫ್ ಆಸ್ತಿ ಎಂದು ಪರಿಭಾವಿಸಿರುವುದಾಗಿ ಅಧಿಸೂಚಿಸಲಾಗಿದ್ದಲ್ಲಿ ಯಾವುದೇ ಸರ್ವೇ ನಂಬರ್‌ನಲ್ಲಿ ಪ್ರಸ್ತಾವಿತ ಬಿಟ್ಟುಕೊಡುವಿಕೆಯು ಇದೆಯೇ ಅಥವಾ ಸದರಿ ಭೂಮಿಯಲ್ಲಿ ಹಕ್ಕುಗಳನ್ನು ಆರ್ಜಿಸಿರುವ ಇತರ ಯಾರೇ ವ್ಯಕ್ತಿಯಿಂದ ಯಾವುದೇ ಆಕ್ಷೇಪಣೆಗಳು ಇದ್ದಾವೆಯೇ ಎಂಬುದನ್ನು ನಿರ್ಧರಿಸತಕ್ಕದ್ದು ಮತ್ತು ಸದರಿ ಭೂಮಿಯು ಎಲ್ಲಾ ಋಣಭಾರ ರಾಹಿತ್ಯಗಳಿಂದ ಮುಕ್ತವಾಗಿದ್ದರೆ ಮತ್ತು ವರ್ಷದ ಅಂತ್ಯದಿಂದ ಯಾರೇ

ವ್ಯಕ್ತಿಯ ಹೆಸರಿನಲ್ಲಿ ಕಾನೂನುಬದ್ಧವಾಗಿ ಅಸ್ತಿತ್ವದಲ್ಲಿರುವ ಹಕ್ಕುಗಳು, ಹಿಡುವಳಿಗಳು, ಋಣಭಾರ ರಾಹಿತ್ಯಗಳು ಅಥವಾ ನ್ಯಾಯಸಮ್ಮತ ಹಕ್ಕುಗಳಿಗೆ (ಈಕ್ವಿಟಿ) ಒಳಪಟ್ಟು ಬಿಟ್ಟುಕೊಡುವಿಕೆಯನ್ನು ಕಾರ್ಯಗತಗೊಳಿಸುವುದರಿಂದಾಗಲೀ ಅಥವಾ ಪರ್ಯಾಲೋಚನೆಗಾಗಿ ಪ್ರಸ್ತಾವವನ್ನು ಸಲ್ಲಿಸುವುದರಿಂದಾಗಲೀ ಸೂಕ್ತವೆಂದು ಭಾವಿಸಲಾದಂತೆ ಆದೇಶಗಳನ್ನು ಹೊರಡಿಸತಕ್ಕದ್ದು ಮತ್ತು ಜಿಲ್ಲಾಧಿಕಾರಿಗಳು ಸೂಕ್ತವೆಂದು ಭಾವಿಸಿದ ಆದೇಶಗಳನ್ನು ಹೊರಡಿಸತಕ್ಕದ್ದು:

ಪರಂತೂ, ಸ್ಪಷ್ಟ ಸ್ವಾಮ್ಯವನ್ನು ಹೊಂದಿರುವ ವ್ಯಕ್ತಿಯು ಸ್ವತಃ ತಾನೇ ಅರ್ಜಿ ಸಲ್ಲಿಸಿದ ಹೊರತು, ಯಾವುದೇ ಅಂಥ ಅರ್ಜಿಯನ್ನು ಪುರಸ್ಕರಿಸತಕ್ಕದ್ದಲ್ಲ ಮತ್ತು ಇನ್ನೊಬ್ಬರ ಹೆಸರಿನಲ್ಲಿ ಸಾಮಾನ್ಯ ಅಥವಾ ವಿಶೇಷ ಅಧಿಕಾರ ಅಥವಾ ಅಟಾರ್ನಿ ಅಥವಾ ಯಾವುದೇ ಇತರೆ ದಸ್ತಾವೇಜನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು ಅರ್ಜಿ ಸಲ್ಲಿಸಲು ಅರ್ಹರೆಂದು ಪರಿಗಣಿಸತಕ್ಕದ್ದಲ್ಲ.

28. 108ನೇ ನಿಯಮದ ತಿದ್ದುಪಡಿ.- ಸದರಿ ನಿಯಮಗಳಲ್ಲಿ, 108ನೇ ನಿಯಮದಲ್ಲಿ, (2)ನೇ ಉಪ-ನಿಯಮದಲ್ಲಿ,-

(i) ಖಂಡ (ii) ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii) ಖಂಡ (iv) ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

29. 108ಇ ನಿಯಮದ ತಿದ್ದುಪಡಿ.- ಸದರಿ ನಿಯಮಗಳ 108ಇ ನಿಯಮದಲ್ಲಿ,-

(i) (1)ನೇ ಉಪ-ನಿಯಮದಲ್ಲಿ, "ತಾಲ್ಲೂಕು" ಎಂಬ ಪದಕ್ಕೆ ಬದಲಾಗಿ "ಚುನಾವಣಾ ಕ್ಷೇತ್ರ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (3)ನೇ ಉಪ-ನಿಯಮಕ್ಕೆ ಈ ಮುಂದಿನವುಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ :-

''(3) (i) ರಾಜ್ಯ ಸರ್ಕಾರವು, ಜನನಂಬರ್ ಆಧಾರದ ಮೇಲೆ ಆ ಚುನಾವಣಾ ಕ್ಷೇತ್ರದ ಪ್ರಮುಖ ಭಾಗವಾಗಿರುವ ತಾಲ್ಲೂಕಿನ ತಹಸೀಲ್ದಾರನನ್ನು ಸಮಿತಿಯ ಕಾರ್ಯದರ್ಶಿಯಾಗಿ ನೇಮಿಸತಕ್ಕದ್ದು:

ಪರಂತು, ಆಯಾ ವಿಧಾನಸಭಾ ಕ್ಷೇತ್ರದ ವಿಧಾನಸಭೆಯ ಸದಸ್ಯರು ತಾವು ಸಮಿತಿಯ ಸದಸ್ಯರಾಗಲು ಸಾಧ್ಯವಿಲ್ಲ ಅಥವಾ ಇಷ್ಟವಿಲ್ಲವೆಂದು ಲಿಖಿತವಾಗಿ ತಿಳಿಯಪಡಿಸಿದ್ದರೆ ಅಥವಾ ಆ ಚುನಾವಣಾ ಕ್ಷೇತ್ರಕ್ಕೆ ವಿಧಾನಸಭಾ ಸದಸ್ಯರ ಸ್ಥಾನವು ತೆರವಾಗಿದ್ದರೆ, ರಾಜ್ಯ ಸರ್ಕಾರವು ಅಂಥ ವಿಧಾನಸಭಾ ಕ್ಷೇತ್ರದ ಸಮಿತಿಯ ಸದಸ್ಯರಾಗಿ ಯಾರೇ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು:

ಮತ್ತೂ ಪರಂತು, ಪ್ರತಿಯೊಂದು ನಗರ ಸ್ಥಳೀಯ ಸಂಸ್ಥೆಗೆ (ಯು.ಎಲ್.ಬಿ.) ಇರುವ ದೂರವನ್ನು ಜಿಲ್ಲಾಧಿಕಾರಿಗಳ ನೇತೃತ್ವದ ಈ ಮುಂದಿನ ಸದಸ್ಯರನ್ನೊಳಗೊಂಡ ಸಮಿತಿಯು ಲೆಕ್ಕ ಹಾಕತಕ್ಕದ್ದು. ಎಂದರೆ:-

(ಎ). ಕಾರ್ಯನಿರ್ವಾಹಕ ಇಂಜಿನಿಯರ್ (ಪಿಡಬ್ಲ್ಯೂಡಿ);

(ಬಿ). ಸಂಬಂಧಪಟ್ಟ ನಗರ ಪಾಲಿಕೆ ಮತ್ತು ಮುನ್ಸಿಪಾಲಿಟಿಗಳ ಎಲ್ಲಾ ಆಯುಕ್ತರು ಮತ್ತು ಮುಖ್ಯ ಅಧಿಕಾರಿಗಳು;

(ಸಿ). ಸಂಬಂಧಪಟ್ಟ ತಾಲ್ಲೂಕು(ಗಳ) ತಹಶೀಲ್ದಾರ್(ರು);

(ಡಿ). ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿ(ಗಳು); ಮತ್ತು

(ಇ). ಸಮಿತಿಗೆ ಸದಸ್ಯ ಕಾರ್ಯದರ್ಶಿಯಾಗಿ ಜಿಲ್ಲಾ ಭೂ ದಾಖಲೆಗಳ ಉಪ ನಿರ್ದೇಶಕರು.

(ii) ಸಮಿತಿಯು ನಗರ ಸ್ಥಳೀಯ ಸಂಸ್ಥೆಯ ಗಡಿಗಳನ್ನು ಅಧಿಸೂಚನೆಗೆ ತರುವಾಯ, ಕಾಲಕಾಲಕ್ಕೆ ಈ ದೂರವನ್ನು ಅಧಿಸೂಚಿಸತಕ್ಕದ್ದು.

(iii) ಈ ತ್ರಿಜ್ಯದ (ರೇಡಿಯಲ್) ದೂರವು, ಇಬ್ಬರು ಜಿಲ್ಲಾಧಿಕಾರಿಗಳ ಅಧಿಕಾರವ್ಯಾಪ್ತಿಯಡಿಯಲ್ಲಿ ಬರುವ ಸಂದರ್ಭದಲ್ಲಿ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಸದಸ್ಯರೊಂದಿಗೆ ಸಹ-ಅಧ್ಯಕ್ಷತೆಯಲ್ಲಿ ಸಮಿತಿಯ ಮೂಲಕ ಅಧಿಸೂಚನೆಯನ್ನು ಮಾಡತಕ್ಕದ್ದು ಮತ್ತು ಹೆಚ್ಚಿನ ವಿಸ್ತೀರ್ಣವುಳ್ಳ ಜಿಲ್ಲೆಯ ಡಿಡಿಎಲ್ಆರ್ ಸಮಿತಿಗೆ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

30. **ನಿಯಮ** 108**ಜೆ ತಿದ್ದುಪಡಿ**.- ಸದರಿ ನಿಯಮಗಳ 108ಜೆ ನಿಯಮಗಳಲ್ಲಿ,-

(i) ಉಪ-ನಿಯಮ (1)ರಲ್ಲಿ, (ii)ನೇ ಖಂಡದ ನಂತರ ಈ ಮುಂದಿನ ಖಂಡಗಳನ್ನು ಸೇರಿಸತಕ್ಕದ್ದು, ಎಂದರೆ:-

"(iii) ಮಂಜೂರಾತಿ ಪಡೆದವನು ಭೂಮಿಯನ್ನು ಒಳಗೇಣಿಗೆ ನೀಡತಕ್ಕದ್ದಲ್ಲ;

(iv) ಭೂಮಿಯನ್ನು ಯಾರೇ ವ್ಯಕ್ತಿಗೆ ಉಡುಗೊರೆಯಾಗಿ ನೀಡಿದ್ದರೆ ಅಥವಾ ಯಾರೇ ವ್ಯಕ್ತಿಯು ಪಿತ್ರಾರ್ಜಿತವಾಗಿ ಹೊಂದಿದ್ದರೆ, ಇಲ್ಲಿನ ಷರತ್ತುಗಳು ಆತನು ಅಥವಾ ಆಕೆಯು ಮಂಜೂರಾತಿ ಪಡೆದವನಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು;

(v) ಕರ್ನಾಟಕ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978 ಅನ್ವಯಿಸುವಂಥ ಭೂಮಿಗಳನ್ನು ಹೊರತುಪಡಿಸಿದಂಥ ಭೂಮಿಗಳು.''

(ii) ಹಾಗೆ ಸೇರಿಸಲಾದ (iii), (iv), (v)ನೇ ಖಂಡದ ನಂತರ, ಪ್ರಸ್ತುತ ಇರುವ (iii) ಮತ್ತು (iv)ನೇ ಖಂಡಗಳಿಗೆ (vi) ಮತ್ತು (vii) ಖಂಡಗಳೆಂಬುದಾಗಿ ಮರು ಸಂಖ್ಯೆ ನೀಡತಕ್ಕದ್ದು.

(iii) ಮೇಲಿನ ಖಂಡಕ್ಕೆ ಮರು ಸಂಖ್ಯೆ ನೀಡಿದ ನಂತರ (vi)ನೇ ಖಂಡದಲ್ಲಿ, "ವಿಸ್ತೀರ್ಣ" ಎಂಬ ಪದಕ್ಕೆ ಬದಲಾಗಿ "ಗುಂಟೆಗಳು" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು.

(iv) ಖಂಡ (vii)ರಲ್ಲಿ, "ಉಪ ವಿಭಾಗಾಧಿಕಾರಿ" ಎಂಬ ಪದಗಳ ಬದಲಾಗಿ "ಜಿಲ್ಲಾಧಿಕಾರಿ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(v) ಖಂಡ (vii)ರ ಮೊದಲನೇ ಪರಂತುಕದ ನಂತರ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತೂ ಪರಂತು, ಜಿಲ್ಲಾಧಿಕಾರಿಯ ಯಾವುದೇ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆ ಆದೇಶವು ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗಾಗಿ ಕಂದಾಯ ಆಯುಕ್ತರಲ್ಲಿ ಅಪೀಲನ್ನು ಹೂಡಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಕಂದಾಯ ಆಯುಕ್ತರು ಹೊರಡಿಸುವ ಆದೇಶವೇ ಅಂತಿಮವಾಗಿರತಕ್ಕದ್ದು."

31. **108-ಓ ನಿಯಮದ ತಿದ್ದುಪಡಿ**.- ಸದರಿ ನಿಯಮಗಳ 108-ಓ ನಿಯಮದಲ್ಲಿ, ಈ ಮುಂದಿನ ಪರಂತುಕವನ್ನು ಕೊನೆಗೆ ಸೇರಿಸತಕ್ಕದ್ದು, ಎಂದರೆ:-

"ಪರಂತು, ಪ್ರತಿ ನಗರ ಸ್ಥಳೀಯ ಸಂಸ್ಥೆ ಸಂಬಂಧಿಸಿದಂತೆ ಈ ಕೆಳಗಿನ ಸದಸ್ಯರುಗಳನ್ನುಳ್ಳ ಮತ್ತು ಜಿಲ್ಲಾಧಿಕಾರಿಯ ನೇತೃತ್ವದ ಸಮಿತಿಯು ಇಲ್ಲಿನ ಅಂತರವನ್ನು ಲೆಕ್ಕಹಾಕತಕ್ಕದ್ದು, ಎಂದರೆ:-

(ಎ) ಕಾರ್ಯಕಾರಿ ಇಂಜಿನಿಯರ್ (ಲೋಕೋಪಯೋಗಿ);

(ಬಿ) ನಗರ ಪಾಲಿಕೆ ಮತ್ತು ಸಂಬಂಧಪಟ್ಟ ಪೌರಾಡಳಿತಗಳ ಎಲ್ಲ ಆಯುಕ್ತರು ಮತ್ತು ಮುಖ್ಯ ಅಧಿಕಾರಿಗಳು;

(ಸಿ) ಸಂಬಂಧಪಟ್ಟ ತಾಲೂಕಿನ (ಗಳ) ತಹಶೀಲ್ದಾರ್(ರು);

(ಡಿ) ಸಂಬಂಧಪಟ್ಟ ತಾಲೂಕು ಪಂಚಾಯಿತಿ(ಗಳ)ಯ ಕಾರ್ಯನಿರ್ವಹಣಾಧಿಕಾರಿ(ಗಳು); ಮತ್ತು

(ಇ) ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಜಿಲ್ಲೆಯ ಭೂದಾಖಲೆಗಳ ಉಪ ನಿರ್ದೇಶಕರು.

(i) ಸಮಿತಿಯು, ನಗರ ಸ್ಥಳೀಯ ಸಂಸ್ಥೆಗಳ ಗಡಿಗಳ ಅಧಿಸೂಚನೆಯನ್ನು ಹೊರಡಿಸಿದ ಆನಂತರ ಈ ಅಂತರವನ್ನು ಕಾಲಕಾಲಕ್ಕೆ ಅಧಿಸೂಚಿಸತಕ್ಕದ್ದು.

(ii) ಈ ರೇಡಿಯಲ್ ಅಂತರವು ಇಬ್ಬರು ಜಿಲ್ಲಾಧಿಕಾರಿಗಳ ಅಧಿಕಾರವ್ಯಾಪ್ತಿಯಡಿಯಲ್ಲಿ ಬರುವ ಸಂದರ್ಭದಲ್ಲಿ, ಸಂಬಂಧಪಟ್ಟ ಸದಸ್ಯರೊಂದಿಗೆ ಮತ್ತು ಬಹುಪಾಲು ವಿಸ್ತೀರ್ಣವುಳ್ಳ ಜಿಲ್ಲೆಯ ಭೂದಾಖಲೆಗಳ ಉಪ ನಿರ್ದೇಶಕರು (ಡಿಡಿಎಲ್ಆರ್) ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವಂಥ, ಸಂಬಂಧಪಟ್ಟ ಜಿಲ್ಲಾಧಿಕಾರಿಯು ಸಹ-ಮುಖ್ಯಸ್ಥರಾಗಿರುವಂಥ ಸಮಿತಿಯು ಅಧಿಸೂಚನೆ ಹೊರಡಿಸತಕ್ಕದ್ದು."

32. **108-ಝಿಡ್ ನಿಯಮದ ತಿದ್ದುಪಡಿ**.- ಸದರಿ ನಿಯಮಗಳ 108-ಝಿಡ್‌ಡಿ ಯ ನಿಯಮದಲ್ಲಿ, "ಆರು ವರ್ಷಗಳು" ಎನ್ನುವ ಪದಗಳ ಬದಲಾಗಿ "ಎಂಟು ವರ್ಷಗಳು" ಎನ್ನುವ ಪದಗಳನ್ನು ಮತ್ತು "ಅಧಿಕಾರವ್ಯಾಪ್ತಿಯಿರುವ ತಾಲೂಕಿನ ತಹಶೀಲ್ದಾರ್ ಪರವಾಗಿ, ಅಧಿಕಾರವ್ಯಾಪ್ತಿಯಿರುವ ಅಟಲ್‌ಜೀ ಜನಸ್ನೇಹಿ ಕೇಂದ್ರ" ಎನ್ನುವ ಪದಗಳ ಬದಲಾಗಿ "ಅಧಿಕಾರವ್ಯಾಪ್ತಿಯಿರುವ ತಾಲೂಕಿನ ತಹಶೀಲ್ದಾರರಿಗೆ ಸಂದಾಯ ಮಾಡಬೇಕಾದ" ಎನ್ನುವ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

33. **ಹೊಸ ನಿಯಮ 108-ಝಿಡ್ ನ ಸೇರ್ಪಡೆ**.- ಸದರಿ ನಿಯಮದ 108-ಝಿಡ್‌ಐ ನಿಯಮದ ನಂತರ, ಈ ಮುಂದಿನ ಹೊಸ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:-

"108. ಝಿಡ್‌ಜೆ. ಪ್ರಕರಣ **104**ರ ಮೇರೆಗೆ ಕೆಲವೊಂದು ಭೂಮಿಗಳ ಅನಧಿಕೃತ ಒತ್ತುವರಿಯನ್ನು ತೆಗೆದುಹಾಕುವುದು:

(1) ಯಾರೇ ವ್ಯಕ್ತಿಯು ಕರ್ನಾಟಕ ಭೂ ಕಂದಾಯ ಅಧಿನಿಯಮದ 67 ಅಥವಾ 71ನೇ ಪ್ರಕರಣದ ಮೇರೆಗೆ ಮತ್ತು ಈ ನಿಯಮಗಳ 108ಐ ನಿಯಮದ ಮೇರೆಗೆ ಭೂಮಿಗಳ ಅನಧಿಕೃತ ಅಧಿಭೋಗ ಹೊಂದಿರುವುದಾಗಿ ಅನುಮಾನ ಬಂದ ಸಂದರ್ಭದಲ್ಲೆಲ್ಲ, ಅಧಿಕಾರವ್ಯಾಪ್ತಿಯನ್ನು ಹೊಂದಿರುವ ತಹಶೀಲ್ದಾರನು ಅಥವಾ ಕಂದಾಯ ನಿರೀಕ್ಷಕನ ದರ್ಜೆಗಿಂತ ಕಡಿಮೆಯಲ್ಲದ, ತಹಶೀಲ್ದಾರನು ಯುಕ್ತವಾಗಿ ಅಧಿಕೃತಗೊಳಿಸಿದ ಅಧಿಕಾರಿಯು ಅಧಿನಿಯಮದ 38ನೇ ಪ್ರಕರಣದ ಮೇರೆಗೆ ಸರ್ವೇಯನ್ನು ಕೈಗೊಳ್ಳಲು ಸದರಿ ಭೂಮಿಯನ್ನು ಪ್ರವೇಶಿಸತಕ್ಕದ್ದು ಮತ್ತು ಅನುಮಾನಿತ ಒತ್ತುವರಿದಾರನಿಗೆ ನೋಟೀಸನ್ನು ನೀಡಿದ

ತರುವಾಯ ಮತ್ತು ಅವನೊಂದಿಗೆ ಸರ್ವೇ ಫಲಿತಾಂಶಗಳ ಪ್ರತಿಯನ್ನು ಹಂಚಿಕೊಂಡ ತರುವಾಯ, ಯಾವುದಾದರೂ ಆಕ್ಷೇಪಣೆಗಳು ಇದ್ದರೆ ಅವುಗಳನ್ನು ವಿಚಾರಣೆ ಮಾಡಲು ಮುಂದುವರಿಯತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸತಕ್ಕದ್ದು.

(2) ವಿಚಾರಣೆಯನ್ನು ಪೂರ್ಣಗೊಳಿಸಿದ ತರುವಾಯ, ಸದರಿ ವ್ಯಕ್ತಿಯು ಸರ್ಕಾರಿ ಒಡೆತನದ ಭೂಮಿಯನ್ನು ಒತ್ತುವರಿ ಮಾಡಿರುವುದಾಗಿ ಕಂಡುಬಂದರೆ, ತಹಶೀಲ್ದಾರನು ಕ್ಷಿಪ್ರ ತೆರವಿಗಾಗಿ ನೋಟೀಸನ್ನು ನೀಡತಕ್ಕದ್ದು ಮತ್ತು ಆ ಭೂಮಿಯಲ್ಲಿ ಬೆಳೆದಿರುವ ಯಾವುದೇ ಮರಗಳೂ ಸೇರಿದಂತೆ ಯಾವುದೇ ಬೆಳೆಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ಅದರಲ್ಲಿ ಕಟ್ಟಿರುವ ಯಾವುದೇ ಕಟ್ಟಡವನ್ನು ಅಥವಾ ಇತರ ನಿರ್ಮಿತಿಯನ್ನು ತೆಗೆದುಹಾಕತಕ್ಕದ್ದು, ಇದರ ಜೊತೆಗೆ, ಯಾವುದೇ ದೇವರಕಾಡು, ಉರ್ದುವೆ, ಗುಂಡುತೋಪು ಟ್ಯಾಂಕ್‌ಬೆಡ್, ಖರಾಬು ಹಳ್ಳ, ಡೇಟ್ ರಿಸರ್ವ್, ಸ್ಮಶಾನಗಳು, ದೇವರಕಾಡು, ಉರ್ದುವೆ, ಗುಂಡುತೋಪು ಟ್ಯಾಂಕ್‌ಬೆಡ್, ಫುಟ್ ಖರಾಬು ಹಳ್ಳ, ಡೇಟ್ ರಿಸರ್ವ್, ಸ್ಮಶಾನಗಳು, ಸಾರ್ವಜನಿಕ ರಸ್ತೆಗಳು, ದಾರಿಗಳು, ಹಾದಿಗಳು ಮತ್ತು ಮಾರ್ಗಗಳು, ಸೇತುವೆಗಳು, ಚರಂಡಿಗಳು, ಮೋರಿಗಳು ಮತ್ತು ಬೇಲಿಗಳು, ನದಿಗಳು, ತೊರೆಗಳು, ನಾಲೆಗಳು, ಸರೋವರಗಳು, ಕೆರೆಗಳು ಮತ್ತು ಎಲ್ಲಾ ಕಾಲುವೆಗಳು ಮತ್ತು ಜಲಮಾರ್ಗಗಳಿಗೆ ಮತ್ತು ಎಲ್ಲಾ ನಿಂತ ಮತ್ತು ಹರಿಯುವ ನೀರಿಗೆ ಮಾಡಲಾದ ಯಾವುದೇ ಮಾರ್ಪಾಡು ಅಥವಾ ಹಾನಿಯನ್ನು ಭೂಕಂದಾಯ ಬಾಕಿಗಳಂತೆ ವಸೂಲು ಮಾಡತಕ್ಕದ್ದು.

(3) ತಹಶೀಲ್ದಾರನು ಸಾರ್ವಜನಿಕ ಸೌಲಭ್ಯಗಳಿಗೆ ಮತ್ತು ಮರಗಳಿಗೆ ಆದ ಯಾವುದೇ ಹಾನಿಯನ್ನು ಮತ್ತು ಭೂಮಿಯ ಮಾರ್ಪಾಡನ್ನು ಸರಿಪಡಿಸುವ ವೆಚ್ಚವನ್ನು ಅಂದಾಜು ಮಾಡತಕ್ಕದ್ದು ಮತ್ತು ಈ ನಿಯಮಗಳಲ್ಲಿ ನೀಡಲಾದ ಕಾರ್ಯವಿಧಾನದ ಅನುಸಾರ ವಸೂಲಾತಿ ನೋಟೀಸನ್ನು ಹೊರಡಿಸತಕ್ಕದ್ದು.

ಪರಂತು, ತಹಶೀಲ್ದಾರನು, ಒತ್ತುವರಿಯನ್ನು ತೆಗೆದುಹಾಕುವ ವೆಚ್ಚವನ್ನು ಸಹ ಭೂಕಂದಾಯ ಬಾಕಿಗಳಂತೆ ವಸೂಲು ಮಾಡತಕ್ಕದ್ದು.

ಮತ್ತೂ ಪರಂತು, ಯಾವುದೇ ಹಂತದಲ್ಲಿ ಒತ್ತುವರಿದಾರ ಅಥವಾ ಆತನ ಯಾರೇ ಸಹವರ್ತಿಗಳು ಅಥವಾ ಆತನಲ್ಲಿ ಕೆಲಸ ಮಾಡುವ ಯಾರೇ ವ್ಯಕ್ತಿಯು ಅಪರಾಧಿಕವಾಗಿ ಅತಿಕ್ರಮಣ ಮಾಡುವ ಅಥವಾ ಸಾರ್ವಜನಿಕ ಸ್ವತ್ತಿಗೆ ಹಾನಿಯನ್ನುಂಟುಮಾಡುವ ಅಥವಾ ನಾಶಮಾಡುವ ಅಥವಾ ಮೋಸ ಅಥವಾ ಸುಳ್ಳು ಸ್ಪಷ್ಟನೆ ಅಥವಾ ವಂಚನೆಯೆಸಗುವ ಅಥವಾ ಹಲ್ಲೆ ನಡೆಸುವ ಅಥವಾ ಸಾರ್ವಜನಿಕ ಶಾಂತಿಯನ್ನು ಕದಡುವ ಯಾವುದೇ ಅಪರಾಧವನ್ನು ಅಥವಾ ಸರ್ಕಾರಿ ನೌಕರನ ವಿರುದ್ಧ ಅಪರಾಧವನ್ನು ಎಸಗಿರುವುದಾಗಿ ಅಥವಾ ಪ್ರಯತ್ನಿಸಿರುವುದಾಗಿ ಕಂಡುಬಂದರೆ ಕಾರ್ಯವಿಧಾನದ ಅನುಸಾರವಾಗಿ ಯುಕ್ತ ಕಾನೂನಿನ ಮೇರೆಗೆ ಕ್ರಮವನ್ನು ಜರುಗಿಸುವುದಕ್ಕೆ ತಹಶೀಲ್ದಾರನು ಸಕ್ಷಮ ಅಧಿಕಾರಿಯಾಗಿರತಕ್ಕದ್ದು."

34. 109-ಎ ನಿಯಮದ ತಿದ್ದುಪಡಿ.- ಸದರಿ ನಿಯಮಗಳ 109ನೇ ನಿಯಮದಲ್ಲಿ, (2)ನೇ ಉಪನಿಯಮದ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(2) ಆಡಳಿತಾಧಿಕಾರಿಯು ಪ್ರತಿ ಭೂಸ್ವಾಮ್ಯದಲ್ಲಿ ನೆರೆಹಾವಳಿಯಿಂದ ಉಂಟಾದ ನಷ್ಟಗಳನ್ನು ಖಚಿತಪಡಿಸತಕ್ಕದ್ದು ಮತ್ತು ದಾಖಲಿಸತಕ್ಕದ್ದು. ನೆರೆಯಿಂದಾಗಿ ಅಥವಾ ಸಮುದ್ರಗಳ ಅಡಿಯಲ್ಲಿ ಮುಳುಗಡೆಯಾದುದರಿಂದಾಗಿ ಅಥವಾ ನದಿಗಳು, ತೊರೆಗಳು,

ನಾಲೆಗಳು, ಸಮುದ್ರದ ನೀರು, ಬೆಟ್ಟದ ಬಿರುಪ್ರವಾಹಗಳು, ಜೌಗು ನೀರು, ಭೂ ಚಿಲುಮೆಗಳು, ಸರೋವರಗಳು ಇತ್ಯಾದಿಗಳ ನೈಸರ್ಗಿಕ ಹರಿವಿನ, ಪ್ರವಾಹದಿಂದ ಕೊಚ್ಚಿಹೋದ, ಮುಳುಗಡೆಯಾದ ಅಥವಾ ಒತ್ತುವರಿಯಾದ ಕಾರಣದಿಂದಾಗಿ ನಷ್ಟವಾದ 20 ಗುಂಟೆಗಳಿಗಿಂತ ಹೆಚ್ಚಿನ ವಿಸ್ತೀರ್ಣದ ಯಾವುದೇ ಭೂಮಿಯ ಪ್ರದೇಶದ ಬಗ್ಗೆ ಸಹ ಆತನು ತಹಸೀಲ್ದಾರನಿಗೆ ವರದಿಯನ್ನು ಮಾಡತಕ್ಕದ್ದು.

35. **113ನೇ ನಿಯಮದ ತಿದ್ದುಪಡಿ**.- ಸದರಿ ನಿಯಮಗಳ 113ನೇ ನಿಯಮದಲ್ಲಿನ (5)ನೇ ಉಪ-ನಿಯಮದಲ್ಲಿ, "ರೂ.1 (ಒಂದು ರೂಪಾಯಿ ಮಾತ್ರ)" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳ ಬದಲಾಗಿ "ಐದು ರೂಪಾಯಿ ಮಾತ್ರ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

36. **121ನೇ ನಿಯಮದ ತಿದ್ದುಪಡಿ**.- ಸದರಿ ನಿಯಮಗಳಲ್ಲಿ, 121ನೇ ನಿಯಮದಲ್ಲಿ, ಈ ಮುಂದಿನ ಪರಂತುಕಗಳನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:-

"ಪರಂತು, ಇರಸಾಲಿನಲ್ಲಿ ಆಗುವ ವಿಳಂಬವನ್ನು ಒಂದು ದಿನಕ್ಕಿಂತ ಹೆಚ್ಚು ವಿಳಂಬವಾದ ಪ್ರತಿಯೊಂದು ಬಾರಿಯೂ, ಗ್ರಾಮ ಲೆಕ್ಕಿಗನ ಸೇವಾ ಪುಸ್ತಕದಲ್ಲಿ ನಮೂದಿಸತಕ್ಕದ್ದು.

ಮತ್ತೂ ಪರಂತು, ಇರಸಾಲಿನಲ್ಲಿ ಎರಡು ಕೆಲಸದ ದಿನಗಳಿಗಿಂತ ಹೆಚ್ಚಿನ ಪ್ರತಿ ವಿಳಂಬಕ್ಕೆ ಮತ್ತು ಆ ವಿಳಂಬದ ಪ್ರತಿ ಎರಡನೇ ಸಂದರ್ಭಕ್ಕೆ ಗ್ರಾಮ ಲೆಕ್ಕಿಗನು ಶಿಸ್ತು ಕ್ರಮಕ್ಕೆ ಹೊಣೆಗಾರನಾಗಿರತಕ್ಕದ್ದು."

37. **124ನೇ ನಿಯಮದ ತಿದ್ದುಪಡಿ**.- 124ನೇ ನಿಯಮದಲ್ಲಿ, (1)ನೇ ಉಪ-ನಿಯಮದಲ್ಲಿ ಸದರಿ ನಿಯಮಗಳ (ಸಿ) ಖಂಡದ ನಂತರ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ವಾಸ್ತವಿಕ ಅಂಕಿ ಅಂಶಗಳನ್ನು ಪ್ರಕಟಿಸುವ ವೆಚ್ಚವನ್ನು ಖರೀದಿದಾರನಿಂದ ವಸೂಲು ಮಾಡತಕ್ಕದ್ದು."

38. **127ನೇ ನಿಯಮದ ತಿದ್ದುಪಡಿ**.- ಸದರಿ ನಿಯಮಗಳ 127ನೇ ನಿಯಮದಲ್ಲಿ, "ಉಪ ನೋಂದಣಾಧಿಕಾರಿಗಳ ಕಚೇರಿ" ಪದಗಳ ನಂತರ, "ಮತ್ತು ಇತ್ತೀಚಿನ ಮಾರ್ಗಸೂಚಿ ಮೌಲ್ಯ" ಎಂಬ ಪದಗಳನ್ನು ಸೇರಿಸತಕ್ಕದ್ದು.

39. **ಹೊಸ ನಿಯಮ 132ಎ ನ ಸೇರ್ಪಡೆ**.- ಸದರಿ ನಿಯಮಗಳ 132ನೇ ನಿಯಮದ ನಂತರ, ಈ ಮುಂದಿನ ಹೊಸ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:-

"132ಎ. ಸಾರ್ವಜನಿಕ ದಾಖಲೆಗಳ ರಚನೆ, ಧಾರಣ, ಮರುಪಡೆಯುವಿಕೆ ಮತ್ತು ವಿಲೇವಾರಿ.-(i) ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ಅಧಿನಿಯಮ, 2010 (2011ರ ಕರ್ನಾಟಕ ಅಧಿನಿಯಮ ಸಂಖ್ಯೆ 9) ಮತ್ತು ಅದರ ಅಡಿಯಲ್ಲಿ ಕಂದಾಯ ಇಲಾಖೆ ನಿರ್ವಹಿಸುವ ಕಾರ್ಯಗಳ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಉಲ್ಲಂಘನೆಯಾಗದಂತೆ ಆರ್ಕೈವಲ್ ದಾಖಲೆಗಳು ಸೇರಿದಂತೆ ಎಲ್ಲಾ ದಾಖಲೆಗಳನ್ನು ರಚಿಸುವುದು, ಸಂಗ್ರಹಿಸುವುದು, ನಿರ್ವಹಿಸುವುದು, ಸಂರಕ್ಷಿಸುವುದು, ಮರುಪಡೆಯುವಿಯುವುದು ಮತ್ತು ವಿಲೇವಾರಿ ಮಾಡಲು ವೇದಿಕೆ, ಸಾಫ್ಟ್‌ವೇರ್, ತಂತ್ರಜ್ಞಾನ, ರೂಪಗಳು ಮತ್ತು ಸ್ವರೂಪಗಳು ಮತ್ತು ಕಾರ್ಯವಿಧಾನವನ್ನು ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದು ಮತ್ತು ಅಂತಹ ದಾಖಲೆಗಳ ಪ್ರತಿಗಳನ್ನು ಪಡೆಯುವ ಅಥವಾ ಬಳಸುವ ಕಾರ್ಯವಿಧಾನ ಮತ್ತು

ಶುಲ್ಕಗಳನ್ನು ಮತ್ತು ಅಂತಹ ದಾಖಲೆಗಳಿಗೆ ಯಾವುದೇ ಹಾನಿ ಅಥವಾ ತಿದ್ದುಪಡಿಗಾಗಿ ದಂಡವನ್ನು ಸೂಚಿಸಬಹುದು.

(ii) ಜಿಲ್ಲಾಧಿಕಾರಿಯು ಜಿಲ್ಲೆಯ ಮಟ್ಟದಲ್ಲಿ ಸೃಜಿಸಲಾದ ಮತ್ತು ನಿರ್ವಹಿಸಲಾದ ಸಾರ್ವಜನಿಕ ದಸ್ತಾವೇಜುಗಳು ಮತ್ತು ದಾಖಲೆಗಳ ಉಸ್ತುವಾರಿಯಾಗಿರತಕ್ಕದ್ದು. ಉಪ ವಿಭಾಗಾಧಿಕಾರಿಯು ಉಪವಿಭಾಗದ ಮಟ್ಟದಲ್ಲಿ ಸೃಜಿಸಲಾದ ಮತ್ತು ನಿರ್ವಹಿಸಲಾದ ಸಾರ್ವಜನಿಕ ದಸ್ತಾವೇಜುಗಳು ಮತ್ತು ದಾಖಲೆಗಳ ಉಸ್ತುವಾರಿಯಾಗಿರತಕ್ಕದ್ದು. ತಹಸೀಲ್ದಾರರು ತಾಲೂಕು ಮಟ್ಟದಲ್ಲಿ ಸೃಜಿಸಲಾದ ಮತ್ತು ನಿರ್ವಹಿಸಲಾದ ಸಾರ್ವಜನಿಕ ದಸ್ತಾವೇಜುಗಳು ಮತ್ತು ದಾಖಲೆಗಳ ಉಸ್ತುವಾರಿಯಾಗಿರತಕ್ಕದ್ದು. ಸದರಿ ದಾಖಲೆಗಳ ಸೃಜನೆ, ಭದ್ರಪಡಿಸುವಿಕೆ, ವಿಲೇವಾರಿ ಮತ್ತು ಹಿಂಪಡೆಯುವಿಕೆಯು, ಸರ್ಕಾರವು ಕಾಲದಿಂದ ಕಾಲಕ್ಕೆ ಅಧಿಸೂಚಿಸಿರುವಂಥ, ಕಾರ್ಯವಿಧಾನವನ್ನು ಅನುಸಾರವಾಗಿರತಕ್ಕದ್ದು."

40. **ನಿಯಮ 139ರ ಪ್ರತ್ಯಾಯೋಜನೆ**.- ಸದರಿ ನಿಯಮಗಳ 139ನೇ ನಿಯಮದ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"139. ಹದ್ದುಬಸ್ತು ಅಪೀಲುಗಳು ಮತ್ತು ಹದ್ದುಬಸ್ತು ಅಪೀಲುಗಳಲ್ಲಿ ಶುಲ್ಕದ ವಸೂಲಾತಿ.- ಸರ್ವೇದಾರನು ನಿರ್ಣಯಿಸಿದ ಸರ್ವೇ ನಂಬರ್ ಗಡಿಗಳ ಅಥವಾ ಸರ್ವೇ ನಂಬರ್ ಉಪವಿಭಾಗದ ಗಡಿಗಳ ಸಂಬಂಧವಾಗಿ ಸರ್ವೇದಾರನು ನೀಡಿದ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸರ್ವೇದಾರನು ತೀರ್ಮಾನ ನೀಡಿದ ಅರವತ್ತು ದಿನಗಳ ಒಳಗಾಗಿ ತಾಲೂಕಿನ ಭೂದಾಖಲೆಗಳ ಸಹಾಯಕ ನಿರ್ದೇಶಕರಲ್ಲಿ ಸರ್ವೇದಾರನ ತೀರ್ಮಾನದ ವಿರುದ್ಧ ಅಪೀಲು ಹೂಡಬಹುದು ಮತ್ತು ಅಂಥ ಅಪೀಲಿನಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರು ನೀಡಿದ ತೀರ್ಮಾನದ ವಿರುದ್ಧ ಭೂದಾಖಲೆಗಳ ಸಹಾಯಕ ನಿರ್ದೇಶಕರು ಹಾಗೆ ತೀರ್ಮಾನ ನೀಡಿದ ಅರವತ್ತು ದಿನಗಳ ಒಳಗಾಗಿ ಜಿಲ್ಲೆಯಲ್ಲಿನ ಭೂದಾಖಲೆಗಳ ಉಪ ನಿರ್ದೇಶಕರಲ್ಲಿ ಎರಡನೇ ಅಪೀಲು ಹೂಡತಕ್ಕದ್ದು. ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ ಅಪೀಲು ಹೂಡುವ ವಿವರಣಪತ್ರವು ಒಂದು ಸಾವಿರದ ಇನ್ನೂರು ರೂಪಾಯಿ ಶುಲ್ಕವನ್ನು ಹೊಂದಿರತಕ್ಕದ್ದು ಮತ್ತು ಭೂದಾಖಲೆಗಳ ಉಪ ನಿರ್ದೇಶಕರಿಗೆ ಅಪೀಲು ಹೂಡುವ ವಿವರಣಪತ್ರವು ಒಂದು ಸಾವಿರದ ಐನೂರು ರೂಪಾಯಿ ಶುಲ್ಕವನ್ನು ಹೊಂದಿರತಕ್ಕದ್ದು. ಪಕ್ಷಕಾರನ ಅಪೀಲು ಅಂಗೀಕೃತವಾದರೆ ಪಾವತಿಸಿದ ಶುಲ್ಕದ ಮೊತ್ತವನ್ನು ಪಕ್ಷಕಾರನಿಗೆ ಹಿಂದಿರುಗಿಸತಕ್ಕದ್ದು. ಅಪೀಲಿನಲ್ಲಿ ಹೊರಡಿಸಲಾದ ಪ್ರತಿ ಆದೇಶದ ಪ್ರತಿಯನ್ನು ಭೂಮಿಯು ಇರುವಂಥ ತಾಲೂಕಿನ ತಹಶೀಲ್ದಾರನಿಗೆ ಕಳುಹಿಸತಕ್ಕದ್ದು."

41. **140ನೇ ನಿಯಮದ ತಿದ್ದುಪಡಿ**.- ಸದರಿ ನಿಯಮಗಳ 140ನೇ ನಿಯಮದಲ್ಲಿ,

(1)ನೇ ಉಪ-ನಿಯಮದಲ್ಲಿ ಕೋಷ್ಟಕದ ಬದಲಾಗಿ ಈ ಮುಂದಿನ ಕೋಷ್ಟಕವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

ಕೋಷ್ಟಕ

ಕ್ರ. ಸಂ.	**ವಿವರಣೆ**	**ಶುಲ್ಕ**
I.	ನಕಲು ಮಾಡುವುದರ ಮತ್ತು ತಾಳೆ ಮಾಡುವುದರ ಶುಲ್ಕ	
(i)	ಪ್ರತಿ 100 ಪದಗಳನ್ನು ಅಥವಾ ಅವುಗಳ ಭಾಗವನ್ನು ನಕಲು ಮಾಡುವುದಕ್ಕೆ ಮತ್ತು ತಾಳೆ ಮಾಡುವುದಕ್ಕೆ	ಹತ್ತು ರೂಪಾಯಿಗಳು
(ii)	ನಕಲು ಮಾಡಬೇಕಾದ ಮೂಲಪ್ರತಿಯು ಕೋಷ್ಟಕ ರೂಪದಲ್ಲಿದ್ದರೆ	ಮೇಲೆ ನಮೂದಿಸಿದ ದರದ ದುಪ್ಪಟ್ಟು ದರ
(iii)	ನಕಲು ಪ್ರತಿಯನ್ನು ಮುದ್ರಿಸಿ ಕೊಡಬೇಕಾದರೆ ಅಥವಾ ಯಂತ್ರದಲ್ಲಿ ನಕಲಿಸಿ ಕೊಡಬೇಕಾದರೆ, ಬಳಸಲಾಗುವ ಪ್ರತಿ ಹಾಳೆಗೆ	ಹತ್ತು ರೂಪಾಯಿಗಳು
ಟಿಪ್ಪಣಿ 1: ಈ, ಮೇಲಿನ (i) ಮತ್ತು (ii)ರಲ್ಲಿ ನಿಯಮಿಸಲಾದ ಶುಲ್ಕಗಳ ಹೆಚ್ಚುವರಿಯಾಗಿರಲಿದೆ. *ಟಿಪ್ಪಣಿ 2: ಯಂತ್ರದಲ್ಲಿ ನಕಲಿಸಲಾದ ಪ್ರತಿಯೆಂದರೆ ಸ್ಕ್ಯಾನರ್ ಅಥವಾ ಜೆರಾಕ್ಸ್ ಯಂತ್ರದಲ್ಲಿ ತೆಗೆದ ಪ್ರತಿಯಾಗಿರುತ್ತದೆ ಮತ್ತು ಮೊಬೈಲ್ ಫೋನ್ ಅಥವಾ ಯಾವುದೇ ಕ್ಯಾಮೆರಾ ಭಾವಚಿತ್ರದ ಪ್ರತಿಯಾಗಿರತಕ್ಕದ್ದಲ್ಲ.*		
II.	ಗ್ರಾಮ, ಪಟ್ಟಣ ಅಥವಾ ನಗರದ ನಿವೇಶನಗಳೊಳಗಿರುವ ಸರ್ವೇ ಮಾಡಿದ ಪ್ರದೇಶಗಳಿಗೆ ಸಂಬಂಧಿಸಿದ ಭೂಪರಿವರ್ತನೆಗಳ ನಮೂದುಗಳ ಪ್ರಮಾಣೀಕೃತ ಪ್ರತಿ	
(i)	ನಕಲು ಮಾಡುವುದಕ್ಕೆ	ಪ್ರತಿ ನಮೂದಿಗೆ ಹತ್ತು ರೂಪಾಯಿಗಳು
(ii)	ತಾಳೆ ಮಾಡುವುದಕ್ಕೆ	ಹತ್ತು ರೂಪಾಯಿಗಳು
(iii)	ಬಳಸಲಾಗುವ ಮುದ್ರಿತ ನಮೂನೆಗೆ	ಮೇಲಿನದಕ್ಕೆ ಹೆಚ್ಚುವರಿಯಾಗಿ ಪ್ರತಿ ನಮೂದಿಗೆ ಹತ್ತು ರೂಪಾಯಿಗಳು
III.	ಸರ್ವೇ ಸಂಖ್ಯೆ ಅಥವಾ ಉಪ-ವಿಭಾಗದ ನಕ್ಷೆಯ ಪ್ರಮಾಣೀಕೃತ ಪ್ರತಿಗೆ ಅಥವಾ ಸರ್ವೇ ಸಂಖ್ಯೆ ಅಥವಾ ಉಪವಿಭಾಗದ ಟಿಪ್ಪನ್ ಪ್ರಮಾಣೀಕೃತ ಪ್ರತಿಗೆ	
	ನಕಲು ಮಾಡುವುದರ ಶುಲ್ಕ	ಇಪ್ಪತ್ತೈದು ರೂಪಾಯಿಗಳು
	ತಾಳೆ ಮಾಡುವುದರ ಶುಲ್ಕ	ಹತ್ತು ರೂಪಾಯಿಗಳು
IV.	ನಗರ ಸ್ವತ್ತಿನ ವಹಿಯ ಉದ್ಧರಣೆಯನ್ನು ಪ್ರತಿ ನಮೂನೆಗೆ	ಹತ್ತು ರೂಪಾಯಿಗಳು
	ಮುದ್ರಿತ ಪ್ರತಿಗಳನ್ನು ಕೊಡದಿರುವಾಗ ಅಥವಾ ಲಭ್ಯವಿಲ್ಲದಿರುವಾಗ, ಈ ಉಪ ನಿಯಮಗಳ ಮೇರೆಗೆ ನಕ್ಷೆ ಅಥವಾ ಯೋಜನೆಯನ್ನು ಹೊರತುಪಡಿಸಿದ ಪ್ರತಿಯನ್ನು ಸಿದ್ಧಪಡಿಸಲು ಬಳಸುವ ಫೂಲ್‌ಸ್ಕ್ಯಾಪ್ ಕಾಗದಕ್ಕೆ	ಹತ್ತು ರೂಪಾಯಿಗಳು
1	ಹಕ್ಕುಗಳ ದಾಖಲೆ, ಭೂಪರಿವರ್ತನೆಗಳ ವಹಿ, ಅಥವಾ ಅವುಗಳ ಸಂಯೋಜಿತ ರೂಪದ ಯಾವುದೇ ಭಾಗದಲ್ಲಿ ಮತ್ತು	ಹತ್ತು ರೂಪಾಯಿಗಳು

	130(3)ನೇ ನಿಯಮವು ಅನ್ವಯವಾಗುವಂಥ ಗ್ರಾಮಗಳಲ್ಲಿನ ಕ್ರಮನಂಬರ್ ಪ್ರತಿ ಪ್ರಮಾಣೀಕೃತ ಪ್ರತಿಗಾಗಿ ಮತ್ತು ಹೆಸರಿಸಲಾದ ನಮೂನೆಗಳಲ್ಲಿನ ಪ್ರತಿ ನಮೂದಿನ ಪ್ರತಿ ಪ್ರಮಾಣೀಕೃತ ಪ್ರತಿಗಾಗಿ ಅಥವಾ ಅರ್ಜಿದಾರನು ಹೊಂದಿರುವ ಪ್ರತಿ ಖಾತಾಗಾಗಿ	
2	ಸರ್ವೇ ನಂಬರ್ ನಕ್ಷೆಯ ಅಥವಾ ಸರ್ವೇ ನಂಬರ್ ಉಪವಿಭಾಗದ ನಕ್ಷೆಯ ಅಥವಾ ನಗರ ಸ್ವತ್ತು ವಹಿಯ ಅಡಿಯಲ್ಲಿ ಸಿದ್ಧಪಡಿಸಲಾದ ಅಥವಾ ಅದರಲ್ಲಿನ ನಮೂದಿನ ಯಾವುದೇ ಸ್ಥಿರಾಸ್ತಿಯ ಯಾವುದೇ (ಬಣ್ಣರಹಿತ) ನಕ್ಷೆಗೆ	ಹತ್ತು ರೂಪಾಯಿಗಳು (ಪರಂತು, ಬಣ್ಣದ ನಕ್ಷೆಯಾದರೆ ಇಪ್ಪತ್ತೈದು ರೂಪಾಯಿಗಳು)
3	ನಕ್ಷೆಯ, ಸರ್ವೇ ನಂಬರ್ ಯಾವುದೇ ಪ್ರಮಾಣೀಕೃತ ಪ್ರತಿಯ ಮೇಲೆ ಅಥವಾ ಸರ್ವೇ ನಂಬರ್ ಉಪವಿಭಾಗದ ಯಾವುದೇ ಪ್ರಮಾಣೀಕೃತ ಪ್ರತಿಯ ಮೇಲೆ ಭೂ ಸುತ್ತಳತೆಯ ಮಾಪನಗಳು ಅಳಿಸಿಹೋಗಿರುವುದನ್ನು ತೋರಿಸುವುದಕ್ಕೆ	
(i)	ಸರ್ವೇ ನಂಬರ್ ಮಾಪನದ ಅಥವಾ ಸರ್ವೇ ನಂಬರ್ ಉಪವಿಭಾಗದ ಮಾಪನದ ಸಮಯದಲ್ಲಿ ಅರ್ಜಿ ಸಲ್ಲಿಸಿದರೆ	ಒಂದು ಮಾಪನಕ್ಕೆ ಹತ್ತು ರೂಪಾಯಿಗಳು
(ii)	ಆನಂತರದ ಯಾವುದೇ ಸಮಯದಲ್ಲಿ ಅರ್ಜಿ ಸಲ್ಲಿಸಿದರೆ	ಒಂದು ಮಾಪನಕ್ಕೆ ಹತ್ತು ರೂಪಾಯಿಗಳು
4	164ನೇ ನಿಯಮಕ್ಕೆ ಒಳಪಟ್ಟು, (8)ನೇ ಬಾಬಿನ ಅಡಿಯಲ್ಲಿ ಬರದಿರುವಂಥ, ಉಪವಿಭಾಗದ ಸರ್ವೇ ನಂಬರ್ ನಕ್ಷೆಯ ಅಥವಾ ಯಾವುದೇ ಜಮೀನಿನ ಅಥವಾ ಯಾವುದೇ ಸ್ಥಿರಾಸ್ತಿಯ ಯಾವುದೇ ಸಾಮಾನ್ಯ (ಬಣ್ಣರಹಿತ) ನಕ್ಷೆ ಅಥವಾ ಯೋಜನೆಯ ಪ್ರತಿ ಪ್ರಮಾಣೀಕೃತ ಪ್ರತಿಗೆ ಅಥವಾ ಪ್ರತಿ ಜಮೀನು ಅಥವಾ ಪ್ಲಾಟಿನ ನಗರ ಸರ್ವೇ ನಕ್ಷೆಯ ಉದ್ಧರಣದ ಪ್ರತಿಯೊಂದು ಪ್ರಮಾಣೀಕೃತ ಪ್ರತಿಗೆ	ಹತ್ತು ರೂಪಾಯಿಗಳು (ಪರಂತು, ಬಣ್ಣದ ನಕ್ಷೆಯಾದರೆ ಇಪ್ಪತ್ತೈದು ರೂಪಾಯಿಗಳು)
5	ಬಾಬು (1) ಅಥವಾ (4)ರ ಅಡಿಯಲ್ಲಿ ಬರದಿರುವಂಥ ನಕ್ಷೆ ಅಥವಾ ಯೋಜನೆಯ ಪ್ರತಿ ಪ್ರಮಾಣೀಕೃತ ಪ್ರತಿಗೆ ಅಥವಾ ಅಂಥ ನಕ್ಷೆ ಅಥವಾ	ಅಂಥ ಶುಲ್ಕವು ಪ್ರತಿಯನ್ನು ಪ್ರಮಾಣೀಕರಿಸುವ ಅಧಿಕಾರಿಯು ನಿರ್ಣಯಿಸುವಂತೆ, ಐವತ್ತು ರೂಪಾಯಿಯನ್ನು ಮೀರತಕ್ಕದ್ದಲ್ಲ ಮತ್ತು

	ಯೋಜನೆಯ ಭಾಗಾಂಶದ ಪ್ರತಿಯೊಂದು ಪ್ರಮಾಣೀಕೃತ ಪ್ರತಿಗೆ	ಇಪ್ಪತ್ತೈದು ರೂಪಾಯಿಗಿಂತ ಕಡಿಮೆಯಿರತಕ್ಕದ್ದಲ್ಲ: ಪರಂತು, ಜಿಲ್ಲಾಧಿಕಾರಿಗೆ ಅಧೀನನಾಗಿರುವ ಯಾರೇ ಅಧಿಕಾರಿಯು ಜಿಲ್ಲಾಧಿಕಾರಿ ಅನುಮತಿಯ ಮೇಲಲ್ಲದೆ ಅಥವಾ ಭೂದಾಖಲೆಗಳ ಅಧೀಕ್ಷಕನಿಗೆ ಅಧೀನನಾಗಿರುವ ಯಾರೇ ಅಧಿಕಾರಿಯು ಭೂದಾಖಲೆಗಳ ಅಧೀಕ್ಷಕನ ಅನುಮತಿಯ ಮೇಲಲ್ಲದೆ ಇಪ್ಪತ್ತೈದು ರೂಪಾಯಿ ಮೀರಿದ ಯಾವುದೇ ಶುಲ್ಕವನ್ನು ವಿಧಿಸತಕ್ಕದ್ದಲ್ಲ.
6.	ಪ್ರಮಾಣೀಕೃತ ಪ್ರತಿಯ ಪ್ರತಿಯೊಂದು ಯಥಾಪ್ರತಿಗೆ	ಪ್ರಮಾಣೀಕೃತ ಪ್ರತಿಗೆ ನೀಡಬೇಕಾದಷ್ಟೇ ಶುಲ್ಕ
7.	ದಾಖಲೆಗಳನ್ನು ಹುಡುಕುವ ಪ್ರತಿಯೊಂದು ವರ್ಷದ ಪ್ರತೀ ಹುಡುಕುವಿಕೆಗೆ	ದಾಖಲೆಗಳನ್ನು ಹುಡುಕುವ ಪ್ರತಿಯೊಂದು ವರ್ಷಕ್ಕೆ ಹತ್ತು ರೂಪಾಯಿಗಳು: ಪರಂತು, ಪರಭಾರೆ ಕಚೇರಿ ದಾಖಲೆಗಳ ಸಂದರ್ಭದಲ್ಲಿ, ಪ್ರತಿ ರುಮಾಲ್ ಅಥವಾ ದಾಖಲೆಯನ್ನು ಹುಡುಕುವುದಕ್ಕೆ ಕನಿಷ್ಠ ಐವತ್ತು ರೂಪಾಯಿ ಶುಲ್ಕ ವಿಧಿಸುವುದಕ್ಕೆ ಒಳಪಟ್ಟು ಪ್ರತಿ ರುಮಾಲ್ ಅಥವಾ ದಾಖಲೆಯನ್ನು ಹುಡುಕುವುದಕ್ಕೆ ಐವತ್ತು ರೂಪಾಯಿ ಶುಲ್ಕ ವಿಧಿಸತಕ್ಕದ್ದು.
8	ಆದೇಶಗಳ ಮತ್ತು ಅವುಗಳನ್ನು ಹೊರಡಿಸಿರುವುದರ ಕಾರಣಗಳ ಮತ್ತು ಅಧಿನಿಯಮದ ಅಡಿಯಲ್ಲಿನ ಔಪಚಾರಿಕ ಅಥವಾ ಸಂಕ್ಷಿಪ್ತ ವಿಚಾರಣೆಗಳ ಪ್ರದರ್ಶಿಕೆಗಳ ಪ್ರತಿಯೊಂದು ಅಧಿಕೃತ ಭಾಷಾಂತರಕ್ಕೆ	
(ಎ)	ಮೊದಲ ಒಂದು ನೂರು ಪದಗಳಿಗೆ ಅಥವಾ ಒಂದು ನೂರು ಪದಗಳ ಭಾಗಾಂಶಕ್ಕೆ	ಕೈಬರಹದಲ್ಲಿದ್ದರೆ ಒಂದು ನೂರು ರೂಪಾಯಿಗಳು ಮತ್ತು ಬೆರಳಚ್ಚು ಮಾಡಿದ ಮುದ್ರಿತ ಪ್ರತಿಯಾದರೆ ಇನ್ನೂರ ಐವತ್ತು ರೂಪಾಯಿಗಳು
(ಬಿ)	ಆನಂತರದ ಒಂದು ನೂರು ಪದಗಳಿಗೆ ಅಥವಾ ಒಂದು ನೂರು ಪದಗಳ ಭಾಗಾಂಶಕ್ಕೆ	ಕೈಬರಹದಲ್ಲಿದ್ದರೆ ಐವತ್ತು ರೂಪಾಯಿಗಳು ಮತ್ತು ಬೆರಳಚ್ಚು ಮಾಡಿದ ಮುದ್ರಿತ ಪ್ರತಿಯಾದರೆ ಒಂದು ನೂರು ರೂಪಾಯಿಗಳು

(ii) ಉಪ ನಿಯಮ (2)ರಲ್ಲಿ, "ಎರಡು ರೂಪಾಯಿಗಳು" ಎಂಬ ಪದಗಳ ಬದಲಾಗಿ "ಐವತ್ತು ರೂಪಾಯಿಗಳು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

42. 142ನೇ ನಿಯಮದ ತಿದ್ದುಪಡಿ.- ಸದರಿ ನಿಯಮಗಳ 142ನೇ ನಿಯಮದಲ್ಲಿ,-

(i) 142ನೇ ನಿಯಮದಲ್ಲಿ "ಅಧೀಕ್ಷಕ" ಎಂಬ ಪದವು ಎಲ್ಲೆಲ್ಲಿ ಬರುತ್ತದೆಯೋ, ಅಲ್ಲಲ್ಲಿ "ನಿರ್ದೇಶಕ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು.

(ii) 2ನೇ ಉಪ-ನಿಯಮ (v)ನೇ ಖಂಡದಲ್ಲಿ, "ಶೇಕಡಾ ಇಪ್ಪತ್ತು" ಎಂಬ ಪದಗಳ ಬದಲಾಗಿ "ಶೇಕಡಾ ಇಪ್ಪತ್ತೈದು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(iii) 3ನೇ ಉಪ-ನಿಯಮದಲ್ಲಿ "ಪಕ್ಷಕಾರನು ವೆಚ್ಚದಲ್ಲಿ ಮನಿ ಆರ್ಡರ್ ಮೂಲಕ" ಎಂಬ ಪದಗಳ ಬದಲಾಗಿ "ಪಕ್ಷಕಾರನು ವೆಚ್ಚದಲ್ಲಿ ಬ್ಯಾಂಕ್ ಚೆಕ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಅಥವಾ ಆರ್‌ಟಿಜಿಎಸ್ ಅಥವಾ ಎನ್‌ಇಎಫ್‌ಟಿ ಮೂಲಕ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

43. 149ಎ ನಿಯಮದ ತಿದ್ದುಪಡಿ.- 149ಎ ನಿಯಮದಲ್ಲಿನ ಸದರಿ ನಿಯಮಗಳಲ್ಲಿ, ಹಾಲಿ ಇರುವ ಉಪಬಂಧಗಳಿಗೆ (1)ನೇ ಉಪ-ನಿಯಮ ಎಂಬುದಾಗಿ ಮರುಸಂಖ್ಯೆ ನೀಡತಕ್ಕದ್ದು. ಹಾಗೆ ಮರುಸಂಖ್ಯೆ ನೀಡಲಾದ (1)ನೇ ಉಪನಿಯಮದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

(2) ಜಿಲ್ಲಾಧಿಕಾರಿಯು, ಅಕ್ರಮವಾಗಿ ಭೂಮಿಯನ್ನು ಹೊಂದಿರುವಂಥ ವ್ಯಕ್ತಿಗೆ, ಭೂಮಿಯನ್ನು ತೆರವುಗೊಳಿಸುವಂತೆ ಯಾಕೆ ತೆರವು ಆದೇಶವನ್ನು ಹೊರಡಿಸಬಾರದೆಂದು ಕಾರಣವನ್ನು ಕೇಳುವ ನೋಟೀಸನ್ನು, ಹಾಗೆ ಅದನ್ನು ಸ್ವೀಕರಿಸಿದ ಏಳು ದಿನಗಳ ಒಳಗಾಗಿ ಅಂಥ ಕಾರಣವನ್ನು ಲಿಖಿತವಾಗಿ ನೀಡಲು ಹಾಜರಾಗುವಂತೆ ಅಗತ್ಯಪಡಿಸಿ ನೀಡತಕ್ಕದ್ದು ಮತ್ತು ಸದರಿ ವ್ಯಕ್ತಿಯು ಪ್ರತಿಕ್ರಿಯೆ ನೀಡಲು ಅಥವಾ ಯಾವುದೇ ನ್ಯಾಯಯುತ ಕಾರಣವನ್ನು ನೀಡಲು ವಿಫಲನಾದರೆ ಅಥವಾ ಸದರಿ ವ್ಯಕ್ತಿಯು ಸದರಿ ಭೂಮಿಯನ್ನು ತೆರವುಗೊಳಿಸಲು ನಿರಾಕರಿಸಿದರೆ, ಅಥವಾ ಅಂಥ ಪ್ರತಿಕ್ರಿಯೆಯನ್ನು ಜಾರಿಯಲ್ಲಿರುವ ಕಾನೂನಿನ ಮೇರೆಗೆ ಅಂಗೀಕರಿಸಲು ಸಾಧ್ಯವಿಲ್ಲದಿದ್ದರೆ, ಜಿಲ್ಲಾಧಿಕಾರಿಯು, ತನ್ನ ಕಾರಣಗಳನ್ನು ದಾಖಲಿಸಿದ ನಂತರ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ಇತರ ಯಾವುದೇ ವಿಚಾರಣೆಯನ್ನು ನಡೆಸಿದ ನಂತರ ತೆರವು ಆದೇಶವನ್ನು ಹೊರಡಿಸತಕ್ಕದ್ದು. ತೆರವು ಆದೇಶವನ್ನು ತಹಸೀಲ್ದಾರರು ಅಥವಾ ಜಿಲ್ಲಾಧಿಕಾರಿಯು ನಿಯೋಜಿಸಬಹುದಾದಂಥ ಇತರ ಅಧಿಕಾರಿಯು ಕಾರ್ಯಗತಗೊಳಿಸತಕ್ಕದ್ದು ಮತ್ತು ಸದರಿ ವ್ಯಕ್ತಿಯನ್ನು ತೆರವುಗೊಳಿಸಲು ಮತ್ತು ಸದರಿ ಭೂಮಿಯನ್ನು ಭದ್ರಪಡಿಸಲು ಸಮರ್ಥನೀಯ ಪಡೆಯ ಬಳಕೆಯನ್ನು ಅಧಿಕೃತಗೊಳಿಸತಕ್ಕದ್ದು ಮತ್ತು ಸದರಿ ವ್ಯಕ್ತಿಯಿಂದ ತೆರವು ವೆಚ್ಚವನ್ನು ಕಂದಾಯದ ಬಾಕಿಗಳಂತೆ ವಸೂಲು ಮಾಡುವುದನ್ನು ಸಹ ಅಧಿಕೃತಗೊಳಿಸತಕ್ಕದ್ದು ಮತ್ತು ಅಧಿನಿಯಮದ 88ನೇ ಪ್ರಕರಣದ ಮೇರೆಗೆ ಸದರಿ ಭೂಮಿಯಲ್ಲಿನ ಮರಗಳು, ಸೇರ್ಪಡೆಗಳು, ನಿರ್ಮಿತಿಗಳು, ಅಭಿವೃದ್ಧಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಥವಾ ತೆಗೆದುಹಾಕುವ ಆದೇಶವನ್ನು ಸಹ ಹೊರಡಿಸತಕ್ಕದ್ದು. ಹಾಗೆಯೇ ಯಾವುದೇ ದೇವರಕಾಡು, ಉರ್ದುವೆ, ಗುಂಡುತೋಪು ಟ್ಯಾಂಕ್‌ಬೆಡ್, ಫುಟ್ ಖರಾಬು ಹಳ್ಳ, ಡೇಟ್ ರಿಸರ್ವ್, ಸ್ಮಶಾನಗಳು, ಸಾರ್ವಜನಿಕ ರಸ್ತೆಗಳು, ದಾರಿಗಳು, ಹಾದಿಗಳು ಮತ್ತು ಮಾರ್ಗಗಳು, ಸೇತುವೆಗಳು, ಚರಂಡಿಗಳು, ಮೋರಿಗಳು ಮತ್ತು ಬೇಲಿಗಳು, ನದಿಗಳು, ತೊರೆಗಳು, ನಾಲೆಗಳು, ಸರೋವರಗಳು, ಕೆರೆಗಳು ಮತ್ತು ಎಲ್ಲಾ ಕಾಲುವೆಗಳು ಮತ್ತು ಜಲಮಾರ್ಗಗಳಿಗೆ ಮತ್ತು ಎಲ್ಲಾ ನಿಂತ ಮತ್ತು ಹರಿಯುವ ನೀರಿಗೆ ಮಾಡಲಾದ ಯಾವುದೇ ಮಾರ್ಪಾಡು ಅಥವಾ ಹಾನಿಯನ್ನು ಭೂಕಂದಾಯ ಬಾಕಿಗಳಂತೆ ವಸೂಲು ಮಾಡಿಕೊಳ್ಳುವುದಕ್ಕೆ ಸಹ ಆದೇಶಿಸತಕ್ಕದ್ದು.

ಪರಂತು, ಯಾವುದೇ ಹಂತದಲ್ಲಿ, ಒಕ್ಕಲೆಬ್ಬಿಸುವುದಕ್ಕಾಗಿ ನಿಯೋಜನೆಗೊಂಡ ತಹಶೀಲ್ದಾರ್ ಅಥವಾ ಇತರ ಅಧಿಕಾರಿಯಿಂದ ಪಡೆದ ವರದಿಯಲ್ಲಿಯೇ, ಅಕ್ರಮ ಸ್ವಾಧೀನತೆ

ಮತ್ತು ಅಧಿಭೋಗದ ಅವಧಿಯಲ್ಲಿ ಸದರಿ ವ್ಯಕ್ತಿ ಅಥವಾ ಆತನ ಯಾರೇ ಸಹವರ್ತಿಗಳು ಅಥವಾ ಆತನ ನಿಯೋಜನೆಯಲ್ಲಿರುವ ಯಾರೇ ವ್ಯಕ್ತಿಯು ಕ್ರಿಮಿನಲ್ ಅತಿಕ್ರಮಣ, ಸಾರ್ವಜನಿಕ ಸ್ವತ್ತಿಗೆ ಹಾನಿಯನ್ನುಂಟು ಮಾಡುವುದು ಅಥವಾ ನಾಶಪಡಿಸುವುದು, ಮೋಸ ಅಥವಾ ಸುಳ್ಳು ಸ್ಪಷ್ಟನೆ ಅಥವಾ ವಂಚನೆ ಮಾಡುವುದು ಅಥವಾ ಹಲ್ಲೆ ನಡೆಸುವುದು ಅಥವಾ ಸಾರ್ವಜನಿಕ ನೆಮ್ಮದಿಯನ್ನು ಕದಡುವುದು ಅಥವಾ ಲೋಕ ನೌಕರನ ವಿರುದ್ಧ ಅಪರಾಧವನ್ನು ಮಾಡಿದ್ದಾನೆಂದು ಅಥವಾ ಮಾಡಲು ಪ್ರಯತ್ನಿಸಿದ್ದಾನೆಂದು ಕಂಡುಬಂದರೆ, ಜಿಲ್ಲಾಧಿಕಾರಿಯು, ಈ ನಿಯಮದಲ್ಲಿ ಹೇಳಲಾದ ಕಾರ್ಯವಿಧಾನದ ಪ್ರಕಾರ ಸಂಬಂಧಪಟ್ಟ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳುವಂತೆ ತಹಶೀಲ್ದಾರನಿಗೆ ನಿರ್ದೇಶಿಸತಕ್ಕದ್ದು.

44. 150ನೇ ನಿಯಮದ ಪ್ರತ್ಯಾಯೋಜನೆ.- ಸದರಿ ನಿಯಮಗಳ 150ನೇ ನಿಯಮದ ಬದಲಾಗಿ, ಈ ಮುಂದಿನವುಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"150. ಕಂದಾಯ ಕಚೇರಿಗಳು ಮತ್ತು ಅಧಿಕಾರಿಗಳಿಗಾಗಿ ಮೊಹರು.- ಎಲ್ಲಾ ಕಂದಾಯ ಕಚೇರಿಗಳು ಮತ್ತು ತಹಶೀಲ್ದಾರ್ ಮತ್ತು ಅದಕ್ಕಿಂತ ಮೇಲಿನ ದರ್ಜೆಯ ಅಧಿಕಾರಿಗಳು, ಸರಿಯಾಗಿ ಕೆತ್ತಲಾದ ಎರಡು ಅಂಗುಲ ವ್ಯಾಸವಿದ್ದು, ಅದರಲ್ಲಿ ಕನ್ನಡ ಮತ್ತು ಇಂಗ್ಲೀಷ್ ಲಿಪಿಯೊಂದಿಗೆ ಕರ್ನಾಟಕ ರಾಜ್ಯದ ಲಾಂಛನವನ್ನು ಹೊಂದಿರತಕ್ಕಂಥ ಅಧಿಕಾರಿ ಮತ್ತು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂಥ ಕಚೇರಿಯ ಹೆಸರನ್ನು ಸೂಚಿಸುವಂಥ ಲೋಹದಿಂದ ಮಾಡಲಾದ ವೃತ್ತಾಕಾರದ ಮೊಹರನ್ನು ಉಪಯೋಗಿಸತಕ್ಕದ್ದು. ಮೊಹರು ಕಚೇರಿಯ ಮುಖ್ಯಸ್ಥನ ಅಭಿರಕ್ಷೆಯಲ್ಲಿರತಕ್ಕದ್ದು ಮತ್ತು ಬೇರೆ ಯಾರೇ ವ್ಯಕ್ತಿಯ ಅಭಿರಕ್ಷೆಯಲ್ಲಿರತಕ್ಕದ್ದಲ್ಲ ಮತ್ತು ಯಾವುದೇ ಸ್ಥಳಾಂತರೀಕರಣ ಅಥವಾ ಕಳೆದುಕೊಳ್ಳುವಿಕೆಯ ಬಗ್ಗೆ ಕೂಡಲೇ ವರದಿ ಮಾಡತಕ್ಕದ್ದು. ಈ ಮೊಹರುಗಳನ್ನು ಸರ್ಕಾರವು ತ್ರಿಪ್ರತಿಯಲ್ಲಿ ವಿನ್ಯಾಸಗೊಳಿಸತಕ್ಕದ್ದು ಮತ್ತು ದೊರಕಿಸಿಕೊಡತಕ್ಕದ್ದು ಮತ್ತು ವಿತರಿಸತಕ್ಕದ್ದು. ಇತರೆ ಮೊಹರನ್ನು ಯಾರೇ ಕಂದಾಯ ಅಧಿಕಾರಿ ಅಥವಾ ಕಚೇರಿಯು ಬಳಕೆ ಮಾಡತಕ್ಕದ್ದಲ್ಲ.

45. ಹೊಸ ನಮೂನೆಗಳಾದ 21-ಬಿ, 21-ಸಿ ಮತ್ತು 21-ಡಿ ಯ ಸೇರ್ಪಡೆ.- ಸದರಿ ನಿಯಮದಲ್ಲಿ, ನಮೂನೆ 21ಎ ನಂತರ, ಈ ಮುಂದಿನ ಹೊಸ ನಮೂನೆಗಳನ್ನು ಸೇರಿಸತಕ್ಕದ್ದು, ಎಂದರೆ:-

"ನಮೂನೆ-21ಬಿ

(ನಿಯಮ 106ಬಿ ಮತ್ತು 106ಸಿ ನೋಡಿ)

(ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 106ಬಿ ಮತ್ತು 106ಸಿ ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮಗಳು 1964ರ 95(2) (i) ಪ್ರಕರಣದ ಅಡಿಯಲ್ಲಿನ ಅಫಿಡವಿಟ್ ನಮೂನೆ)

----------(ತಂದೆ/ಪತಿಯ ಹೆಸರು), ರವರ ಮಗ ಅಥವಾ ಮಗಳು ಅಥವಾ ಪತ್ನಿಯಾಗಿದ್ದು- ಶಾಶ್ವತ ವಿಳಾಸ:----------ಪಿನ್---------- ಪ್ರಸ್ತುತ ಅಂಚೆ ವಿಳಾಸವಾದ ----------ರಲ್ಲಿ ವಾಸಿಸುತ್ತಿರುವ ----------(ಹೆಸರು), ----------(ವಯಸ್ಸು), ----------(ಲಿಂಗ), ಆದ ನಾನು, ಈ ಮೂಲಕ ಕೆಳಕಂಡಂತೆ ಪ್ರಮಾಣ ಮಾಡಿ, ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ:

1. ನಾನು ಈ ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು, ನನ್ನ ವೈಯಕ್ತಿಕ ವಿವರಗಳು ಈ ಮುಂದಿನಂತಿವೆ:

1.	ಆಧಾರ ಸಂಖ್ಯೆ	
2.	ಮೊಬೈಲ್ ಸಂಖ್ಯೆ	
3.	ಪಾನ್	
4.	ಜನ್ಮ ದಿನಾಂಕ/ವಯಸ್ಸು	
5.	ವೃತ್ತಿ	
6.	ರೂಪಾಯಿಗಳಲ್ಲಿ ವಾರ್ಷಿಕ ಕುಟುಂಬ ಆಧಾಯ (ಎಲ್ಲಾ ಮುಲಾಗಳಿಂದ)	

2. ನಾನು ಕರ್ನಾಟಕದ----------ಜಿಲ್ಲೆಯ----------ತಾಲ್ಲೂಕಿನ----------ವೃತ್ತ/ಹೋಬಳಿಯ----------ಸರ್ವೆ ನಂಬರಿನಲ್ಲಿ----------ಭಾಗ ನಂಬರ್ಲ್ಲಿ----------ಎಕ್ಕರೆಗಳ----------ಗುಂಟೆಗಳ ವಿಸ್ತಿರ್ಣವುಳ್ಳ ಭೂಮಿಯ (ಅನುಸೂಚಿಯಲ್ಲಿ ಅತ್ಯಂತ ವಿಸ್ತಾರವಾಗಿ ವಿವರಿಸಲಾಗಿದೆ) ಒಡೆಯನಾಗಿದ್ದು ಅದರ ಅನುಬೊಗ್ಗವನ್ನು ಹೊಂದಿರುತ್ತೇನೆ.

3. ನಾನು----------ಉದ್ದೇಶಕ್ಕಾಗಿ (ಇಲ್ಲಿ ಉದ್ದೇಶವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ)----------(ಕೈಗಾರಿಕೆ/ವಾಣಿಜ್ಯ/ವಸತಿ - ಒಂದನ್ನು ಆಯ್ಕೆಮಾಡಿ) ಯ ಬಳಕೆಗೆ----------ಎಕರೆಗಳು----------ಗುಂಟೆಗಳ ವಿಸ್ತೀರ್ಣದ ಸದರಿ ಭೂಮಿಯನ್ನು ಪರಿವರ್ತಿಸಲು/ಬದಲಾಯಿಸಲು ಉದ್ದೇಶಿಸಿರುತ್ತೇನೆ.

4. ಕೃಷಿಯೇತರ ಉದ್ದೇಶಗಳ ಬದಲಾವಣೆಗೆ ಸಮನಾಗಿರದಂಥ ಹೊಸ ಕೈಗಾರಿಕೆಯ ಉದ್ದೇಶಗಳಿಗಾಗಿ ನನ್ನ ಭೂಮಿಯ ಪೈಕಿ ಎರಡು ಎಕರೆಗಳವರೆಗೆ ಮಾತ್ರ ನಾನು ಬದಲಾಯಿಸಿಕೊಳ್ಳುತ್ತಿದ್ದೇನೆ/ಬದಲಾಯಿಸಿಕೊಳ್ಳುತ್ತಿಲ್ಲ. (ಅನ್ವಯಿಸದೆ ಇರುವುದನ್ನು ಹೊಡೆದುಹಾಕಿ).

5. ಈ ಅರ್ಜಿಯೊಂದಿಗೆ ನಾನು ಸಲ್ಲಿಸಿರುವ ಈ ಕೆಳಕಂಡ ದಸ್ತಾವೇಜುಗಳಾದ,

(i) ಆರ್ ಟಿ ಸಿ

(ii) ಪೂರ್ವಾಧಿ ಪ್ರಮಾಣಪತ್ರ

(iii) ಖಾತೆ

(iv) ಅಗತ್ಯವಿದ್ದಲ್ಲಿ, ಕರ್ನಾತಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ 13(4)ನೇ ಪ್ರಕರಣದ ಅಡಿಯಲ್ಲಿ ಅಂತಿಮವಾಗಿ, ಕ್ರಮಬದ್ಧವಾದ ರೀತಿಯಲ್ಲಿ ಪ್ರಕಟಿಸಲಾದ ಮಹಾಯೋಜನೆಯ ಸಂಬಂಧಪಟ್ಟ ಭಾಗದ ಉದ್ಧೃತ ಭಾಗ.

(v) ಸಕ್ಷಮ ಪ್ರಾಧಿಕಾರವು ಕ್ರಮಬದ್ಧವಾಗಿ ಸಿದ್ಧಪಡಿಸಿದ ಭೂಮಿಯ ಪರಿವರ್ತನಾ ಪೂರ್ವ ನಕಾಶೆ-ಗಳು ನನಗೆ ತಿಳಿದಿರುವಷ್ಟಿರ ಮಟ್ಟಿಗೆ ಮತ್ತು ನಾನು ನಂಬಿರುವಷ್ಟಿತ ಮಟ್ಟಿಗೆ ನಿಜವಾಗಿದೆ ಮತ್ತು ಸರಿಯಾಗಿದೆ.

6. ನನಗೆ ತಿಳಿದಿರುವಷ್ಟರ ಮಟ್ಟಿಗೆ, ಪ್ರಸ್ತುತದಲ್ಲಿ ಕೃಷಿ ಉದ್ದೇಶಕ್ಕಾಗಿ, ನಾನು ಹೊಂದಿರುವ ಸದರಿ ಭೂಮಿಯನ್ನು, ಇದರಲ್ಲಿ ನಾನು ಅರ್ಜಿ ಸಲ್ಲಿಸಿರುವಂತೆ, ಕರ್ನಾಟಕ ಪಟ್ಟಣ ಮತ್ತು ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ, II)ರ 13(4)ನೇ ಪ್ರಕರಣದ ಅಡಿಯಲ್ಲಿ ಸಂಬಂಧಪಟ್ಟ ಭೂಮಿಗಾಗಿ, ಅಂತಿಮವಾಗಿ, ಕ್ರಮಬದ್ಧವಾಗಿ ಪ್ರಕಟಿಸಲಾದ ಮಹಾ ಯೋಜನೆಯಲ್ಲಿ ಅದೇ ಭೂ ಬಳಕೆಗಾಗಿ ನಿರ್ದಿಷ್ಟಪಡಿಸಲಾಗಿದೆ.

7. ಅರ್ಜಿಸಲ್ಲಿಸಿರುವ ಈ ಭೂಮಿಯ ಯಾವುದೇ ಭಾಗವನ್ನು ನಾನು ಅಥವಾ ನನ್ನ ನೌಕರರು ಅಥವಾ ಅವಲಂಬಿತರು ಒತ್ತುವರಿ ಮಾಡಿಕೊಂಡಿರುವುದಿಲ್ಲ.

8. ಈ ಭೂಮಿಯ ಯಾವುದೇ ಭಾಗವೂ ಯಾವುದೇ ಸರ್ಕಾರಿ ಸಂಸ್ಥೆಯ ಒಡೆತನದಲ್ಲಿರುವುದಿಲ್ಲ ಅಥವಾ ನನಗೆ ತಿಳಿದಿರುವಷ್ಟರ ಮಟ್ಟಿಗೆ, ಭೂ ಸ್ವಾಧೀನ ಅಧಿನಿಯಮ, 1894 ಅಥವಾ ಭೂ ಸ್ವಾಧೀನ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಅಧಿನಿಯಮ, 2013ರ ಅಡಿಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಸರ್ಕಾರವು ಈ ಭೂಮಿಯ ಯಾವುದೇ ಭಾಗವನ್ನು ಆರ್ಜಿಸಿರುವುದಿಲ್ಲ ಅಥವಾ ಅರ್ಜನೆಗೆ ಒಳಪಡುವುದಿಲ್ಲ ಮತ್ತು ಸ್ವಾಧೀನದ ಯಾವುದೇ ಪರಿಹಾರವನ್ನು ನಾನೂ ಸ್ವೀಕರಿಸಿರುವುದಿಲ್ಲ ಅಥವಾ ಜೀವಂತ ಅಥವಾ ಮರಣ ಹೊಂದಿದ ನನ್ನ ಕುಟುಂಬದ ಯಾರೇ ಸದಸ್ಯರೂ ಸಹ ಸ್ವೀಕರಿಸಿರುವುದಿಲ್ಲ.

9. ಕರ್ನಾಟಕ ಭೂ ಕಂದಾಯ ಅಧಿನಿಯಮದ 67(1)ನೇ ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದಂತೆ, ಈ ಭೂಮಿಯ ಯಾವುದೇ ಭಾಗವು, ಅತ್ಯಂತ ವಿಸ್ತಾರವಾಗಿ ಹೇಳುವುದಾದರೆ, ಸಾರ್ವಜನಿಕ ರಸ್ತೆ, ಬೀದಿ, ಓಣಿ ಅಥವಾ ಹಾದಿ, ಸೇತುವೆ, ನೀರಿನ ಹಳ್ಳ, ಒಡ್ಡು ಅಥವಾ ಅವುಗಳ ಮೇಲೆ ಅಥವಾ ಪಕ್ಕದಲ್ಲಿರುವ ಬೇಲಿ, ಸಮುದ್ರ ಮತ್ತು ಬಂದರಿನ ತಳ ಅಥವಾ ನೀರಿನ ಏರುಮಟ್ಟದ ಗುರುತಿನ ಕೆಳಗಿನ ಮತ್ತು ನದಿಯ ಚಾಚು, ತೊರೆ, ನಾಲೆ, ಸರೋವರ ಮತ್ತು ಕೆರೆ ಮತ್ತು ಕಾಲುವೆ ಮತ್ತು ಸಣ್ಣ ಹೊಳೆಗಳು ಮತ್ತು ಎಲ್ಲಾ ನಿಂತ ಮತ್ತು ಹರಿಯುತ್ತಿರುವ ನೀರಿನ ತಳ, ಇತ್ಯಾದಿಗಳು ರಾಜ್ಯ ಸರ್ಕಾರದ ಸ್ವತ್ತಾಗಿರುವುದಿಲ್ಲ.

10. ಯಾವುದೇ ಜಲ ಮೂಲಗಳು, ಹಾದಿಗಳು, ತೊರೆಗಳು ಅಥವಾ ಅವುಗಳನ್ನು ಯಾವುದೇ ಹೆಸರಿನಿಂದ ಕರೆಯಲಿ ಅದು ಪೂರ್ತ್ ಖರಾಬು ಭೂಮಿಯಾಗಿದ್ದರೆ, ನಾನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನನ್ನು ಉಲ್ಲಂಘಿಸಿ, ಯಾವುದೇ ಕಾಲದಲ್ಲಿಯೂ ಬದಲಾಯಿಸಿರುವುದಿಲ್ಲ ಅಥವಾ ಹಾನಿಗೊಳಿಸಿರುವುದಿಲ್ಲ ಅಥವಾ ಪರಿವರ್ತಿಸಿರುವುದಿಲ್ಲ ಅಥವಾ ಯಾವ ಸಾರ್ವಜನಿಕ ಉದ್ದೇಶಕ್ಕಾಗಿ ಸದರಿ ಖರಾಬು ಭೂಮಿಯನ್ನು ಕಾಯ್ದಿರಿಸಲಾಗಿದೆಯೋ ಅಂಥ ಸಾರ್ವಜನಿಕ ಬಳಕೆಗೆ ಪ್ರತಿಬಂಧಿಸಿರುವುದಿಲ್ಲ ಅಥವಾ ಆಕ್ಷೇಪಿಸಿರುವುದಿಲ್ಲ.

11. ನನಗೆ ತಿಳಿದಿರುವಷ್ಟರ ಮಟ್ಟಿಗೆ, ಭೂ ಸ್ವಾಧೀನ ಅಧಿನಿಯಮ, 1894 ಅಥವಾ ಭೂ ಸ್ವಾಧೀನ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಅಧಿನಿಯಮ, 2013ರ ಅಡಿಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಸರ್ಕಾರವು ಈ ಭೂಮಿಯ ಯಾವುದೇ ಭಾಗವನ್ನು ಆರ್ಜಿಸಿರುವುದಿಲ್ಲ ಅಥವಾ ಅರ್ಜನೆಗೆ ಒಳಪಡುವುದಿಲ್ಲ ಮತ್ತು ಸ್ವಾಧೀನದ ಯಾವುದೇ ಪರಿಹಾರವನ್ನು ನಾನೂ

ಸ್ವೀಕರಿಸಿರುವುದಿಲ್ಲ ಅಥವಾ ಜೀವಂತ ಅಥವಾ ಮರಣ ಹೊಂದಿದ ನನ್ನ ಕುಟುಂಬದ ಯಾರೇ ಸದಸ್ಯರೂ ಸಹ ಸ್ವೀಕರಿಸಿರುವುದಿಲ್ಲ.

12. ನಾನು ಈ ಭೂಮಿಯನ್ನು ಯಾರೇ ವ್ಯಕ್ತಿ ಅಥವಾ ಸಂಸ್ಥೆಗೆ ಮಾರಾಟ ಮಾಡಿರುವುದಿಲ್ಲ ಮತ್ತು ದಾನ ಮಾಡಿರುವುದಿಲ್ಲ ಅಥವಾ ಅಡಮಾನ ಮಾಡಿರುವುದಿಲ್ಲ ಹಾಗೂ ಸರ್ಕಾರ ಅಥವಾ ಯಾರೇ ವ್ಯಕ್ತಿಗೆ ಈ ಭೂಮಿಯನ್ನು ಬಿಟ್ಟುಕೊಟ್ಟಿರುವುದಿಲ್ಲ.

13. ನನಗೆ ತಿಳಿದಿರುವಷ್ಟರ ಮಟ್ಟಿಗೆ, ಈ ಭೂಮಿಯು ವಕ್ಫ್ ಸ್ವತ್ತಾಗಿ ಅಧಿಸೂಚಿತವಾಗಿರುವುದಿಲ್ಲ.

14. ನನಗೆ ತಿಳಿದಿರುವಷ್ಟರಮಟ್ಟಿಗೆ,
(i) ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ ಅಧಿನಿಯಮ, 1954,
(ii) ಮೈಸೂರು (ಧಾರ್ಮಿಕ ಮತ್ತು ಧರ್ಮದಾಯ) ಇನಾಮುಗಳ ರದ್ದಿಯಾತಿ ಅಧಿನಿಯಮ, 1955, (iii) ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1959ರ,
-ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿ ನಾನು ಈ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ.

15. ಕೃಷಿ ಭೂಮಿಯ ನನ್ನ ಒಟ್ಟು ಹಿಡುವಳಿಗಳು, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ 63ನೇ ಪ್ರಕರಣದ ಅಡಿಯಲ್ಲಿ ಕೃಷಿ ಹಿಡುವಳಿಗಳ ಗರಿಷ್ಠ ಮಿತಿಯೊಳಗಿವೆ.

16. ನಾನು, ಈ ಕೆಳಕಂಡವುಗಳ ಯಾವುದೇ ಪರಂತುಕವನ್ನು .-
1. ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ 9ನೇ ನಿಯಮ.
2. ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ, 1978,
- ಅನ್ನು ಉಲ್ಲಂಘಿಸಿರುವುದಿಲ್ಲ.

17. ನಾನು, ಭೂ ಕಂದಾಯಕ್ಕೆ ಸಂಬಂಧಿಸಿದ ನನ್ನ ಎಲ್ಲ ಬಾಕಿಗಳನ್ನು ಮತ್ತು ಸರ್ಕಾರದ ಇತರ ಬಾಕಿಗಳನ್ನು ಸಂದಾಯ ಮಾಡಿರುತ್ತೇನೆ ಮತ್ತು ನನ್ನ ಭೂಮಿಯ ಯಾವುದೇ ಭಾಗವನ್ನು ಯಾವುದೇ ಕಾನೂನು ಪ್ರಕ್ರಿಯೆಯ ಮೂಲಕ ಮುಟ್ಟುಗೋಲು ಹಾಕಿಕೊಂಡಿರುವುದಿಲ್ಲ ಅಥವಾ ದಿವಾಳಿ ಮಾಡಿರುವುದಿಲ್ಲ.

18. ನಾನು ಭೂಮಿಯನ್ನು ಪರಭಾರೆ ಮಾಡಲು ನೋಂದಣಿಯಾದ ಅಥವಾ ಆಗಿರದ ಯಾವುದೇ ಮಾರಾಟ ಒಪ್ಪಂದ ಅಥವಾ ಮಾರಾಟ ಪತ್ರ ಅಥವಾ ದಾನ ಪತ್ರವನ್ನು ಮಾಡಿಕೊಂಡಿರುವುದಿಲ್ಲ ಮತ್ತು ಪರಿವರ್ತನೆಯ ನಂತರ ಭೂಮಿಯನ್ನು ನನ್ನ ಉದ್ದೇಶಿತ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತೇನೆ.

19. ಇಲ್ಲಿ ಹೇಳಿರುವುದನ್ನು ಹೊರತುಪಡಿಸಿ, ನಾನು ಭೂಮಿಯ ಯಾವುದೇ ಭಾಗವನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸುವುದಿಲ್ಲ.

20. ನಾನು ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಲಾದ ರೀತಿಯಲ್ಲಿ, ದಸ್ತಾವೇಜಿನ ಮೂಲಕ ಮತ್ತು ನಮೂದಿಸಲಾದ ವ್ಯಕ್ತಿ ಅಥವಾ ಸಂಘ-ಸಂಸ್ಥೆಯಿಂದ ಈ ಭೂಮಿಯನ್ನು ಅರ್ಜಿಸಿರುತ್ತೇನೆ:

ಕ್ರಮ ಸಂಖ್ಯೆ	ಸ್ವಾಧೀನತೆಯ ವಿಧಾನ	ದಿನಾಂಕ	ಯಿಂದ	ದಸ್ತಾವೇಜು (ದಸ್ತಾವೇಜನ್ನು ನೋಂದಾಯಿಸಿದ್ದರೆ. ಅಥವಾ ಇಲ್ಲದಿದ್ದರೆ, ಸಂಬಂಧಪಟ್ಟಿರುವಲ್ಲಿ ನಮೂಎಿಸುವುದು
1.	ಉತ್ತರಾಧಿಕಾರ			
2.	ಉತ್ತರ ಜೀವಿತಾಧಿಕಾರ			
3.	ವಾರಸು			
4.	ಪಾಲು			
5.	ಖರೀದಿ			
6.	ಅಡಮಾನ			
7.	ದಾನ			
8.	ಗೇಣಿ			
9.	ಮಂಜೂರಾತಿ			
10.	ನ್ಯಾಯಾಲಯದ ಆದೇಶ			
11.	ಇತರ (ನಿರ್ದಿಷ್ಟಪಡಿಸುವುದು)			

21. ನನ್ನ ಒಡೆತನ ಮತ್ತು ಸದರಿ ಭೂಮಿಯ ಉಪಭೋಗದ ಬಗ್ಗೆ ಯಾವುದೇ ವ್ಯಾಜ್ಯ ಅಥವಾ ವಿವಾದ ಇರುವುದಿಲ್ಲ.

22. ಕಾನೂನಿನ ಪರಂತುಕದಡಿಯಲ್ಲಿ ನನ್ನ ಮೇಲೆ ವಿಧಿಸಬಹುದಾದ ಯಾವುದೇ ಪರಿವರ್ತನಾ ಜುಲ್ಮಾನೆ ಅಥವಾ ಒಪ್ಪಿಗೆ ಕೋರಲು ತಗಲುವ ದಂಡವನ್ನು ನಾನು ಯಾವುದೇ ಹಿಂಜರಿಕೆಯಿಲ್ಲದೆ ಪಾವತಿಸುತ್ತೇನೆ ಮತ್ತು ಸಕ್ಷಮ ಪ್ರಾಧಿಕಾರದ ಯಾವುದೇ ಆದೇಶವನ್ನು ಪ್ರತಿಭಟಿಸದೆ ಅಥವಾ ಉಲ್ಲಂಘಿಸದೆ ಪಾಲಿಸುತ್ತೇನೆ ಮತ್ತು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಷರತ್ತುಗಳನ್ನು ಪಾಲಿಸುತ್ತೇನೆ. ಈ ಮೇಲೆ ಹೇಳಲಾದ ಉದ್ದೇಶದ ಸ್ವರೂಪದಲ್ಲಿ ಯಾವುದೇ ಕಾಲದಲ್ಲಿ, ಯಾವುದೇ ಬದಲಾವಣೆಯು ಅಗತ್ಯವಾದರೆ, ನಾನು ಕಾನೂನಿನ ಅನುಸಾರ ಮತ್ತೊಮ್ಮೆ ಈ ಪ್ರಾಧಕಾರಕ್ಕೆ ಅರ್ಜಿಸಲ್ಲಿಸುತ್ತೇನೆ ಮತ್ತು ಈ ಕಾನೂನಿನ ಅಡಿಯಲ್ಲಿ ನೀಡಲಾದ ಅನುಮತಿಯ ಮೇರೆಗೆ ಸುಸ್ಪಷ್ಟವಾಗಿ ಒಪ್ಪಿಗೆ ನೀಡದಿರುವ ಯಾವುದೇ ಬದಲಾವಣೆಗಳನ್ನು ಅಥವಾ ಕ್ರಮಗಳನ್ನು ಕೈಗೊಳ್ಳುವುದಿಲ್ಲವೆಂದು ಸಹ ನಾನು ಮುಚ್ಚಳಿಕೆಯನ್ನು ಬರೆದುಕೊಡುತ್ತೇನೆ.

ಮೇಲಿನ ಹೇಳಿಕೆಗಳು, ನಾನು ತಿಳಿದಿರುವಷ್ಟರಮಟ್ಟಿಗೆ ಮತ್ತು ನಾನು ನಂಬಿರುವಷ್ಟರಮಟ್ಟಿಗೆ ಸತ್ಯವೆಂದು ನಾನು ಈ ಮೂಲಕ ಪ್ರಮಾಣವಚನ ಸ್ವೀಕರಿಸುತ್ತೇನೆ ಮತ್ತು ಸಂಬಂಧಪಟ್ಟ ಅಧಿಕಾರಿಗಳು ನೀಡಿದ ಅನುಮತಿ ಅಥವಾ ಆದೇಶ ಅಥವಾ ನಿರಾಕ್ಷೇಪಣಾ ಪ್ರಮಾಣಪತ್ರದಲ್ಲಿ ಹೇಳಲಾದ ಷರತ್ತುಗಳನ್ನು ಯಾವುದೇ ಕಾಲದಲ್ಲಿ ಪಾಲಿಸದೇ ಇದ್ದರೆ ಅಥವಾ ಯಾವುದೇ ಕಾಲದಲ್ಲಿ ಮೇಲಿನ ವಿಷಯದಲ್ಲಿ ನಾನು ನೀಡಿದ ಮಾಹಿತಿಯು ಸುಳ್ಳು ಅಥವಾ ನಿಜವಲ್ಲವೆಂದು ಸಾಬೀತಾದರೆ, ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಯಾಗಲು ಒಪ್ಪಿರುತ್ತೇನೆ ಮತ್ತು ಕಾನೂನಿನ ಪ್ರಾಧಿಕಾರವು ವಿಧಿಸುವ ಯಾವುದೇ

ದಂಡವನ್ನು ಸಹ ಗುರಿಯಾಗುತ್ತೇನೆ ಮತ್ತು ಅಂಥ ಸ್ವತ್ತಿನ ಯಾವುದೇ ಕಾಲ ಕಳೆದು ಹೋಗುವಿಕೆ ಅಥವಾ ಪರಭಾರೆ ಅಥವಾ ವರ್ಗಾವಣೆಯಾದ ನಂತರವೂ ಕೂಡ ನಾನು ಪಡೆದ ಎಲ್ಲಾ ಅನುಮತಿಗಳನ್ನು ಕೂಡಲೇ ಹಿಂತೆಗೆದುಕೊಳ್ಳತಕ್ಕದ್ದಾಗಿದ್ದರೆ ಅದನ್ನು ನಾನು ಒಪ್ಪಿರುತ್ತೇನೆ ಎಂಬ ಅಂಶವನ್ನು ನಾನು ತಿಳಿದಿರುತ್ತೇನೆ.

ದಿನಾಂಕ: ಹೇಳಿಕೆದಾರ
ಸ್ಥಳ:

ಈ ಮೇಲ್ಕಂಡ ಅನುಸೂಚಿಯು ಈ ಮುಂದಿನ ಭೂಮಿಗೆ ಸಂಬಂಧಪಟ್ಟಿದೆ:-

1. ಜಿಲ್ಲೆ----------2. ತಾಲೂಕು----------3. ಗ್ರಾಮ/ಘಟಕ----------4. ಸರ್ವೆ ನಂಬರ್----------ಭಾಗ ಸಂಖ್ಯೆ----------5. ವಿಸ್ತೀರ್ಣ (ಪ್ರದೇಶ)---------- ಎಕರೆಗಳು----------ಗುಂಟೆಗಳು

6. ಚೆಕ್ಕುಬಂದಿ

ಉತ್ತರ:		ದಕ್ಷಿಣ:	
ಪೂರ್ವ:		ಪಶ್ಚಿಮ:	

ನೋಟರಿದಾರರ ಸಹಿ ಮತ್ತು ಹೆಸರು ಶ್ರೀ. .....
ದಿನಾಂಕ:
ಸ್ಥಳ:

ನಮೂನೆ-21ಸಿ

(ನಿಯಮ 106-ಬಿ ಯನ್ನು ನೋಡಿ)

(ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 95(2) (i) ಪ್ರಕರಣ ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ 106ಬಿ ನಿಯಮದ ಅಡಿಯಲ್ಲಿ ಅಫಿಡಾವಿಟ್‌ನ ನಮೂನೆ)

----------(ತಂದೆ/ಪತಿಯ ಹೆಸರು), ರವರ ಮಗ ಅಥವಾ ಮಗಳು ಅಥವಾ ಪತ್ನಿಯಾಗಿದ್ದು-ಶಾಶ್ವತ ವಿಳಾಸ:----------ಪಿನ್---------- ಪ್ರಸ್ತುತ ಅಂಚೆ ವಿಳಾಸವಾದ ----------ರಲ್ಲಿ ವಾಸಿಸುತ್ತಿರುವ ----------(ಹೆಸರು), ----------(ವಯಸ್ಸು), ----------(ಲಿಂಗ), ಆದ ನಾನು, ಈ ಮೂಲಕ ಕೆಳಕಂಡಂತೆ ಪ್ರಮಾಣ ಮಾಡಿ, ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ:

1. ನಾನು ಈ ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು, ನನ್ನ ವೈಯಕ್ತಿಕ ವಿವರಗಳು ಈ ಮುಂದಿನಂತಿವೆ:

1.	ಆಧಾರ ಸಂಖ್ಯೆ	
2.	ಮೊಬೈಲ್ ಸಂಖ್ಯೆ	
3.	ಪಾನ್	
4.	ಜನ್ಮ ದಿನಾಂಕ/ವಯಸ್ಸು	
5.	ವೃತ್ತಿ	
6.	ರೂಪಾಯಿಗಳಲ್ಲಿ ವಾರ್ಷಿಕ ಕುಟುಂಬ ಆದಾಯ (ಎಲ್ಲಾ ಮೂಲಗಳಿಂದ)	

2. ನಾನು ಕರ್ನಾಟಕದ----------ಜಿಲ್ಲೆಯ----------ತಾಲ್ಲೂಕಿನ----------ವೃತ್ತ/ಹೋಬಳಿಯ----------ಸರ್ವೆ_____ನಂಬರಿನಲ್ಲಿ----------ಭಾಗ ನಂಬರ್‌ನಲ್ಲಿ----------ಎಕರೆಗಳ----------ಗುಂಟೆಗಳ ವಿಸ್ತಿರ್ಣವುಳ್ಳ ಭೂಮಿಯ (ಅನುಸೂಚಿಯಲ್ಲಿ ಅತ್ಯಂತ ವಿಸ್ತಾರವಾಗಿ ವಿವರಿಸಲಾಗಿದೆ) ಒಡೆಯನಾಗಿದ್ದು ಅದರ ಅನುಭೋಗವನ್ನು ಹೊಂದಿರುತ್ತೇನೆ.

3. ನಾನು----------ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಯರಿಗೆ (ಇಲ್ಲಿ ಉದ್ದೇಶವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ)----------(ಕೈಗಾರಿಕೆ/ವಾಣಿಜ್ಯ/ವಸತಿ - ಒಂದನ್ನು ಆಯ್ಕೆಮಾಡಿ) ಯ ಬಳಕೆಗೆ----------ಎಕರೆಗಳು----------ಗುಂಟೆಗಳ ವಿಸ್ತೀರ್ಣದ ಸದರಿ ಭೂಮಿಯನ್ನು ಪರಿವರ್ತಿಸಲು/ಬದಲಾಯಿಸಲು ಉದ್ದೇಶಿಸಿರುತ್ತೇನೆ.

4. ಕೃಷಿಯೇತರ ಉದ್ದೇಶಗಳ ಬದಲಾವಣೆಗೆ ಸಮನಾಗಿರದಂಥ ಹೊಸ ಕೈಗಾರಿಕೆಯ ಉದ್ದೇಶಗಳಿಗಾಗಿ ನನ್ನ ಭೂಮಿಯ ಪೈಕಿ ಎರಡು ಎಕರೆಗಳವರೆಗೆ ಮಾತ್ರ ನಾನು ಬದಲಾಯಿಸಿಕೊಳ್ಳುತ್ತಿದ್ದೇನೆ/ಬದಲಾಯಿಸಿಕೊಳ್ಳುತ್ತಿಲ್ಲ. (ಅನ್ವಯಿಸದೆ ಇರುವುದನ್ನು ಹೊಡೆದುಹಾಕಿ).

5. ಈ ಅರ್ಜಿಯೊಂದಿಗೆ ನಾನು ಸಲ್ಲಿಸಿರುವ ದಾಖಲೆಗಳು ನಿಜವಾಗಿವೆ ಮತ್ತು ಸರಿಯಾಗಿವೆ:

(i) ಆರ್.ಟಿ.ಸಿ.

(ii) ಮುಟೇಷನ್ ಪ್ರಮಾಣ ಪತ್ರ.

(iii) ಋಣಭಾರ ಪ್ರಮಾಣ ಪತ್ರ.

(iv) ಖಾತಾ

(v) ಪರವಾನಗಿ ಪಡೆದ ಸರ್ವೇಯರ್‌ನಿಂದ ಸರಿಯಾಗಿ ಸಿದ್ಧಪಡಿಸಲಾದ ಭೂಮಿಯ ನಕ್ಷೆ

6. ಅರ್ಜಿ ಸಲ್ಲಿಸಿರುವ ಈ ಭೂಮಿಯ ಯಾವುದೇ ಭಾಗವನ್ನು ನಾನು ಅಥವಾ ನನ್ನ ನೌಕರರು ಅಥವಾ ಅವಲಂಬಿತರು ಒತ್ತುವರಿ ಮಾಡಿಕೊಂಡಿರುವುದಿಲ್ಲ

7. ಈ ಭೂಮಿಯ ಯಾವುದೇ ಭಾಗವು ಯಾವುದೇ ಸರ್ಕಾರಿ ಸಂಸ್ಥೆಯ ಒಡೆತನದಲ್ಲಿಲ್ಲ.

8. ಕರ್ನಾಟಕ ಭೂ ಕಂದಾಯ ಅಧಿನಿಯಮದ 67(1)ನೇ ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದಂತೆ, ಈ ಭೂಮಿಯ ಯಾವುದೇ ಭಾಗವು, ಅತ್ಯಂತ ವಿಸ್ತಾರವಾಗಿ ಹೇಳುವುದಾದರೆ, ಸಾರ್ವಜನಿಕ ರಸ್ತೆ, ಬೀದಿ, ಓಣಿ ಅಥವಾ ಹಾದಿ, ಸೇತುವೆ, ನೀರಿನ ಹಳ್ಳ, ಒಡ್ಡು ಅಥವಾ ಅವುಗಳ ಮೇಲೆ ಅಥವಾ ಪಕ್ಕದಲ್ಲಿರುವ ಬೇಲಿ, ಸಮುದ್ರ ಮತ್ತು ಬಂದರಿನ ತಳ ಅಥವಾ ನೀರಿನ ಏರುಮಟ್ಟದ ಗುರುತಿನ ಕೆಳಗಿನ ಮತ್ತು ನದಿಯ ಚಾಚು, ತೊರೆ, ನಾಲೆ, ಸರೋವರ ಮತ್ತು ಕೆರೆ ಮತ್ತು ಕಾಲುವೆ ಮತ್ತು ಸಣ್ಣ ಹೊಳೆಗಳು ಮತ್ತು ಎಲ್ಲಾ ನಿಂತ ಮತ್ತು ಹರಿಯುತ್ತಿರುವ ನೀರಿನ ತಳ, ಇತ್ಯಾದಿಗಳು ರಾಜ್ಯ ಸರ್ಕಾರದ ಸ್ವತ್ತಾಗಿರುವುದಿಲ್ಲ.

9. ಯಾವುದೇ ಜಲ ಮೂಲಗಳು, ಹಾದಿಗಳು, ತೊರೆಗಳು ಅಥವಾ ಅವುಗಳನ್ನು ಯಾವುದೇ ಹೆಸರಿನಿಂದ ಕರೆಯಲಿ ಅದು ಪೂರ್ಣ ಖರಾಬು ಭೂಮಿಯಾಗಿದ್ದರೆ, ನಾನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನನ್ನು ಉಲ್ಲಂಘಿಸಿ, ಯಾವುದೇ ಕಾಲದಲ್ಲಿಯೂ ಬದಲಾಯಿಸಿರುವುದಿಲ್ಲ ಅಥವಾ ಹಾನಿಗೊಳಿಸಿರುವುದಿಲ್ಲ ಅಥವಾ ಪರಿವರ್ತಿಸಿರುವುದಿಲ್ಲ ಅಥವಾ ಯಾವ ಸಾರ್ವಜನಿಕ ಉದ್ದೇಶಕ್ಕಾಗಿ ಸದರಿ ಖರಾಬು ಭೂಮಿಯನ್ನು ಕಾಯ್ದಿರಿಸಲಾಗಿದೆಯೋ ಅಂಥ ಸಾರ್ವಜನಿಕ ಬಳಕೆಗೆ ಪ್ರತಿಬಂಧಿಸಿರುವುದಿಲ್ಲ ಅಥವಾ ಆಕ್ಷೇಪಿಸಿರುವುದಿಲ್ಲ.

10. ನನಗೆ ತಿಳಿದಿರುವಷ್ಟರ ಮಟ್ಟಿಗೆ, ಭೂ ಸ್ವಾಧೀನ ಅಧಿನಿಯಮ, 1894 ಅಥವಾ ಭೂ ಸ್ವಾಧೀನ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು

ಅಧಿನಿಯಮ, 2013ರ ಅಡಿಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಸರ್ಕಾರವು ಈ ಭೂಮಿಯ ಯಾವುದೇ ಭಾಗವನ್ನು ಆರ್ಜಿಸಿರುವುದಿಲ್ಲ ಅಥವಾ ಅರ್ಜನೆಗೆ ಒಳಪಡುವುದಿಲ್ಲ ಮತ್ತು ಸ್ವಾಧೀನದ ಯಾವುದೇ ಪರಿಹಾರವನ್ನು ನಾನೂ ಸ್ವೀಕರಿಸಿರುವುದಿಲ್ಲ ಅಥವಾ ಜೀವಂತ ಅಥವಾ ಮರಣ ಹೊಂದಿದ ನನ್ನ ಕುಟುಂಬದ ಯಾರೇ ಸದಸ್ಯರೂ ಸಹ ಸ್ವೀಕರಿಸಿರುವುದಿಲ್ಲ.

11. ನಾನು ಈ ಭೂಮಿಯನ್ನು ಯಾರೇ ವ್ಯಕ್ತಿ ಅಥವಾ ಸಂಸ್ಥೆಗೆ ಮಾರಾಟ ಮಾಡಿರುವುದಿಲ್ಲ ಮತ್ತು ದಾನ ಮಾಡಿರುವುದಿಲ್ಲ ಅಥವಾ ಅಡಮಾನ ಮಾಡಿರುವುದಿಲ್ಲ ಹಾಗೂ ಸರ್ಕಾರ ಅಥವಾ ಯಾರೇ ವ್ಯಕ್ತಿಗೆ ಈ ಭೂಮಿಯನ್ನು ಬಿಟ್ಟುಕೊಟ್ಟಿರುವುದಿಲ್ಲ.

12. ನನಗೆ ತಿಳಿದಿರುವಷ್ಟರ ಮಟ್ಟಿಗೆ, ಈ ಭೂಮಿಯು ವಕ್ಫ್ ಸ್ವತ್ತಾಗಿ ಅಧಿಸೂಚಿತವಾಗಿರುವುದಿಲ್ಲ.

13. ನನಗೆ ತಿಳಿದಿರುವಷ್ಟರಮಟ್ಟಿಗೆ,

(i) ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ ಅಧಿನಿಯಮ, 1954,
(ii) ಮೈಸೂರು (ಧಾರ್ಮಿಕ ಮತ್ತು ಧರ್ಮದಾಯ) ಇನಾಮುಗಳ ರದ್ದಿಯಾತಿ ಅಧಿನಿಯಮ, 1955,
(iii) ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977 (1978ರ ಕರ್ನಾಟಕ ಅಧಿನಿಯಮ ಸಂಖ್ಯೆ 10).
-ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿ ನಾನು ಈ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ.

14. ಕೃಷಿ ಭೂಮಿಯ ನನ್ನ ಒಟ್ಟು ಹಿಡುವಳಿಗಳು, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 10).
63ನೇ ಪ್ರಕರಣದ ಅಡಿಯಲ್ಲಿ ಕೃಷಿ ಹಿಡುವಳಿಗಳ ಗರಿಷ್ಠ ಮಿತಿಯೊಳಗಿವೆ.

15. ನಾನು, ಈ ಕೆಳಕಂಡವುಗಳ ಯಾವುದೇ ಪರಂತುಕವನ್ನು ಅನ್ನು ಉಲ್ಲಂಘಿಸಿರುವುದಿಲ್ಲ.-

(i) ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ 9ನೇ ನಿಯಮ.
(ii) ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ, 1978,

16. ನಾನು ಅಥವಾ ನನ್ನ ಪರವಾಗಿ ಅಥವಾ ಅದೇ ಭೂಮಿಯ ಮೇಲೆ ಭೂ ಪರಿವರ್ತನೆಗಾಗಿ ಈ ಹಿಂದೆ ಸಲ್ಲಿಸಿದ್ದ ಯಾವುದೇ ಅರ್ಜಿಯನ್ನು ತಿರಸ್ಕರಿಸಲಾಗಿಲ್ಲ.

17. ನಾನು, ಭೂ ಕಂದಾಯಕ್ಕೆ ಸಂಬಂಧಿಸಿದ ನನ್ನ ಎಲ್ಲ ಬಾಕಿಗಳನ್ನು ಮತ್ತು ಸರ್ಕಾರದ ಇತರ ಬಾಕಿಗಳನ್ನು ಸಂದಾಯ ಮಾಡಿರುತ್ತೇನೆ ಮತ್ತು ನನ್ನ ಭೂಮಿಯ ಯಾವುದೇ ಭಾಗವನ್ನು ಯಾವುದೇ ಕಾನೂನು ಪ್ರಕ್ರಿಯೆಯ ಮೂಲಕ ಮುಟ್ಟುಗೋಲು ಹಾಕಿಕೊಂಡಿರುವುದಿಲ್ಲ ಅಥವಾ ದಿವಾಳಿ ಮಾಡಿರುವುದಿಲ್ಲ.

18. ನಾನು ಭೂಮಿಯನ್ನು ಪರಭಾರೆ ಮಾಡಲು ನೋಂದಣಿಯಾದ ಅಥವಾ ಆಗಿರದ ಯಾವುದೇ ಮಾರಾಟ ಒಪ್ಪಂದ ಅಥವಾ ಮಾರಾಟ ಪತ್ರ ಅಥವಾ ದಾನ ಪತ್ರವನ್ನು ಮಾಡಿಕೊಂಡಿರುವುದಿಲ್ಲ ಮತ್ತು ಪರಿವರ್ತನೆಯ ನಂತರ ಭೂಮಿಯನ್ನು ನನ್ನ ಉದ್ದೇಶಿತ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತೇನೆ.

19. ಇಲ್ಲಿ ಹೇಳಿರುವುದನ್ನು ಹೊರತುಪಡಿಸಿ, ನಾನು ಭೂಮಿಯ ಯಾವುದೇ ಭಾಗವನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸುವುದಿಲ್ಲ.

20. ನಾನು ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಲಾದ ರೀತಿಯಲ್ಲಿ, ದಸ್ತಾವೇಜಿನ ಮೂಲಕ ಮತ್ತು ನಮೂದಿಸಲಾದ ವ್ಯಕ್ತಿ ಅಥವಾ ಸಂಘ-ಸಂಸ್ಥೆಯಿಂದ ಈ ಭೂಮಿಯನ್ನು ಅರ್ಜಿಸಿರುತ್ತೇನೆ:

ಕ್ರಮ ಸಂಖ್ಯೆ	ಸ್ವಾಧೀನತೆಯ ವಿಧಾನ (ಹೆಚ್ಚು ಸೂಕ್ತವಾದದನ್ನು ಆರಿಸಿ ಮತ್ತು ಪಕ್ಕದಲ್ಲಿರುವ ಸಾಲಿನಲ್ಲಿ ವಿವರಗಳನ್ನು ಭರ್ತಿ ಮಾಡಿ).	ದಿನಾಂಕ	ಯಿಂದ	ದಸ್ತಾವೇಜು (ದಸ್ತಾವೇಜನ್ನು ನೋಂದಾಯಿಸಿದ್ದರೆ. ಅಥವಾ ಇಲ್ಲದಿದ್ದರೆ, ಸಂಬಂಧಪಟ್ಟಿರುವಲ್ಲಿ ನಮೂಎಿಸುವುದು
1.	ಉತ್ತರಾಧಿಕಾರ			
2.	ಉತ್ತರ ಜೀವಿತಾಧಿಕಾರ			
3.	ವಾರಸು			
4.	ಪಾಲು			
5.	ಖರೀದಿ			
6.	ಅಡಮಾನ			
7.	ದಾನ			
8.	ಗೇಣಿ			
9.	ಮಂಜೂರಾತಿ			
10.	ನ್ಯಾಯಾಲಯದ ಆದೇಶ			
11.	ಇತರ (ನಿರ್ದಿಷ್ಟಪಡಿಸುವುದು)			

21. ನನ್ನ ಒಡೆತನ ಮತ್ತು ಸದರಿ ಭೂಮಿಯ ಉಪಭೋಗದ ಬಗ್ಗೆ ಯಾವುದೇ ವ್ಯಾಜ್ಯ ಅಥವಾ ವಿವಾದ ಇರುವುದಿಲ್ಲ.

22. ಕಾನೂನಿನ ಪರಂತುಕದಡಿಯಲ್ಲಿ ನನ್ನ ಮೇಲೆ ವಿಧಿಸಬಹುದಾದ ಯಾವುದೇ ಪರಿವರ್ತನಾ ಜುಲ್ಮಾನೆ ಅಥವಾ ಒಪ್ಪಿಗೆ ಕೋರಲು ತಗಲುವ ದಂಡವನ್ನು ನಾನು ಯಾವುದೇ ಹಿಂಜರಿಕೆಯಿಲ್ಲದೆ ಪಾವತಿಸುತ್ತೇನೆ ಮತ್ತು ಸಕ್ಷಮ ಪ್ರಾಧಿಕಾರದ ಯಾವುದೇ ಆದೇಶವನ್ನು ಪ್ರತಿಭಟಿಸದೆ ಅಥವಾ ಉಲ್ಲಂಘಿಸದೆ ಪಾಲಿಸುತ್ತೇನೆ ಮತ್ತು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಷರತ್ತುಗಳನ್ನು ಪಾಲಿಸುತ್ತೇನೆ. ಈ ಮೇಲೆ ಹೇಳಲಾದ ಉದ್ದೇಶದ ಸ್ವರೂಪದಲ್ಲಿ ಯಾವುದೇ ಕಾಲದಲ್ಲಿ, ಯಾವುದೇ ಬದಲಾವಣೆಯು ಅಗತ್ಯವಾದರೆ, ನಾನು ಕಾನೂನಿನ ಅನುಸಾರ ಮತ್ತೊಮ್ಮೆ ಈ ಪ್ರಾಧಕಾರಕ್ಕೆ ಅರ್ಜಿಸಲ್ಲಿಸುತ್ತೇನೆ ಮತ್ತು ಈ ಕಾನೂನಿನ ಅಡಿಯಲ್ಲಿ ನೀಡಲಾದ ಅನುಮತಿಯ ಮೇರೆಗೆ ಸುಸ್ಪಷ್ಟವಾಗಿ ಒಪ್ಪಿಗೆ ನೀಡದಿರುವ ಯಾವುದೇ ಬದಲಾವಣೆಗಳನ್ನು ಅಥವಾ ಕ್ರಮಗಳನ್ನು ಕೈಗೊಳ್ಳುವುದಿಲ್ಲವೆಂದು ಸಹ ನಾನು ಮುಚ್ಚಳಿಕೆಯನ್ನು ಬರೆದುಕೊಡುತ್ತೇನೆ.

ಮೇಲಿನ ಹೇಳಿಕೆಗಳು, ನಾನು ತಿಳಿದಿರುವಷ್ಟರಮಟ್ಟಿಗೆ ಮತ್ತು ನಾನು ನಂಬಿರುವಷ್ಟರಮಟ್ಟಿಗೆ ಸತ್ಯವೆಂದು ನಾನು ಈ ಮೂಲಕ ಪ್ರಮಾಣವಚನ ಸ್ವೀಕರಿಸುತ್ತೇನೆ ಮತ್ತು ಸಂಬಂಧಪಟ್ಟ ಅಧಿಕಾರಿಗಳು ನೀಡಿದ ಅನುಮತಿ ಅಥವಾ ಆದೇಶ ಅಥವಾ ನಿರಾಕ್ಷೇಪಣಾ ಪ್ರಮಾಣಪತ್ರದಲ್ಲಿ ಹೇಳಲಾದ ಷರತ್ತುಗಳನ್ನು ಯಾವುದೇ ಕಾಲದಲ್ಲಿ ಪಾಲಿಸದೇ ಇದ್ದರೆ ಅಥವಾ ಯಾವುದೇ ಕಾಲದಲ್ಲಿ ಮೇಲಿನ ವಿಷಯದಲ್ಲಿ ನಾನು ನೀಡಿದ ಮಾಹಿತಿಯು ಸುಳ್ಳು ಅಥವಾ ನಿಜವಲ್ಲವೆಂದು ಸಾಬೀತಾದರೆ, ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಯಾಗಲು ಒಪ್ಪಿರುತ್ತೇನೆ ಮತ್ತು ಕಾನೂನಿನ ಪ್ರಾಧಿಕಾರವು ವಿಧಿಸುವ ಯಾವುದೇ ದಂಡವನ್ನು ಸಹ ಗುರಿಯಾಗುತ್ತೇನೆ ಮತ್ತು ಅಂಥ

ಸ್ವತ್ತಿನ ಯಾವುದೇ ಕಾಲ ಕಳೆದು ಹೋಗುವಿಕೆ ಅಥವಾ ಪರಭಾರೆ ಅಥವಾ ವರ್ಗಾವಣೆಯಾದ ನಂತರವೂ ಕೂಡ ನಾನು ಪಡೆದ ಎಲ್ಲಾ ಅನುಮತಿಗಳನ್ನು ಕೂಡಲೇ ಹಿಂತೆಗೆದುಕೊಳ್ಳತಕ್ಕದ್ದಾಗಿದ್ದರೆ ಅದನ್ನು ನಾನು ಒಪ್ಪಿರುತ್ತೇನೆ ಎಂಬ ಅಂಶವನ್ನು ನಾನು ತಿಳಿದಿರುತ್ತೇನೆ.

ದಿನಾಂಕ: ಹೇಳಿಕೆದಾರ

ಸ್ಥಳ:

ಈ ಮೇಲ್ಕಂಡ ಅನುಸೂಚಿಯು ಈ ಮುಂದಿನ ಭೂಮಿಗೆ ಸಂಬಂಧಪಟ್ಟಿದೆ:-
1. ಜಿಲ್ಲೆ----------2. ತಾಲೂಕು----------3. ಗ್ರಾಮ/ಘಟಕ----------4. ಸರ್ವೆ ನಂಬರ್----------ಭಾಗ ಸಂಖ್ಯೆ----------5. ವಿಸ್ತೀರ್ಣ (ಪ್ರದೇಶ)----------ಎಕರೆಗಳು---------- ಗುಂಟೆಗಳು

6. ಚೆಕ್ಕುಬಂದಿ

ಉತ್ತರ:		ದಕ್ಷಿಣ:	
ಪೂರ್ವ:		ಪಶ್ಚಿಮ:	

ನೋಟರಿದಾರರ ಸಹಿ ಮತ್ತು ಹೆಸರು ಶ್ರೀ. .....
ದಿನಾಂಕ:
ಸ್ಥಳ:

ನಮೂನೆ 21ಡಿ

[ಕರ್ನಾಟಕ ಭೂ ಕಂದಾಯ ನಿಯಮಗಳು, 1966 ರ 106ಎಫ್ ನಿಯಮ ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಪ್ರಕರಣಗಳು 95 ಮತ್ತು 96(3) ರ ಮೇರೆಗಿನ ನೋಟೀಸಿನ ನಮೂನೆ)

---------- ಶ್ರೀ/ಶ್ರೀಮತಿ ---------- ರ ಮಗ ಅಥವಾ ರ ಮಗಳು ಅಥವಾ --------- ಗಂಡ/ಹೆಂಡತಿ ----- ನಿವಾಸಿರವರಿಗೆ ಈ ಕೆಳಗಿನ ಅನುಸೂಚಿಯಲ್ಲಿ ವಿವರಿಸಿದ ಜಮೀನುಗಳಿಗೆ ಸಂಬಂಧಿಸಿದಂತೆ ಈ ಮೂಲಕ ನೋಟಿಸ್ ನೀಡಲಾಗಿದೆ.

ಅನುಸೂಚಿ

1. ಜಿಲ್ಲೆ ..... 2. ತಾಲ್ಲೂಕು..... 3. ಗ್ರಾಮ/ಘಟಕ ..... 4. ಸರ್ವೇ ನಂಬರ್: ..... ಭಾಗದ ಸಂಖ್ಯೆ .....
5. ವಿಸ್ತೀರ್ಣ (ಪ್ರದೇಶದ)..... ಎಕರೆಗಳು... ಗುಂಟೆಗಳು

6. ಚೆಕ್ಕುಬಂದಿ:

ಉತ್ತರ:		ದಕ್ಷಿಣ:	
ಪೂರ್ವ:		ಪಶ್ಚಿಮ:	

ನೀವು, ಈ ಕೆಳಗಿನಂತೆ ನಡೆದುಕೊಂಡಿರುವ ಬಗ್ಗೆ ವರದಿಯಾಗಿರುವುದರಿಂದ,

i) ಜಿಲ್ಲಾಧಿಕಾರಿಯವರ ಅನುಮತಿಯಿಲ್ಲದೆ ಸದರಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಪರಿವರ್ತಿಸಿದ್ದೀರಿ ಮತ್ತು ಸದರಿ ಉಲ್ಲಂಘನೆಯು ಈ ದಿನಾಂಕದವರೆಗೆ -------- ದಿನಗಳ ಕಾಲ ಮುಂದುವರಿದಿದೆ.

ii) ಸದರಿ ಜಮೀನನ್ನು ಕೃಷಿಯೇತರ ಉದ್ದೇಶಗಳಿಗೆ ಬಳಸುವ ಸಮಯದಲ್ಲಿ -------- ರ ಆದೇಶ ನಂಬರ್ಲ್ಲಿ --------- ದಿನಾಂಕ --------- ರಲ್ಲಿ ವಿಧಿಸಲಾದ ಈ ಕೆಳಗಿನ ಷರತ್ತುಗಳನ್ನು ಉಲ್ಲಂಘಿಸಿ ಮತ್ತು ಉದ್ದೇಶಪೂರ್ವಕವಾಗಿ ಅತಿಕ್ರಮಿಸಿದ್ದೀರಿ: ---------

iii) ಉದ್ದೇಶಪೂರ್ವಕವಾಗಿ ಮತ್ತು ತಿಳಿದೂ ಸಹ, ಪೂರ್ಣ ಅರಿವಿನೊಂದಿಗೆ, ಸರ್ಕಾರವನ್ನು ದಾರಿ ತಪ್ಪಿಸಲು ಪ್ರಯತ್ನಿಸಿ ಮತ್ತು ವೈಯಕ್ತಿಕ ಲಾಭಕ್ಕಾಗಿ ಸುಳ್ಳು ಘೋಷಣೆ ಅಥವಾ ಇದಕ್ಕೆ ಸಂಬಂಧಿಸಿದಂತೆ ಅಫಿಡಾವಿಟ್ ಮಾಡುವ ಮೂಲಕ ಕಾನೂನನ್ನು ಉಲ್ಲಂಘಿಸಿದ್ದೀರಿ:

1)

2)

3)

4)

ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಬಳಸುವುದಕ್ಕೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ಉಲ್ಲಂಘನೆಗಳು, ಈ ಕೆಳಗಿನ ಕಾನೂನು ಉಪಬಂಧಗಳ ಉಲ್ಲಂಘನೆಗಳಾಗಿರುವುದರಿಂದ, ಮತ್ತು/ಅಥವಾ

1) ಪ್ರಕರಣ/ಗಳು:

2) ನಿಯಮ/ಗಳು:

3) ವಿನಿಯಮ/ಗಳು:

ರ ಮೇರೆಗೆ ಕ್ರಿಮಿನಲ್ ಅಪರಾಧವಾಗಿರುವುದರಿಂದ

---------- ಜಿಲ್ಲಾಧಿಕಾರಿಯಾದ ನಾನು,

(i) ಕೃಷಿ ಭೂಮಿಯನ್ನು ಬೇರೆ ಉದ್ದೇಶಕ್ಕೆ ಬದಲಾವಣೆ /ಪರಿವರ್ತನೆಗಾಗಿ ನಿಮ್ಮ ಅರ್ಜಿ ---------- ಅನ್ನು ಏಕೆ ತಿರಸ್ಕರಿಸತಕ್ಕದ್ದಲ್ಲ ಮತ್ತು ಪರಿವರ್ತನಾ ಶುಲ್ಕ ಮತ್ತು/ಅಥವಾ ಸಂಯೋಜಿತ ದಂಡವನ್ನು ಪಾವತಿಸಿದ್ದರೆ ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದಲ್ಲ.

(ii) ---------- ದಿನಾಂಕ ------- ರ ಮೂಲಕ ಮಂಜೂರು ಮಾಡಲಾದ ಪರಿವರ್ತನೆ ಅಥವಾ ಬದಲಾವಣೆಗಾಗಿ ಅನುಮತಿ ಯಾವುವಾದರೂ ಇದ್ದರೆ, ಆ ಅನುಮತಿಯನ್ನು ಏಕೆ ಅಸಿಂಧು ಮತ್ತು ಕಾನೂನಿನ ಅನ್ವಯ ನಿರರ್ಥಕಗೊಳಿಸಬಾರದು ಮತ್ತು ಸರ್ಕಾರಕ್ಕೆ ಪರಿವರ್ತನಾ ಜುಲ್ಮಾನೆ ಮತ್ತು/ ಅಥವಾ ಒಪ್ಪಿಗೆ ಕೋರಲು ತಗಲುವ ದಂಡವನ್ನು ಪಾವತಿಸಿದ್ದರೆ ಸರ್ಕಾರವು ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದು?

(iii) ನೀವು, ... ಅನ್ನು ಅದರ ಮೂಲ ಉದ್ದೇಶಕ್ಕಾಗಿ ಭೂಮಿಯನ್ನು ಬಳಸಲು ಏಕೆ ನಿರ್ದೇಶಿಸಬಾರದು?

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

(iv) ಗರಿಷ್ಠ ಒಂದು ಲಕ್ಷ ರೂಪಾಯಿಗಳಿಗೆ ಒಳಪಟ್ಟು ನಿಯಮ 107ಎ ಅನುಸಾರ ದಂಡವನ್ನು ಮತ್ತು ಉಲ್ಲಂಘನೆಯ ಪ್ರತಿ ದಿನಕ್ಕೆ ಎರಡು ಸಾವಿರದ ಐದು ನೂರು ರೂಪಾಯಿಗಳ ದಂಡವನ್ನು ಏಕೆ ವಿಧಿಸಬಾರದು?

(v) ವಿಧಿಸಲಾದ ಪರಿವರ್ತನಾ ಜುಲ್ಮಾನೆ ಅಥವಾ ದಂಡವನ್ನು ಭೂ ಕಂದಾಯದ ಬಾಕಿಗಳೆಂಬಂತೆ ಏಕೆ ವಸೂಲಿ ಮಾಡಬಾರದು?

(vi) ಭಾರತೀಯ ನ್ಯಾಯ ಸಂಹಿತೆ, 2023 ರ ಪ್ರಕರಣಗಳು 228 ಮತ್ತು 229 ರ ಅಡಿಯಲ್ಲಿ ನಿಮ್ಮ ಮೇಲೆ ಏಕೆ ಕಾನೂನು ಕ್ರಮಜರುಗಿಸಬಾರದು?

(vii) ಸದರಿ ಭೂಮಿಗಳಿಗೆ ಸಂಬಂಧಿಸಿದಂತೆ ನಿಮ್ಮ ವಿರುದ್ಧ ಮುಟ್ಟುಗೋಲು ಹಾಕಿಕೊಳ್ಳುವ ಆದೇಶವನ್ನು ಏಕೆ ಹೊರಡಿಸಬಾರದು,

- ಎಂಬುದರ ಬಗ್ಗೆ ವಿವರಣೆಯನ್ನು ಕೋರಿ ಈ ಮೂಲಕ ನೋಟಿಸನ್ನು ನೀಡಿದೆ.

_____ ದಿನಾಂಕದಂದು ಅಥವಾ ಅದಕ್ಕೂ ಮೊದಲು ಹದಿನೈದು (15) ದಿನಗಳೊಳಗಾಗಿ ಯಾವುದೇ ಸಂದರ್ಭದಲ್ಲಿ ಲಿಖಿತ ರೂಪದಲ್ಲಿ ಈ ಮೇಲ್ಕಂಡವುಗಳಿಗೆ ಉತ್ತರ ನೀಡುವಂತೆ ನಿಮಗೆ ಈ ಮೂಲಕ ನಿರ್ದೇಶಿಸಲಾಗಿದೆ.

ಜಿಲ್ಲಾಧಿಕಾರಿ .....

ದಿನಾಂಕ: .....

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹಾಂತಯ್ಯ ಎಸ್. ಹೊಸಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ-1).

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH